ಶನಿವಾರ, ಮೇ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 133 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಚರ್ಚೆ
ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಕಾಯಕಲ್ಪದ ಅಗತ್ಯ ಇದೆಯೇ?

‘ಮತಾಂತರ ನಿಷೇಧ: ಸುಗ್ರೀವಾಜ್ಞೆ ತಿರಸ್ಕರಿಸಿ’ 7

ಪಿಎಸ್‌ಐ: ಸಾಕ್ಷ್ಯಾಧಾರ ಸಂಗ್ರಹ ಸಿಐಡಿಗೆ ಸವಾಲು 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,794	15,782	₹51,770 (ಬೆಂಗಳೂರು)	₹60,400 (ಬೆಂಗಳೂರು)	77.55

ಎಸ್‌ಸಿ–ಎಸ್‌ಟಿ ಬಡ ಕುಟುಂಬಗಳಿಗೆ 75 ಯೂನಿಟ್‌ವರೆಗೆ ಶುಲ್ಕರಹಿತ

ಉಚಿತ ವಿದ್ಯುತ್: ಹಲವು ಷರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌ಟಿ) ಬಡ ಕುಟುಂಬಗಳಿಗೆ ಗೃಹ ಬಳಕೆಗೆ 75 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಪೂರೈಕೆಗೆ ಇಂಧನ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ. ಈ ಸೌಲಭ್ಯ ಪಡೆಯುವವರಿಗೆ ಹಲವು ಷರತ್ತುಗಳನ್ನೂ ವಿಧಿಸಿದೆ.

ಇಂಧನ ಇಲಾಖೆ ಮಾಹಿತಿ ಪ್ರಕಾರ, ರಾಜ್ಯದಲ್ಲಿ 75 ಯೂನಿಟ್‌ವರೆಗೆ ಗೃಹ ಬಳಕೆಗೆ ವಿದ್ಯುತ್ ಬಳಸುತ್ತಿರುವ ಒಟ್ಟು ಕುಟುಂಬಗಳ ಸಂಖ್ಯೆ 1.46 ಕೋಟಿ ಇದೆ. ಅವರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ 39,26,065 ಕುಟುಂಬಗಳಿವೆ. ಈ ಎಲ್ಲ ಬಡ ಕುಟುಂಬಗಳೂ 75 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪಡೆದರೆ ಇಂಧನ ಇಲಾಖೆಯಿಂದ ₹ 979 ಕೋಟಿ ಸಹಾಯಧನ ಪಾವತಿಸಬೇಕಾಗುತ್ತದೆ.

ಈವರೆಗೆ ಗ್ರಾಮೀಣ ಪ್ರದೇಶದ ಎಸ್‌ಸಿ ಮತ್ತು ಎಸ್‌ಟಿ ಕುಟುಂಬಗಳಿಗೆ ಗೃಹ ಬಳಕೆಗೆ 40 ಯೂನಿಟ್‌ಗಳವರೆಗೆ ಉಚಿತವಾಗಿ ವಿದ್ಯುತ್ ಒದಗಿಸಲಾಗುತ್ತಿತ್ತು. ಗ್ರಾಮೀಣ ಪ್ರದೇಶದಲ್ಲಿ ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಯೋಜನೆಯಡಿ 40 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಪಡೆಯುತ್ತಿರುವ ಎಸ್‌ಸಿ, ಎಸ್‌ಟಿ ಕುಟುಂಬಗಳಿಗೆ 75 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಪೂರೈಸುವುದಾಗಿ ಡಾ. ಬಾಬು ಜಗಜೀವನರಾಂ ಜಯಂತಿ (ಏಪ್ರಿಲ್ 5) ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದರು.

ಈ ಸೌಲಭ್ಯವನ್ನು ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಎಲ್ಲ ಕುಟುಂಬಗಳಿಗೂ 75 ಯೂನಿಟ್‌ವರೆಗೆ ಉಚಿತ ವಿದ್ಯುತ್‌ ಪೂರೈಸುವುದಾಗಿ ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ (ಏಪ್ರಿಲ್ 14) ಸಮಾರಂಭದಲ್ಲಿ ಮುಖ್ಯಮಂತ್ರಿ ಮತ್ತೊಮ್ಮೆ ಘೋಷಣೆ ಮಾಡಿದ್ದರು. ಅದರಂತೆ ಶುಕ್ರವಾರ ಆದೇಶ ಹೊರಡಿಸಲಾಗಿದೆ. ಮೇ 1 ರಿಂದಲೇ ಪೂರ್ವಾನ್ವಯವಾಗುವಂತೆ ಈ ಯೋಜನೆ ಜಾರಿಗೆ ಬಂದಿದೆ.

ಷರತ್ತುಗಳೇನು?: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದು, 75 ಯೂನಿಟ್‌ಗಳವರೆಗೆ ಗೃಹಬಳಕೆಗೆ ವಿದ್ಯುತ್ ಬಳಸುತ್ತಿರುವ ಕುಟುಂಬಗಳಷ್ಟೇ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

ಏಪ್ರಿಲ್ 30 ರ ಅಂತ್ಯಕ್ಕೆ ಬಾಕಿ ಇರುವ ವಿದ್ಯುತ್ ಬಿಲ್ ಅನ್ನು ಸಂಪೂರ್ಣವಾಗಿ ಪಾವತಿಸುವವರಿಗೆ ಮಾತ್ರ ಉಚಿತ ವಿದ್ಯುತ್‌ ಸೌಲಭ್ಯ ದೊರಕಲಿದೆ. ಯೋಜನೆ ವ್ಯಾಪ್ತಿಗೆ ಬರುವ ಎಲ್ಲ ಕುಟುಂಬಗಳೂ ತಮ್ಮ ವಿದ್ಯುತ್ ಸಂಪರ್ಕಕ್ಕೆ ಮೀಟರ್ ಅಳವಡಿಸುವುದು ಕಡ್ಡಾಯ. ಮೀಟರ್ ಓದಿ ವಿದ್ಯುತ್ ಬಳಕೆಯ ಪ್ರಮಾಣವನ್ನು ದಾಖಲಿಸುವುದೂ ಕಡ್ಡಾಯ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನೇರ ನಗದು ವರ್ಗಾವಣೆ: ಫಲಾನುಭವಿಗಳು ತಮ್ಮ ಆಧಾರ್ ಕಾರ್ಡ್ ಹಾಗೂ ಜಾತಿ ಪ್ರಮಾಣಪತ್ರವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಲ್ಲಿಸಬೇಕು. ತಮ್ಮ ಬ್ಯಾಂಕ್ ಖಾತೆಯ ಮಾಹಿತಿಯನ್ನೂ ಒದಗಿಸಬೇಕು. ಪ್ರತಿ ತಿಂಗಳು ಬಿಲ್ ಆದಾಗ ಗ್ರಾಹಕರು ಪೂರ್ಣ ಮೊತ್ತವನ್ನು ಪಾವತಿ ಮಾಡಬೇಕು. ನೇರ ನಗದು ವರ್ಗಾವಣೆ ಯೋಜನೆಯಡಿ ಸಹಾಯಧನ ನೀಡುವ ಮೂಲಕ ಬಿಲ್ ಮೊತ್ತವನ್ನು ಫಲಾನುಭವಿಗಳಿಗೆ ಮರುಪಾವತಿ ಮಾಡಲಾಗುತ್ತದೆ ಎಂದು ಇಂಧನ ಇಲಾಖೆ ತಿಳಿಸಿದೆ.

75 ಯೂನಿಟ್ ಮೀರಿದರೆ ಪೂರ್ಣ ಬಿಲ್

ಗ್ರಾಮೀಣ ಪ್ರದೇಶದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಿಪಿಎಲ್ ಕುಟುಂಬಗಳ ವಿದ್ಯುತ್ ಬಳಕೆ 75 ಯೂನಿಟ್ ಮೀರಿದರೆ ಅಂತಹ ಗ್ರಾಹಕರಿಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ನಿಗದಿಪಡಿಸಿದ ದರದಲ್ಲಿ ಪೂರ್ಣ ಬಿಲ್ ಮಾಡಬೇಕಾಗುತ್ತದೆ. ಬಿಲ್ ಮೊತ್ತವನ್ನು ಗ್ರಾಹಕರೇ ಪಾವತಿಸಬೇಕು’ ಎಂದು ಆದೇಶದಲ್ಲಿ ಷರತ್ತು ವಿಧಿಸಿದೆ.

ಸಹಾಯಧನದ ಅಂದಾಜು

₹694.15 ಕೋಟಿ
ಪರಿಶಿಷ್ಟ ಜಾತಿ

₹285.42 ಕೋಟಿ
ಪರಿಶಿಷ್ಟ ಪಂಗಡ

ಜನಪರ ಕಾರ್ಯಕ್ರಮಗಳ ಅನುಷ್ಠಾನ ವಿಳಂಬವಾಗಬಾರದು ಎಂಬ ಕಾರಣದಿಂದ ತಿಂಗಳೊಳಗೆ ಆದೇಶ ಹೊರಡಿಸಲಾಗಿದೆ

ವಿ. ಸುನೀಲ್ ಕುಮಾರ್
ಇಂಧನ ಸಚಿವ



ಪಶ್ಚಿಮ ದೆಹಲಿಯ ಮುಂಡ್ಕಾದ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ಶುಕ್ರವಾರ ಹೊತ್ತಿಕೊಂಡ ಬೆಂಕಿ ನಂದಿಸಲು ಅಗ್ನಿಶಾಮಕ ದಳದ ಸಿಬ್ಬಂದಿ ಹರಸಾಹಸಪಟ್ಟರು –ಪಿಟಿಐ ಚಿತ್ರ

ದೆಹಲಿ ಮೆಟ್ರೊ ನಿಲ್ದಾಣದ ಬಳಿಯ ಕಟ್ಟಡದಲ್ಲಿ ದುರಂತ

ಬೆಂಕಿ ಅವಘಡ: 27 ಮಂದಿ ಸಾವು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ದೆಹಲಿಯ ಮುಂಡ್ಕಾ ಮೆಟ್ರೊ ನಿಲ್ದಾಣ ಸಮೀಪದ ನಾಲ್ಕು ಅಂತಸ್ತಿನ ವಾಣಿಜ್ಯ ಕಟ್ಟಡದಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ಅಗ್ನಿ ದುರಂತದಲ್ಲಿ 27 ಮಂದಿ ಮೃತಪಟ್ಟಿದ್ದಾರೆ. ಗಾಯಗೊಂಡ 40ಕ್ಕೂ ಹೆಚ್ಚು ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೆಟ್ರೊದ 544ನೇ ಸಂಖ್ಯೆಯ ಪಿಲ್ಲರ್ ಬಳಿಯ ಕಟ್ಟಡದಲ್ಲಿ ಸಂಜೆ 4.40ರ ಸುಮಾರಿಗೆ ಈ ದುರಂತ ಸಂಭವಿಸಿದೆ. ಕೂಡಲೇ 30ಕ್ಕೂ ಹೆಚ್ಚು ಅಗ್ನಿಶಾಮಕ ವಾಹನಗಳಲ್ಲಿ ಸ್ಥಳಕ್ಕೆ ಧಾವಿಸಿದ ಸಿಬ್ಬಂದಿ, ಕಟ್ಟಡದಲ್ಲಿ ಸಿಲುಕಿದ್ದ 50ಕ್ಕೂ ಹೆಚ್ಚು ಜನರನ್ನು ರಕ್ಷಿಸಿದರು ಎಂದು ಪೊಲೀಸರು ತಿಳಿಸಿದರು.

ಕಟ್ಟಡದ 2ನೇ ಅಂತಸ್ತಿನ ಕೊಠಡಿಯಲ್ಲಿ ಅತಿ ಹೆಚ್ಚು ಸಾವು-ನೋವು ಸಂಭವಿಸಿದೆ. ಈ ಕೊಠಡಿಗೆ ಹೊರಗಿನಿಂದ ಬೀಗ ಹಾಕಲಾಗಿತ್ತು. ಕಟ್ಟಡದ ಮಾಲೀಕನನ್ನು ಬಂಧಿಸಿ, ತನಿಖೆ ಆರಂಭಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

‘ಬೆಂಕಿ ಅವಘಡ ನಡೆದ ಕಟ್ಟಡದ 2ನೇ ಅಂತಸ್ತಿನಲ್ಲಿ ಸುಮಾರು 150 ಮಂದಿಯಿದ್ದರು. ಇದರಲ್ಲಿ 70-90 ಮಂದಿಯನ್ನು ರಕ್ಷಿಸಲಾಯಿತು. ಕೆಲವರು ಕಟ್ಟಡದ ಮೇಲಿನಿಂದ ಜಿಗಿದರು. ಇನ್ನು ಕೆಲವರು ಹಗ್ಗದ ನೆರವಿನಿಂದ ಇಳಿದರು’ ಎಂದು ಪ್ರಾಣಾಪಾಯದಿಂದ ಪಾರಾದ ವ್ಯಕ್ತಿಯೊಬ್ಬರು ಹೇಳಿದರು.

₹2 ಲಕ್ಷ ಪರಿಹಾರ: ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪ್ರಧಾನಿ ಪರಿಹಾರ ನಿಧಿಯಿಂದ ₹2 ಲಕ್ಷ ಪರಿಹಾರ ಹಾಗೂ ಗಾಯಗೊಂಡವರಿಗೆ ₹50,000 ಪರಿಹಾರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ.

‘ಆ್ಯಸಿಡ್ ದಾಳಿ ಸಂತ್ರಸ್ತೆಯರಿಗೆ ವಸತಿ, ಆರ್ಥಿಕ ನೆರವು’

ಬೆಂಗಳೂರು: ರಾಜ್ಯದಲ್ಲಿ ಆ್ಯಸಿಡ್ ದಾಳಿಯಿಂದ ಸಂತ್ರಸ್ತರಾದ ಎಲ್ಲ ಮಹಿಳೆಯರಿಗೆ ಸರ್ಕಾರದಿಂದ ನಿವೇಶನ, ಮನೆ ಮತ್ತು ಸ್ವಯಂ ಉದ್ಯೋಗಕ್ಕೆ ತಲಾ ₹ 5 ಲಕ್ಷ ನೆರವು ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ಕಂದಾಯ ಇಲಾಖೆಯಿಂದ ಆಯೋಜಿಸಿದ್ದ ‘ಹಲೋ ಕಂದಾಯ ಸಚಿವರೇ’ ಸಹಾಯವಾಣಿ ಉದ್ಘಾಟನೆ ಮತ್ತು ವಿವಿಧ ಸಾಮಾಜಿಕ ಪಿಂಚಣಿ ಯೋಜನೆಗಳ ಫಲಾನುಭವಿಗಳಿಗೆ ಪರಿಷ್ಕೃತ ದರದ ಪಿಂಚಣಿ ಆದೇಶ ವಿತರಿಸಿದ ಬಳಿಕ ಅವರು ಮಾತನಾಡಿದರು.

7ನೇ ಪುಟ ನೋಡಿ

ಸ್ವಾಮೀಜಿ ವೇಷದಲ್ಲಿ ಸಿಕ್ಕಿಬಿದ್ದ ನಾಗೇಶ್ 7

ಸಂಘವಿರೋಧಿ ಕಾರ್ಯಕರ್ತರ ನೇಮಕಕ್ಕೆ ಕಾಂಗ್ರೆಸ್ ಚಿಂತನೆ

ಉದಯಪುರ: ದೇಶದಾದ್ಯಂತ ತಾಲ್ಲೂಕು ಮಟ್ಟದಲ್ಲಿ ಸಂಘ ವಿರೋಧಿ ಕಾರ್ಯಕರ್ತರನ್ನು ನೇಮಕ ಮಾಡಬೇಕು ಮತ್ತು ಅವರ ಮೂಲಕ ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ತಿರುಗೇಟು ನೀಡಬೇಕು ಎಂಬ ಪ್ರಸ್ತಾವವು ಕಾಂಗ್ರೆಸ್ ಪಕ್ಷದ ಚಿಂತನ ಶಿಬಿರದಲ್ಲಿ ಮಂಡನೆಯಾಗಿದೆ ಎಂದು ಮೂಲಗಳು ಹೇಳಿವೆ. 3A

ಕೇರಳ: 27ಕ್ಕೆ ಮುಂಗಾರು ಪ್ರವೇಶ

ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ಈ ಸಲ ವಾಡಿಕೆಗೆ ಮುನ್ನವೇ (ಇದೇ 27ಕ್ಕೆ) ಕೇರಳವನ್ನು ಪ್ರವೇಶಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ತಿಳಿಸಿದೆ. 9

‘19ಕ್ಕೆ ಎಸ್ಸೆಸ್ಸೆಲ್ಸಿ ಫಲಿತಾಂಶ’

ಮಡಿಕೇರಿ: ‘ಮಾರ್ಚ್, ಏಪ್ರಿಲ್‌ನಲ್ಲಿ ನಡೆದಿದ್ದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶವನ್ನು ಮೇ 19ರಂದು ಪ್ರಕಟಿಸಲಾಗುವುದು’ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಇಲ್ಲಿ ಶುಕ್ರವಾರ ಹೇಳಿದರು.

‘ಅಂದು ಬೆಳಿಗ್ಗೆ 10.30ಕ್ಕೆ ಫಲಿತಾಂಶ ಪ್ರಕಟವಾಗಲಿದೆ. ಸಂಜೆ ವೇಳೆಗೆ ರಾಜ್ಯದ ಎಲ್ಲ ಶಾಲೆಗಳಲ್ಲೂ ಫಲಿತಾಂಶ ದೊರೆಯಲಿದೆ. ಇಲಾಖೆ ವೆಬ್‌ಸೈಟ್‌ನಲ್ಲೂ ಪ್ರಕಟಿಸಲಾಗುವುದು’ ಎಂದು ತಿಳಿಸಿದರು.

‘ಕಲಿಕಾ ಚೇತರಿಕೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೇ 16ರಂದು ತುಮಕೂರಿನಲ್ಲಿ ಚಾಲನೆ ನೀಡುವರು. ಕಲಿಕಾ ಚೇತರಿಕೆ ವರ್ಷವಿಡೀ ನಡೆಯಲಿದೆ. ನಿಗದಿಯಂತೆ ಮೇ 16ರಿಂದಲೇ ಶಾಲೆ ಆರಂಭವಾಗಲಿದೆ’ ಎಂದು ಹೇಳಿದರು.



ನೆಲಮಂಗಲ ಸಮೀಪದ ಬಾವಿಕೆರೆಯಲ್ಲಿ ಶುಕ್ರವಾರ ನಡೆದ ‘ಜನತಾ ಜಲಧಾರೆ’ ಸಮಾರೋಪ ಸಮಾರಂಭದಲ್ಲಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ‘ಜನತಾ ಪರ್ವ ಮಿಷನ್– 123’ ಧ್ವನಿಸುರುಳಿ ಬಿಡುಗಡೆ ಮಾಡಿದರು. ಪಕ್ಷದ ರಾಜ್ಯ ಪ್ರಮುಖರ ಸಮಿತಿ ಅಧ್ಯಕ್ಷ ಬಂಡೆಪ್ಪ ಕಾಶೆಂಪೂರ, ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಶಾಸಕ ವೆಂಕಟರಾವ್ ನಾಡಗೌಡ ಮತ್ತು ಸಂಸದೀಯ ಮಂಡಳಿ ಅಧ್ಯಕ್ಷ ಎಚ್‌.ಕೆ. ಕುಮಾರಸ್ವಾಮಿ ಇದ್ದರು – ಪ್ರಜಾವಾಣಿ ಚಿತ್ರ

ಸುದ್ದಿ 3A

ಟ್ವಿಟರ್ ಖರೀದಿ ತಡೆಹಿಡಿದ ಮಸ್ಕ್ 13

‘63 ಲಕ್ಷ ಮನೆ ಒಡೆಯಲು ಬಿಜೆಪಿ ಸಿದ್ಧತೆ’ 12

‘ವಿಕ್ರಮಸಿಂಘೆ ನೇಮಕ ಜನರ ಆಶಯಕ್ಕೆ ವಿರುದ್ಧ’ 13



ಉತ್ತರಾಧಿಕಾರಿ ನೇಮಕಕ್ಕೆ ಸಮುದಾಯದ ಮುಖಂಡರಿಂದ ಶ್ರೀಗಳಿಗೆ ಪತ್ರ

ಸಿರಿಗೆರೆ, ಸಾಣೇಹಳ್ಳಿ ಶ್ರೀ ಪೀಠತ್ಯಾಗಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ



ಡಾ.ಶಿವಮೂರ್ತಿ ಶಿವಾಚಾರ್ಯ



ಪಂಡಿತಾರಾಧ್ಯ ಶಿವಾಚಾರ್ಯ

ದಾವಣಗೆರೆ: ‘60 ವರ್ಷಕ್ಕೆ ಪೀಠತ್ಯಾಗ ಮಾಡಬೇಕು ಎಂಬುದು ಸಿರಿಗೆರೆ ಮಠದ ಹಿರಿಯ ಗುರುಗಳಾದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಕನಸಾಗಿತ್ತು. ಅದು ನನಸಾಗಬೇಕು. ಈ ಬಗ್ಗೆ ಬೆಂಗಳೂರಿನಲ್ಲಿ ಚರ್ಚಿಸಲಾಗಿದೆ. ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹಾಗೂ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಇಬ್ಬರಿಗೂ ವಯಸ್ಸಾಗಿದೆ. ಪೀಠತ್ಯಾಗ, ಹೊಸಬರ ನೇಮಕಕ್ಕೆ ಅವರ ಮನವೊಲಿಸಲು ಶ್ರೀಗಳನ್ನು ಭೇಟಿ ಮಾಡಲಾಗುವುದು’ ಎಂದು ಸಮಾಜದ ಮುಖಂಡ, ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಈಚೆಗೆ ನಡೆದ ಸಭೆಯಲ್ಲಿ ಕೈಗೊಂಡ ನಿರ್ಧಾರದ ಬಗೆಗೆ ಅವರು ಶುಕ್ರವಾರ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು. ಸಭೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರಷ್ಟೇ ಅಲ್ಲದೆ ಸಚಿವ ಬಿ.ಸಿ. ಪಾಟೀಲ, ಉದ್ಯಮಿ ಅಣಬೇರು ರಾಜಣ್ಣ ಮೊದಲಾದವರು ಹಾಜರಿದ್ದರು.

3A ಪುಟ ನೋಡಿ

ಮಠಕ್ಕೆ ಸಂಬಂಧಿಸಿದ ವಿವಾದವನ್ನು ಇತ್ಯರ್ಥಪಡಿಸಿಕೊಳ್ಳಲು ಮುಖಂಡರು ಸಭೆ ಸೇರಿ ನಿರ್ಣಯ ಕೈಗೊಳ್ಳಲಾಗಿದೆ. ಪೀಠತ್ಯಾಗಕ್ಕೆ ಸಿದ್ಧರಿರುವುದಾಗಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ. ಸಿರಿಗೆರೆಯ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಮನವೊಲಿಸಬೇಕಿದೆ

ಬಿ.ಸಿ.ಪಾಟೀಲ, ಕೃಷಿ ಸಚಿವ

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಗರದಲ್ಲಿ ಇಂದು

ಅನ್ನಪೂರ್ಣಾಂಬ ಸಮೇತ ಶ್ರೀನಗರೇಶ್ವರಸ್ವಾಮಿಯವರ ಬ್ರಹ್ಮರಥೋತ್ಸವ: ಗಂಗೆ ಪೂಜೆ, ಧ್ವಜಾರೋಹಣ, ಲಲಿತ ಸಹಸ್ರ ನಾಮ, ಆಯೋಜನೆ–ಬೆಂಗಳೂರು ಆಯೋಧ್ಯಾ ನಗರದ ಶಿವಾಚಾರ ವೈಶ್ಯ ಸಮಿತಿ, ಸ್ಥಳ–ನಗರೇಶ್ವರಸ್ವಾಮಿ ದೇವಾ ಲಯದ ಆವರಣ, ನಗರ್ತಪೇಟೆ, ಬೆಳಿಗ್ಗೆ 8ರಿಂದ

'ರಾಗಿಕಣ'ಕ್ಕೆ ಐದರ ಸಂಭ್ರಮ: ಹರಟೆ, ದೇಶಿ ಹಾಡುಗಳು, ಕಾರ್ಯಾಗಾರ ಹಾಗೂ ಮಾವಿನ ಮೇಳ, ಸ್ಥಳ–ಶ್ರೀರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಆವರಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10ರಿಂದ

'ಭಾರತೀಯ ಸಾಂಪ್ರದಾಯಿಕ ಆಹಾರ ಪದ್ಧತಿ ಮತ್ತು ಆರೋಗ್ಯ' ಕುರಿತು ಜೀವನಶೈಲಿ ಶಿಕ್ಷಣ ಕಾರ್ಯಕ್ರಮ: ಉದ್ಘಾಟನೆ–ಶಿವಪ್ರಕಾಶಾನಂದ ಸ್ವಾಮೀಜಿ, ಅತಿಥಿಗಳು–ಟಿ.ಕೆ. ನಾರಾಯಣಪ್ಪ, ಎಂ.ಅನುರಾಧ, ಅಧ್ಯಕ್ಷತೆ–ಅಶೋಕ್ ಹಾರನಹಳ್ಳಿ, ಆಯೋಜನೆ–ಪೂರ್ಣಾಯು ಆಯುರ್ವೇದ ಕೇಂದ್ರ, ಸ್ಥಳ–ಪೂರ್ಣಾಯು ಧಾಮ, ಕೊಮ್ಮಘಟ್ಟ, ಕೆಂಗೇರಿ ಸಮೀಪ, ಬೆಳಿಗ್ಗೆ 10

ಲಕ್ಷ್ಮೀನರಸಿಂಹ ಜಯಂತಿ:ನಾದಸ್ವರ–ಮುನಿರತ್ನಂ ಜಿ. ಮತ್ತು ಎಂ.ನಾಗರಾಜ್, ಸಂಗೀತ ಕಾರ್ಯಕ್ರಮ–ಬಸವರಾಜ ಮುಗಳಖೋಡ, ಆಯೋಜನೆ, ಸ್ಥಳ–ಅಭಯ ಲಕ್ಷ್ಮೀನರಸಿಂಹ ಪಟ್ಟಾಭಿರಾಮ ಕಂಭದ ನರಸಿಂಹ ದೇವಸ್ಥಾನ, ತ್ಯಾಗರಾಜನಗರ, ಬೆಳಿಗ್ಗೆ 10ರಿಂದ

ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಘಟಿಕೋತ್ಸವ: ಅತಿಥಿ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಫಾದರ್ ಡಯೋನೈಸಿಯಸ್ ವಾಜ್, ಸ್ಥಳ–ಸಂಸ್ಥೆಯ ಲೊಯೊಲಾ ಸಭಾಂಗಣ, ಪ್ರಿಮ್‌ರೋಸ್ ರಸ್ತೆ, ಸಂಜೆ 4

ಕೆ.ಎಲ್.ಮಂಜುನಾಥ್ ಸಂಸ್ಮರಣೆ: ಸಾನ್ನಿಧ್ಯ– ನಿರ್ಮಲಾನಂದನಾಥ ಸ್ವಾಮೀಜಿ, ನುಡಿನಮನ–ಉದಯ್ ಹೊಳ್ಳ, ಎಚ್. ಕಾಂತರಾಜು, ಆಯೋಜನೆ–ಆದಿಚುಂಚನಗಿರಿ ಮಹಾಸಂಸ್ಥಾನಮಠ, ಸ್ಥಳ– ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಸಂಜೆ 5.30

ಬುದ್ಧ ಪೂರ್ಣಿಮ ಮತ್ತು ಕರ್ನಾಟಕ ಧ್ಯಾನ ಮಹಾಯಜ್ಞ: ಅತಿಥಿಗಳು–ಬಿ.ಎಸ್. ಯಡಿಯೂರಪ್ಪ, ಎಚ್.ಆರ್.ನಾಗೇಂದ್ರ, ಕೆ.ಪಿ.ಜೆ.ರೆಡ್ಡಿ, ಆಯೋಜನೆ ಮತ್ತು ಸ್ಥಳ–ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್, ಕನಕಪುರ ರಸ್ತೆ, ಸಂಜೆ 7

ನೆನಪಾದ ನಮ್ಮ ಚಂದ್ರಮ–ಪುಸ್ತಕಗಳ ಬಿಡುಗಡೆ ಮತ್ತು ಶ್ರಮಿಕರಿಗೆ ಸತ್ಕಾರ: ಅಧ್ಯಕ್ಷತೆ–ಅಗ್ರಹಾರ ಕೃಷ್ಣಮೂರ್ತಿ, ಉದ್ಘಾಟನೆ–ಕೆ.ಸಿ.ರಾಮಮೂರ್ತಿ, 'ಚಂದ್ರಮ' ಆಲ್ಬಂ ಬಿಡುಗಡೆ–ಸಿಂಧು ಚಂದ್ರ ಹೆಗಡೆ, ಅತಿಥಿಗಳು–ಕಾಳೇಗೌಡ ನಾಗವಾರ, ದಯಾ ಗಂಗನಘಟ್ಟ, ಆಯೋಜನೆ–ಸಪ್ನ ಬುಕ್ ಹೌಸ್, ಸಿ.ಜಿ. ಚಾರಿಟಬಲ್ ಟ್ರಸ್ಟ್, ಸ್ಥಳ–ತೆರಿಗೆ ಭವನ, ನಾಗರಬಾವಿ, ಬೆಳಿಗ್ಗೆ 11

ಕೋಟೆ ವೆಂಕಟರಮಣಸ್ವಾಮಿ ರಥೋತ್ಸವ ಇಂದು

ಕೆ.ಆರ್.ಪುರ: ಕೃಷ್ಣರಾಜಪುರದ ಪುರಾತನ ಪ್ರಸಿದ್ಧ ಕೋಟೆ ವೆಂಕಟರಮಣಸ್ವಾಮಿ ಬ್ರಹ್ಮರಥೋತ್ಸವ ಹದಿನಾರು ವರ್ಷದ ಬಳಿಕ ಶನಿವಾರ ನಡೆಯಲಿದೆ. ದೇವಸ್ಥಾನ ನಿರ್ಮಾಣವಾಗುತ್ತಿದ್ದರಿಂದ ಜಾತ್ರೆ ನಡೆದಿರಲಿಲ್ಲ. ಈ ವರ್ಷ ರಥೋತ್ಸವ ನಡೆಸಲು ಗ್ರಾಮಸ್ಥರು ಸಿದ್ಧತೆ ಮಾಡಿಕೊಂಡಿದ್ದಾರೆ. ಶನಿವಾರ ಮಧ್ಯಾಹ್ನ 12.05 ಗಂಟೆಗೆ ಸಚಿವ ಭೈರತಿ ಬಸವರಾಜ ವಿಶೇಷ ಪೂಜೆ ನೆರವೇರಿಸಿದ ಬಳಿಕ ಬ್ರಹ್ಮರಥೋತ್ಸವ ನಡೆಯಲಿದೆ.

ನಾಳೆ ಕರಗ ಮಹೋತ್ಸವ

ಬೆಂಗಳೂರು: ಕಲಾಸಿಪಾಳ್ಯದ ಆರ್ಮುಗಂ ಮೊದಲಿಯಾರ್ ರಸ್ತೆಯಲ್ಲಿರುವ ಧರ್ಮರಾಯಸ್ವಾಮಿ ಮತ್ತು ಪಾಂಚಾಲಿದೇವಿ ದೇವಸ್ಥಾನದಲ್ಲಿ ಇದೇ 15ರಂದು ಕರಗ ಉತ್ಸವ, ಅಗ್ನಿಕುಂಡ ಪ್ರವೇಶ ಮತ್ತು ರಥೋತ್ಸವ ನೆರವೇರಲಿವೆ.

15ರಂದು ಬೆಳಿಗ್ಗೆ 7.30ಕ್ಕೆ ಅಮ್ಮನವರಿಗೆ ಎಣ್ಣೆ ಸೀಗೇಕಾಯಿ ಸೇವೆ ನಡೆಯಲಿದೆ. ಸಂಜೆ 5.45ಕ್ಕೆ ಕರಗವು ಅಗ್ನಿಕುಂಡ ಪ್ರವೇಶ ಮಾಡಲಿದೆ. ನಂತರ ರಥೋತ್ಸವ ನಡೆದು, ಕಲಾಸಿಪಾಳ್ಯದ ಮುಖ್ಯ ಬೀದಿಗಳಿಗೆ ಕರಗ ಹೊರಡಲಿದೆ.

ಶ್ರೀಧರ್ಮರಾಯಸ್ವಾಮಿ ಶ್ರೀಪೆರುಮಾಳ್ ದೇವಸ್ಥಾನ ಟ್ರಸ್ಟ್ ವತಿಯಿಂದ ಮೇ 22ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, 16ರಂದು ವಸಂತೋತ್ಸವ, 20ರಂದು ಧರ್ಮರಾಯಸ್ವಾಮಿ ಪಟ್ಟಾಭಿಷೇಕ, 22ರಂದು ದೀಪಾರಾಧನೆ ಹಾಗೂ ಅನ್ನದಾನದ ಮೂಲಕ ಉತ್ಸವ ಸಂಪನ್ನಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜನತಾ ಜಲಧಾರೆ ಮಹಾಸಂಕಲ್ಪ ಸಮಾವೇಶದಲ್ಲಿ ಎಚ್.ಡಿ.ಕುಮಾರಸ್ವಾಮಿ

ಯಾರ ಹಂಗಿಲ್ಲದ ಅಧಿಕಾರ ನೀಡಿದರೆ ಸಮಗ್ರ ನೀರಾವರಿ

ಬೆಂಗಳೂರು: ಮೈತ್ರಿ ಸರ್ಕಾರದ ಸಹವಾಸ ಬೇಡ. ಬದಲಾಗಿ ಸ್ವತಂತ್ರ ಸರ್ಕಾರ ತರಲು ಸಂಕಲ್ಪ ಮಾಡೋಣ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಕರೆ ನೀಡಿದ್ದಾರೆ.

ನೆಲಮಂಗಲ ಸಮೀಪ ಶುಕ್ರವಾರ ಹಮ್ಮಿಕೊಂಡಿದ್ದ ಜನತಾ ಜಲಧಾರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಜೂನ್, ಜುಲೈ ತಿಂಗಳಲ್ಲಿ ಮತ್ತೊಂದು ಸುತ್ತಿನ ರಥಯಾತ್ರೆ ನಡೆಸುವುದಾಗಿ ಘೋಷಿಸಿದರು.'ಹಳ್ಳಿ, ಹಳ್ಳಿಗಳಲ್ಲಿ ರಥಯಾತ್ರೆ ನಡೆಸುತ್ತೇವೆ. ನಾನೇ ಜನರ ಮುಂದೆ ಬರುತ್ತೇನೆ' ಎಂದರು.

'ನಮ್ಮ ಪಕ್ಷದಿಂದಲೇ ಬೆಳೆದು ಹೋದವರು ಜೆಡಿಎಸ್ ಮುಗಿದೇ ಹೋಯಿತು ಎಂದಿದ್ದರು. ಆದರೆ ಜನತಾ ಜಲಧಾರೆ ಸಮಾವೇಶ ಅವರಿಗೆ ಉತ್ತರ ಕೊಟ್ಟಿದೆ' ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

'90 ವರ್ಷ ವಯಸ್ಸಿನಲ್ಲೂ ನಾಡಿನ ಜನರಿಗಾಗಿ ದೇವೇಗೌಡರು ಹೋರಾಟ ಮಾಡುತ್ತಿದ್ದಾರೆ. ರಾಜಕೀಯದ ಬೆಳವಣಿಗೆಗಳ ಪರಿಣಾಮವಾಗಿ ನಾನು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿ ಆದೆ. ಆದರೆ ಯಾವುದೇ ಕಾರ್ಯಕ್ರಮ ಕೊಡಲು ಸ್ವತಂತ್ರ ಅಧಿಕಾರ ಇರಲಿಲ್ಲ. ರೈತರ ಸಾಲಮನ್ನಾ ಮಾಡಲು ಮುಂದಾದಾಗ ನೋವು ಅನುಭವಿದ್ದು ನನಗೆ ಮಾತ್ರ ಗೊತ್ತು' ಎಂದರು.

'ಯಾವ ಟೀಕೆಗಳಿಗೂ ಹೆದರಬೇಕಿಲ್ಲ. ಹೃದಯದಿಂದ ಜನರ ಕೆಲಸ ಮಾಡಿ' ಎಂದು ಸಂಸದ ಪ್ರಜ್ವಲ್ ರೇವಣ್ಣ, ನಿಖಿಲ್ ಕುಮಾರಸ್ವಾಮಿ ಹಾಗೂ ಸೂರಜ್ ರೇವಣ್ಣ ಅವರಿಗೆ ಸಲಹೆ ನೀಡಿದರು.

ಜೆಡಿಎಸ್ ನಲ್ಲಿ ಟಿಕೆಟ್ ಸಿಗಬೇಕಾದರೆ ಹಣ ಕೊಡಬೇಕು ಎಂದು ಒಬ್ಬರು ಆರೋಪ ಮಾಡಿದರು.

ಮುಖ್ಯಾಂಶಗಳು

- 2023ರಲ್ಲಿ ರಾಜ್ಯದಲ್ಲಿ ಸ್ವತಂತ್ರ ಜೆಡಿಎಸ್ ಸರ್ಕಾರ
- ರಾಜ್ಯದ ಎಲ್ಲ ಸಮಸ್ಯೆಗಳಿಗೆ ಜೆಡಿಎಸ್ ಪರಿಹಾರ
- ನಾನು ಫಿನಿಕ್ಸ್‌ನಂತೆ ದೂಳಿನಿಂದ ಎದ್ದು ಬರುತ್ತೇನೆ: ಕುಮಾರಸ್ವಾಮಿ

ಆದರೆ ಅನ್ನದಾನಿ ಬಡವರಾದರೂ ಟಿಕೆಟ್ ಕೊಟ್ಟು ಚುನಾವಣಾ ಖರ್ಚನ್ನು ಪಕ್ಷ ಭರಿಸಿದೆ. ದೇವರು ನೋಡ್ತಾನೆ ಎಂಬ ಕನಿಷ್ಠ ತಿಳಿವಳಿಕೆ ಬೇಕು ಎಂದರು.

'ಕೊರೊನಾದಿಂದ ಜೆಡಿಎಸ್ ನಾಯಕರು ಹೊರ ಬಂದಿಲ್ಲ ಅಂತಾ ಇದ್ರು. ಅದಕ್ಕೆ ಕಾರಣ ಕೊರೊನಾದಿಂದ ಆದಂತಹ ಸಾವಿರಾರು ಜನರ ಸಾವು. ನಿಮಗೆ ತೊಂದರೆ ಆಗಬಾರದು ಅಂತ ಕಾರ್ಯಕ್ರಮ ಹಾಕಿಕೊಂಡಿರಲಿಲ್ಲ. ಬಿಜೆಪಿ, ಕಾಂಗ್ರೆಸ್ ನಾಯಕರಷ್ಟು ಅವಸರ ನಮಗೆ ಇರಲಿಲ್ಲ. ಕಳೆದ ತಿಂಗಳಿಂದ ಜಲಧಾರೆ ಕಾರ್ಯಕ್ರಮ ಆರಂಭ ಆಯ್ತು. ಅಂದಿನಿಂದ ಇಂದಿನವರೆಗೆ ನಮಗೆ ಸಾಥ್ ಕೊಟ್ಟಿದ್ದೀರಾ. ಮೈಸೂರಿನಲ್ಲಿ ಒಂದು ಸ್ಥಾನ ಬರಲ್ಲ ಎಂದು ಇಲ್ಲೇ ಬೆಳೆದು ಹೋದವರೇ ಹೇಳಿದರು. ಆದರೆ ಇವತ್ತು ನೀವು ಜಲಧಾರೆ ಸಮಾವೇಶದ ಮೂಲಕ ತೋರಿಸಿದ್ದಿರಾ' ಎಂದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

'ನನ್ನ ಕೊನೆಯ ಉಸಿರು ಇರುವವರೆಗೂ ನಿಮಗಾಗಿ ಜೀವನ ಇಟ್ಟಿರುತ್ತೇನೆ. ನಾನು ಈ ಮಣ್ಣಿಗೆ ಹೋಗೋದ್ರೊಳಗೆ ನಿಮ್ಮ ಹೃದಯದಲ್ಲಿ ನನಗೆ ಕೊಡುವ ಸ್ಥಾನ ಒಂದೇ' ಎಂದು ಹೇಳಿದರು.

'ಕೊರೊನಾದಿಂದ ಸಾವನ್ನಪ್ಪಿದ ಕುಟುಂಬಕ್ಕೆ ಐದು ಲಕ್ಷ ರೂಪಾಯಿ ಕೊಡುತ್ತೇವೆ ಅಂದರು. ಆದರೆ, ಇನ್ನೂ ಈ ಸರ್ಕಾರ ಕೊಟ್ಟಿಲ್ಲ. ನಿತ್ಯ ಜನ ಶಾಲೆ ಫೀಸ್ ಕಟ್ಟಲು, ಆಸ್ಪತ್ರೆಗಳಿಗೆ ಅಂತ ಎಷ್ಟು ಕಷ್ಟ ಪಡ್ತಾ ಇದ್ದಾರೆ ಎಂದು ಗೊತ್ತಿದೆ. ನಿತ್ಯ ಸಾಕಷ್ಟು ಜನರನ್ನು ನೋಡ್ತಾ ಇದ್ದೀನಿ. ಪಂಚರತ್ನ ಯೋಜನೆ ಹುಡುಗಾಟಿಕೆಗೆ ಮಾಡಿದ್ದಲ್ಲ. ನಿಮ್ಮಗಳ ಕಷ್ಟಗಳನ್ನು ನೋಡಿಯೇ ಮಾಡಿರೋದು' ಎಂದು ಹೇಳಿದರು.

'ಅಧಿಕಾರ ಬಿಟ್ಟು ದೇವೇಗೌಡರು ಬಂದ್ರು. ಫಿನಿಕ್ಸ್ ನಂತೆ ಎದ್ದು ಬರ್ತೀನಿ ಅಂತ ದೇವೇಗೌಡರು ಹೇಳಿದ್ದರು ಎಂದು ಪೂಜ್ಯರು ಹೇಳಿದರು. ಆ ಫಿನಿಕ್ಸ್ ಕುಮಾರಸ್ವಾಮಿ ಅಂದಿದ್ದರು. ಹೌದು, ಧೂಳಿನ ಫಿನಿಕ್ಸ್ ನಂತೆ ಎದ್ದು ಬರ್ತೀವಿ. 2023 ಕ್ಕೆ ಜನರ ಸಂಕಷ್ಟಕ್ಕೆ ಪರಿಹಾರ ಜನತಾ ದಳ' ಎಂದರು.

'ಯಾರೂ ನಾಯಕರನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ. ನಿಮ್ಮ ದುಡಿಮೆಯೇ ನಾಯಕತ್ವ ರೂಪಿಸುತ್ತದೆ. ರಾಜಕೀಯದ ಕೆಲ ಬೆಳವಣಿಗೆಯಿಂದ ಎರಡು ಭಾರಿ ಸಿಎಂ ಆದೆ. ಆದರೆ, ಸ್ವತಂತ್ರವಾದ ಸರ್ಕಾರ ಇರಲಿಲ್ಲ. ಅನುಕಂಪ ಗಿಟ್ಟಿಸಿ ಅಧಿಕಾರ ಪಡೆಯಬೇಕೆಂಬ ಉದ್ದೇಶ ಇಲ್ಲ. ಪಂಚರತ್ನ ಕಾರ್ಯಕ್ರಮದ ಬಗ್ಗೆ ಹುಡುಗಾಟಿಕೆಯಿಂದ ಹೇಳುತ್ತಿಲ್ಲ. ನಾಡಿನ ಪರ ಹೋರಾಟ ಮಾಡುವ ಯಾರಾದರೂ ಇದ್ದರೆ ಅದು ದೇವೇಗೌಡರು ಮಾತ್ರ' ಎಂದು ಹೇಳಿದರು.

'2023 ಕ್ಕೆ ನಾಡಿನ ಜನತೆಗೆ ಜೆಡಿಎಸ್ ಪರಿಹಾರವಾಗಲಿದೆ. ನಮ್ಮ ಪಕ್ಷ ಅಧಿಕಾರಕ್ಕೆ ಬರಲಿದೆ. ಕುರುಬ ಸೇರಿದಂತೆ ಎಲ್ಲಾ ಹಿಂದುಳಿದ ವರ್ಗಗಳ ಬೆನ್ನಿಗೆ ನಿಲ್ಲುತ್ತೇನೆ. 5ವರ್ಷದಲ್ಲಿ ಕಾರ್ಯ ಕ್ರಮಗಳನ್ನ ಅನುಷ್ಠಾನಗೊಳಿಸದೆ ಇದ್ದರೆ ನಿಮ್ಮ ಮುಂದೆ ಬರುವುದಿಲ್ಲ' ಎಂದು ನುಡಿದರು.

> 'ಸಾಮಾನ್ಯ ಕಡು ಬಡವರ ಜೀವನ ಕ್ಕೆ ಮುಡಿಪಾಗಿಡುತ್ತೇನೆ. ನನಗೆ ನೀವು ಸಹಕಾರ ಕೊಡಿ. 123 ಗುರಿ ಏನಿದೆ ಅದು ಮುಟ್ಟುತ್ತೇನೆ. ಸರ್ವ ಜನಾಂಗದ ಶಾಂತಿಯ ತೋಟ ಶಾಶ್ವತವಾಗಿ ಶಾಂತಿ, ನೆಮ್ಮದಿಯಿಂದ ಇರಲು ಜೆಡಿಎಸ್ ಅಧಿಕಾರಕ್ಕೆ ಬರಲೇ ಬೇಕು.
> ಐದು ವರ್ಷದಲ್ಲಿ ಈ ಕಾರ್ಯಕ್ರಮ ಕೊಡದೇ ಹೋದರೆ, ನಾನು ಎಂದೂ ನಿಮ್ಮ ಮುಂದೆ ಮತ ಕೇಳಲು ಬರಲ್ಲ' ಎಂದು ಕುಮಾರಸ್ವಾಮಿ ಹೇಳಿದರು.


ಜೆಡಿಎಸ್ ಆಯೋಜಿಸಿದ್ದ ಜನತಾ ಜಲಧಾರೆ ಸಮಾರೋಪ ಸಮಾರಂಭದಲ್ಲಿ ಮಾಜಿ ಪ್ರಧಾನಮಂತ್ರಿ ಎಚ್ ಡಿ ದೇವೇಗೌಡ, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್ ಡಿ ಕುಮಾರಸ್ವಾಮಿ, ನಂಜಾವಧೂತ ಸ್ವಾಮೀಜಿ, ಸಿ.ಎಂ. ಇಬ್ರಾಹಿಂ, ಶಾಸಕರಾದ ಬಂಡಪ್ಪ ಕಾಶಂಪುರ್ ಮತ್ತು ಎಚ್. ಡಿ. ರೇವಣ್ಣ ದೀಪ ಬೆಳಗುವ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿದರು


ಸ್ವಾಮೀಜಿ ಪಾದಮುಟ್ಟಿ ನಮಸ್ಕರಿಸಿದ ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ




ಜನಸಾಗರದ ಮುಂದೆ ಎಚ್‌ಡಿ ಕುಮಾರಸ್ವಾಮಿ ಘರ್ಜನೆ




ಜೆಡಿಎಸ್ ಶುಕ್ರವಾರ ಆಯೋಜಿಸಿದ್ದ ಜನತಾ ಜಲಧಾರೆ ಸಮಾರೋಪ ಸಮಾರಂಭದಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರು —ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್. ಜಿ

ಪ್ರವಾಹದಂತೆ ಹರಿದು ಬಂದ ಜನಸಾಗರ: ಬಹುಮತದ ಸ್ವತಂತ್ರ ಸರ್ಕಾರಕ್ಕೆ ಎಚ್‌ಡಿಕೆ ಶಪಥ

ಚುನಾವಣೆಗೆ ಜೆಡಿಎಸ್ 'ರಣಕಹಳೆ'

ಪ್ರಜಾವಾಣಿ ವಾರ್ತೆ

ನೆಲಮಂಗಲ: ನೀರಾವರಿ ವಿಷಯವನ್ನೇ 'ಅಸ್ತ್ರ'ವಾಗಿ ಮುಂದಿಟ್ಟುಕೊಂಡು ಜೆಡಿಎಸ್ 2023ರ ವಿಧಾನಸಭಾ ಚುನಾವಣೆಗೆ ರಣಕಹಳೆಯನ್ನು ಊದಿದೆ. ಏಪ್ರಿಲ್ 16 ರಿಂದ ಆರಂಭವಾದ 'ಜನತಾ ಜಲಧಾರೆ'ಯ ಸಮಾರೋಪವು ಶುಕ್ರವಾರ ಇಲ್ಲಿಗೆ ಸಮೀಪದ ಬಾವಿಕೆರೆಯಲ್ಲಿ ನಡೆಯಿತು.

ಭಾರಿ ಜನಸ್ತೋಮದ ಹರ್ಷೋದ್ಗಾರದ ನಡುವೆ ಸಂದೇಶ ನೀಡಿದ ಪಕ್ಷದ ಮುಖಂಡರು, ಜೆಡಿಎಸ್ ಕನ್ನಡಿಗರ ಪಕ್ಷ, ಕನ್ನಡಿಗರ ಹಕ್ಕುಗಳನ್ನು ಪಡೆಯಲು ಪ್ರಾದೇಶಿಕ ಪಕ್ಷವನ್ನು ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ತರುವ ಸಂಕಲ್ಪ ಮಾಡಬೇಕು ಎಂದು ಪ್ರತಿಪಾದಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಬೆಳಿಗ್ಗೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದರು. ಬಳಿಕ ತಮ್ಮ ತಂದೆ ಎಚ್.ಡಿ.ದೇವೇಗೌಡ ಮತ್ತು ತಾಯಿ ಚೆನ್ನಮ್ಮ ಅವರ ಆಶೀರ್ವಾದವನ್ನು ಪಡೆದು ಸಮಾರೋಪದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಎಚ್.ಡಿ. ಕುಮಾರಸ್ವಾಮಿ, 'ಎರಡೂ ಬಾರಿಯೂ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿ ಆಗಿದ್ದೆ. ಅದರ ಸಹವಾಸದಿಂದ ನಿಮಗಾಗಿ (ಕಾರ್ಯಕರ್ತರು) ನಾನು ಏನೂ ಮಾಡಲು ಸಾಧ್ಯವಾಗಲಿಲ್ಲ. ನನ್ನನ್ನು ಬೆಳೆಸಿದ ನೀವು ಯಾವುದೇ ಪದವಿಗೂ ಆಸೆ ಪಡಲಿಲ್ಲ. ಮುಂದಿನ ಚುನಾವಣೆಯಲ್ಲಿ ಸಂಪೂರ್ಣ ಬಹುಮತದ ಸ್ವತಂತ್ರ ಸರ್ಕಾರ ಅಧಿಕಾರಕ್ಕೆ ತರಲು ಶಪಥ ಮಾಡುತ್ತೇನೆ. ಕನ್ನಡಿಗರ ಭಾವನೆಗೆ ಸ್ಪಂದಿಸುವ ರೀತಿ ರಾಜ್ಯದಲ್ಲಿ ಸಮೃದ್ಧಿಯನ್ನು ತರುವ ಮತ್ತು ಸರ್ವಜನಾಂಗದ ಶಾಂತಿಯ ತೋಟವಾಗಿಸುವ ಸರ್ಕಾರವನ್ನು ತರೋಣ' ಎಂದು ಹೇಳಿದರು.

'ಮೈತ್ರಿ ಸರ್ಕಾರದ ಸಹವಾಸ ಬೇಡ. ಜೂನ್, ಜುಲೈ ತಿಂಗಳಲ್ಲಿ ಮತ್ತೊಂದು ಸುತ್ತಿನ ರಥಯಾತ್ರೆ ನಡೆಸುತ್ತೇನೆ. ನಮ್ಮ ಪಕ್ಷದಿಂದಲೇ ಬೆಳೆದು ಹೋದವರು ಜೆಡಿಎಸ್ ಮುಗಿದೇ ಹೋಯಿತು ಎಂದಿದ್ದರು. ಆದರೆ, ಮಹಾಸಂಕಲ್ಪ ಸಮಾವೇಶ ಅವರಿಗೆ ಉತ್ತರ ಕೊಟ್ಟಿದೆ' ಎಂದರು.

'ನಾನು ಈ ದೂಳಿನಿಂದ ಫಿನಿಕ್ಸ್‌ನಂತೆ ಮತ್ತೆ ಎದ್ದು ಬರುತ್ತೇನೆ. ನನ್ನ ಕೊನೆಯ ಉಸಿರುವವರೆಗೆ ಜನರ ಸೇವೆ ಮಾಡುತ್ತೇನೆ. ನಿಮ್ಮ ಹೃದಯದಲ್ಲಿ ನನಗೆ ಸ್ಥಾನ ಕೊಡಿ. ಐದು ವರ್ಷಗಳಲ್ಲಿ ಯೋಜನೆಗಳನ್ನು ರೂಪಿಸಿ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ನಾನು ನಿಮ್ಮ ಮುಂದೆ ಎಂದಿಗೂ ಮತ ಕೇಳಲು ಬರುವುದಿಲ್ಲ' ಎಂದು ಹೇಳಿದರು.

'ಜೆಡಿಎಸ್‌ನಲ್ಲಿ ಟಿಕೆಟ್ ಸಿಗಬೇಕಾದರೆ ಹಣ ಕೊಡಬೇಕು ಎಂದು ಒಬ್ಬರು ಆರೋಪ ಮಾಡಿದರು. ಆದರೆ, ಡಾ. ಅನ್ನದಾನಿ ಬಡವರಾದರೂ ಟಿಕೆಟ್ ಕೊಟ್ಟು ಚುನಾವಣಾ ಖರ್ಚನ್ನು ಪಕ್ಷ ಭರಿಸಿತು. ಮೈಸೂರಿನಲ್ಲಿ ಜೆಡಿಎಸ್‌ಗೆ ಒಂದು ಸ್ಥಾನವೂ ದೊರೆಯುವುದಿಲ್ಲ ಎಂದು ಇಲ್ಲೇ ಬೆಳೆದು ಹೋದವರೇ ಹೇಳಿದ್ದರು' ಎಂದು ಟೀಕಿಸಿದರು.

ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಮಾತನಾಡಿ, 'ಇಡೀ ನಾಡು ಒಂದು ಪಕ್ಷವಾಗಬೇಕು. ದೇವೇಗೌಡರು ಈ ಪಕ್ಷದ ನೇತೃತ್ವ ವಹಿಸಬೇಕು. ಆಗ ಮಾತ್ರ ನಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯ. ಆದರೆ,ನಮ್ಮಲ್ಲಿ ರಾಜಕೀಯ ಮೇಲಾಟವೇ ಹೆಚ್ಚು. ರಾಜಕೀಯೇತರವಾಗಿ ನಾವೆಲ್ಲ ಯೋಚಿಸಬೇಕಾಗಿದೆ' ಎಂದರು.

'ಮೇಕೆದಾಟು ಸಾಕಾರಕ್ಕೆ ಹೋರಾಟ'

'ಸ್ವತಂತ್ರವಾಗಿ ಮೇಕೆದಾಟು ಯೋಜನೆಗಾಗಿ ಜೆಡಿಎಸ್ ಹೋರಾಟ ನಡೆಸಲಿದೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

'ಜಾತ್ಯತೀತ ಆಶಯಗಳಿಗಾಗಿ ಹೋರಾಟ ಮಾಡಬೇಕಾಗಿದೆ. ಪ್ರಾದೇಶಿಕ ಪಕ್ಷವನ್ನು ಅಧಿಕಾರಕ್ಕೆ ತರಬೇಕು. ನಮ್ಮ ಪಕ್ಷವನ್ನು ಕುಗ್ಗಿಸುವ ಪ್ರಯತ್ನ ಹಲವು ಬಾರಿ ನಡೆದಿದೆ. ಪಕ್ಷವನ್ನು ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಈ ನೆಲದಿಂದಲೇ ನಮ್ಮ ಹೋರಾಟ ಆರಂಭವಾಗುತ್ತದೆ. ನನ್ನ ರಾಜಕೀಯ ಜೀವನದಲ್ಲಿ ಹಲವು ಏಳುಬೀಳುಗಳನ್ನು ಕಂಡಿದ್ದೇನೆ. ಹಲವು ಬಾರಿ ನೋವು ಅನುಭವಿಸಿದ್ದೇನೆ. ನಾನು ಎಲ್ಲ ಸಮುದಾಯಗಳಿಗೆ ರಾಜಕೀಯ ಶಕ್ತಿಯನ್ನು ನೀಡಿದ್ದೇನೆ' ಎಂದು ಹೇಳಿದರು.

'ಚುನಾವಣೆಗಾಗಿ ಅಶ್ವಮೇಧ ಯಾಗ'

'ದೇವೇಗೌಡರನ್ನು ಪ್ರಧಾನಿ ಹುದ್ದೆಯಿಂದ ಇಳಿಸಿದ ಕಾಂಗ್ರೆಸ್ ಗೆ ಅಂಟಿಕೊಂಡ ದರಿದ್ರತನ ಇನ್ನೂ ಬಿಟ್ಟಿಲ್ಲ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಟೀಕಿಸಿದರು.

'ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಸಂಕಲ್ಪವನ್ನು ಜೆಡಿಎಸ್ ಹೊಂದಿದೆ. 2023ರ ವಿಧಾನಸಭಾ ಚುನಾವಣೆಗಾಗಿ ಅಶ್ವಮೇಧ ಯಾಗ ಆರಂಭಿಸಿದ್ದೇವೆ. ನಮ್ಮ ಕುದುರೆ ಬಿಟ್ಟಿದ್ದೇವೆ. ಅರ್ಜುನನ ಹಾಗೆ ಕುಮಾರಸ್ವಾಮಿ ಇದ್ದಾರೆ. ದೇವೇಗೌಡರು ಕೃಷ್ಣನ ರೀತಿ ಇದ್ದಾರೆ. ರಥ ಓಡಿಸಲು ನಾವು ಸಾಬರು ಇದ್ದೇವೆ' ಎಂದರು.

ಸಮಾವೇಶದ ವೈಶಿಷ್ಟ್ಯಗಳು

- ವಾರಾಣಸಿಯಿಂದ ಬಂದಿದ್ದ 24 ಪಂಡಿತರ ತಂಡದಿಂದ ಆಕರ್ಷಕ ಗಂಗಾ ಆರತಿ
- ವಿಶಾಲ ಮೈದಾನದಲ್ಲಿ ನಡೆದ ಸಮಾವೇಶ
- ಮಂಡ್ಯ, ಹಾಸನ ಸೇರಿ ನಾಡಿನ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಬಂದಿದ್ದ ಕಾರ್ಯಕರ್ತರು
- 4 ಸಾವಿರ ಅಡಿ ವಿಸ್ತಾರವಾದ ಜಲಾಶಯ ಮಾದರಿಯ ಬೃಹತ್ ವೇದಿಕೆ.
- ಎಲ್ಲರಿಗೂ ಊಟದ ವ್ಯವಸ್ಥೆ
- ಬೆಳಿಗ್ಗೆಯಿಂದ ನೆಲಮಂಗಲದ ಬಾವಿಕೆರೆ ಯತ್ತ ಹೆಜ್ಜೆ ಹಾಕಿದ ಕಾರ್ಯಕರ್ತರು. ಜನಸಾಗರ ನೋಡಿ ಹರ್ಷ ವ್ಯಕ್ತಪಡಿಸಿದ ಎಚ್.ಡಿ. ದೇವೇಗೌಡರು.
- ಜೆಡಿಎಸ್ ಅಧಿಕಾರಕ್ಕೆ ಬಂದರೆ ಶಾಲೆ ಮತ್ತು ಆಸ್ಪತ್ರೆಗಳಲ್ಲಿ ದುಬಾರಿ ಶುಲ್ಕಕ್ಕೆ ಮುಕ್ತಿ ನೀಡುವ ಸಂದೇಶ ಸಾರುವ ಕಿರುವಿಡಿಯೊಗಳನ್ನು ಪ್ರದರ್ಶಿಸಲಾಯಿತು.
- ಶಿಕ್ಷಣ, ಆರೋಗ್ಯ, ರೈತ ಚೈತನ್ಯ, ಮಹಿಳಾ ಚೈತನ್ಯ, ಯುವ ಚೈತನ್ಯ ಒಳಗೊಂಡ ಪಂಚರತ್ನ ಯೋಜನೆಯ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ವ್ಯಕ್ತಿತ್ವ ಮತ್ತು ಸೇವಾ ಕಾರ್ಯ ಬಿಂಬಿಸುವ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು.
- ಜನಸಾಗರದತ್ತ ಕೈಬೀಸಿದ ನಿಖಿಲ್ ಕುಮಾರಸ್ವಾಮಿ ಮತ್ತು ಪ್ರಜ್ವಲ್ ರೇವಣ್ಣ ಜೋಡಿ.
- 187 ವಿಧಾನಸಭಾ ಕ್ಷೇತ್ರಗಳಲ್ಲಿ 6000 ಕಿಲೋ ಮೀಟರ್ ಸಂಚರಿಸಿದ ಜನತಾ ಜಲಧಾರೆ ಯಾತ್ರೆ.

ಸಂಘವಿರೋಧಿ ಕಾರ್ಯಕರ್ತರ ನೇಮಕಕ್ಕೆ ಕಾಂಗ್ರೆಸ್ ಚಿಂತನೆ

• ಶೆಮಿನ್ ಜಾಯ್

ಉದಯಪುರ: ದೇಶದಾದ್ಯಂತ ತಾಲ್ಲೂಕು ಮಟ್ಟದಲ್ಲಿ ಸಂಘವಿರೋಧಿ ಕಾರ್ಯಕರ್ತರನ್ನು ನೇಮಕ ಮಾಡಬೇಕು ಮತ್ತು ಅವರ ಮೂಲಕ ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ತಿರುಗೇಟು ನೀಡಬೇಕು ಎಂಬ ಪ್ರಸ್ತಾವವು ಕಾಂಗ್ರೆಸ್ ಪಕ್ಷದ ಚಿಂತನ ಶಿಬಿರದಲ್ಲಿ ಮಂಡನೆಯಾಗಿದೆ ಎಂದು ಮೂಲಗಳು ಹೇಳಿವೆ.

ಪಕ್ಷದ ಹಿರಿಯ ಮುಖಂಡ ಸಲ್ಮಾನ್ ಖುರ್ಶಿದ್ ಅವರ ನೇತೃತ್ವದ ಸಾಮಾಜಿಕ ನ್ಯಾಯ ಸಮಿತಿಯು ಈ ಪ್ರಸ್ತಾವವನ್ನು ಇರಿಸಿದೆ. ತಳಮಟ್ಟದಲ್ಲಿ ಪಕ್ಷವನ್ನು ಬಲಪಡಿಸಲು ಸಮಿತಿಯು ಮತ್ತಷ್ಟು ಸಲಹೆಗಳನ್ನು ನೀಡಿದೆ.

'ಪಕ್ಷದ ಹುದ್ದೆಗಳಲ್ಲಿ ಅರ್ಧದಷ್ಟು ಹುದ್ದೆಗಳನ್ನು ದಲಿತರು, ಬುಡಕಟ್ಟು ಸಮುದಾಯಗಳು, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ನೀಡಬೇಕು. ಲೈಂಗಿಕ ಅಲ್ಪಸಂಖ್ಯಾತರಿಗೂ ಪ್ರಾತಿನಿಧ್ಯ ನೀಡಬೇಕು. ಪಕ್ಷದ ಅಲ್ಪಸಂಖ್ಯಾತ ಘಟಕಗಳಲ್ಲಿ, ಮಹಿಳಾ ಕಾಂಗ್ರೆಸ್‌ನ ನಾಯಕತ್ವದ ಹುದ್ದೆಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚು ಕೆಲಸ ಮಾಡಿದ ಮಹಿಳಾ ಕಾರ್ಯಕರ್ತರಿಗೆ ಪಕ್ಷದ ಪ್ರಮುಖ ಸಮಿತಿಗಳಲ್ಲಿ ಪ್ರಾತಿನಿಧ್ಯ ನೀಡಬೇಕು ಎಂದು ಸಮಿತಿ ಶಿಫಾರಸು ಮಾಡಿದೆ' ಎಂದು ಮೂಲಗಳು ವಿವರಿಸಿವೆ.

'ದೇಶದಾದ್ಯಂತ ಸಾಮಾಜಿಕ ಸಮೀಕರಣವನ್ನು ಮರುರೂಪಿಸುವ ಸಲುವಾಗಿ ಸಮಗ್ರ ಮತ್ತು ವಿಸ್ತೃತ ಅಧ್ಯಯನದ ಅವಶ್ಯಕತೆ ಇದೆ. ದಲಿತರು, ಬುಡಕಟ್ಟು ಸಮುದಾಯಗಳು ಮತ್ತು ಅಲ್ಪಸಂಖ್ಯಾತರ ಅಸ್ಮಿತೆ, ಸಮಸ್ಯೆಗಳು ಮತ್ತು ರಾಜಕೀಯ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ವ್ಯವಸ್ಥಿತವಾಗಿ ಸಮೀಕ್ಷೆಗಳನ್ನು ನಡೆಸಬೇಕು. ಸಮೀಕ್ಷೆಯ ಹೊಳಹುಗಳನ್ನು ಎಐಸಿಸಿ, ಪಕ್ಷದ ರಾಜ್ಯ ಮತ್ತು ಜಿಲ್ಲಾ ಘಟಕಗಳ ಜತೆಗೆ ಹಂಚಿಕೊಳ್ಳಬೇಕು. ಈ ಮೂಲಕ ಚುನಾವಣೆಗೆ ಸಿದ್ಧತೆ ನಡೆಸಿಕೊಳ್ಳಬೇಕು. ಚಿಂತನ ಶಿಬಿರ ಮುಗಿದ ಒಂದು ವರ್ಷದ ಒಳಗೆ ಈ ಕೆಲಸ ಆಗಬೇಕು' ಎಂದು ಸಮಿತಿಯು ಶಿಫಾರಸು ಮಾಡಿದೆ.

'ಈ ಸಮೀಕ್ಷೆಗಳಿಂದ ದೊರೆತ ಮಾಹಿತಿಯ ಆಧಾರದಲ್ಲಿ ಪಕ್ಷದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ಘಟಕಗಳಲ್ಲಿ ಇರುವ ಕಾರ್ಯಕರ್ತರನ್ನು ಹುಡುಕಬೇಕು. ಅವರನ್ನು ಆರ್‌ಎಸ್‌ಎಸ್ ವಿರೋಧಿ ಕಾರ್ಯಕರ್ತರನ್ನಾಗಿ ನೇಮಕ ಮಾಡಬೇಕು' ಎಂದು ಸಮಿತಿ ಹೇಳಿದೆ.

ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ

ಮೀಸಲು ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ಕಡಿವಾಣ ಹಾಕಬೇಕಿದೆ ಎಂದು ಕಾಂಗ್ರೆಸ್‌ನ ಸಾಮಾಜಿಕ ನ್ಯಾಯ ಸಮಿತಿಯು ಹೇಳಿದೆ. 'ಇದಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲು ಕ್ಷೇತ್ರಗಳಲ್ಲಿ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮವನ್ನು ನಡೆಸಬೇಕು ಎಂದು ಸಮಿತಿ ಹೇಳಿದೆ' ಎಂದು ಮೂಲಗಳು ತಿಳಿಸಿವೆ.

'ಮತಗಟ್ಟೆ ಮಟ್ಟದಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸಬೇಕು. ಗ್ರಾಮ ಮಟ್ಟದಲ್ಲಿ ಈ ಸಮುದಾಯಗಳೊಂದಿಗೆ ಉತ್ತಮ ಸಂಬಂಧ ಹೊಂದಿರುವ ಕಾರ್ಯಕರ್ತರಿಗೆ ತಾಲ್ಲೂಕು ಮಟ್ಟದ ಪ್ರಾತಿನಿಧ್ಯ ನೀಡಬೇಕು ಎಂದು ಸಮಿತಿ ಹೇಳಿದೆ' ಎಂದು ಮೂಲಗಳು ಹೇಳಿವೆ.

ಸಿರಿಗೆರೆ, ಸಾಣೇಹಳ್ಳಿ ಶ್ರೀ ಪೀಠತ್ಯಾಗಕ್ಕೆ ಒತ್ತಾಯ

ಒಂದನೇ ಪುಟದಿಂದ...

ಸಿರಿಗೆರೆ ಶ್ರೀಗಳಿಗೆ ಪತ್ರ ಬರೆಯಲಾಗಿದ್ದು, ಖುದ್ದು ಚರ್ಚಿಸಲು ಸಮಯ ಕೇಳಲಾಗಿದೆ ಎಂದರು.

'ಸಮಾಜದಲ್ಲಿ ಅಶಾಂತಿ ಮೂಡಿದ್ದು, ಶಿಷ್ಯ ಸಮುದಾಯದಲ್ಲಿ ಗೊಂದಲವಿದೆ. ಈ ಗೊಂದಲ ನಿವಾರಿಸಬೇಕು. ಇಲ್ಲವಾದಲ್ಲಿ ಸಮಾಜದ ಮಹತ್ತರ ತೀರ್ಮಾನದ ಜೊತೆಗೆ ಪ್ರತಿಭಟಿಸಲಾಗುವುದು' ಎಂದು ಸಿರಿಗೆರೆ ಶ್ರೀಗಳಿಗೆ 'ಸಮಾಜದ ಮುಖಂಡರು' ಎಂಬ ಒಕ್ಕಣೆ ಇರುವ ಪತ್ರದಲ್ಲಿ ಎಚ್ಚರಿಸಲಾಗಿದೆ. ಈ ಪತ್ರದಲ್ಲಿ ಯಾರ ಹೆಸರುಗಳ ಉಲ್ಲೇಖವೂ ಇಲ್ಲ.

'ಪೀಠಕ್ಕೆ ಶಿಷ್ಯರು ಅನಿವಾರ್ಯವೇ ಹೊರತು ಪೀಠಾಧಿಪತಿಗಳಲ್ಲ. ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ತರಳಬಾಳು ಪೀಠಕ್ಕೆ ಸಂವಿಧಾನ ಹಾಕಿಕೊಟ್ಟಿದ್ದಾರೆ. ಇದಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳುವುದು ಕರ್ತವ್ಯ. ಹಿರಿಯ ಜಗದ್ಗುರುಗಳು ಹಾಕಿಕೊಟ್ಟ ಬುನಾದಿ, ಸಂಪ್ರದಾಯಗಳನ್ನು ಗಾಳಿಗೆ ತೂರಿ ಮನಬಂದಂತೆ ನಡೆದುಕೊಳ್ಳುತ್ತಿದ್ದೀರಿ. ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದ ಭಕ್ತರು ಒತ್ತಡ ಹಾಕಿದ್ದರಿಂದ ಸಭೆ ಕರೆಯಲಾಗಿತ್ತು' ಎಂದು ಪತ್ರದಲ್ಲಿ ತಿಳಿಸಲಾಗಿದೆ.

'ಸಮಾಜದಲ್ಲಿ ವಿವಾದಕ್ಕೆ ಒಳಗಾಗಿ, ಭಕ್ತರ ಚಿಂತನೆಗೀಡು ಮಾಡಿರುವ ಏಕವ್ಯಕ್ತಿ ಡೀಡ್ ಅನ್ನು ರದ್ದುಗೊಳಿಸಿ ಶಿವಕುಮಾರ ಸ್ವಾಮೀಜಿಗಳ ಬೈಲಾವನ್ನು ಯಥಾವತ್ತಾಗಿ ಜಾರಿಗೆ ತರಬೇಕು. ಹಿರಿಯ ಸ್ವಾಮೀಜಿ ಕಾಲದಲ್ಲಿ ಸಿರಿಗೆರೆ ನಾಡು ಕಂಡ ಅದ್ಭುತ ಮಠವಾಗಿತ್ತು. ಸಾಹಿತ್ಯ, ಸಾಂಸ್ಕೃತಿಕ, ಆರ್ಥಿಕ ಹಾಗೂ ಧಾರ್ಮಿಕವಾಗಿ ಛಾಪು ಮೂಡಿಸಿತ್ತು. ಆದರೆ ಇವೆಲ್ಲಾ ಕಣ್ಮರೆಯಾಗಿದೆ. ಉದಾಸೀನ ಮಾಡದೇ ಶಿಷ್ಯರ ಮೇಲೆ ಕೋಪ, ತಾಪ, ಆಕ್ರೋಶ ವ್ಯಕ್ತಪಡಿಸದೇ ಶಿಷ್ಯರು ಸಮಾಜದ ಆಸ್ತಿ ಎಂದು ಪರಿಗಣಿಸಿ ಶಿಷ್ಯರ ಮನೋಭಿಲಾಷೆಯಂತೆ ನಡೆದುಕೊಳ್ಳಿರಿ' ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆಗೆ ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನಿರಾಕರಿಸಿದರು. ಸಿರಿಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಜ್ಞಾನವಾಪಿ ಪ್ರಕರಣ: ಮಧ್ಯಂತರ ಆದೇಶಕ್ಕೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ವಾರಾಣಸಿಯ ಜ್ಞಾನವಾಪಿ – ಶೃಂಗಾರ ಗೌರಿ ಸಂಕೀರ್ಣಕ್ಕೆ ಸಂಬಂಧಿಸಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಮಧ್ಯಂತರ ಆದೇಶ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು.

ಆದರೆ, ಜ್ಞಾನವಾಪಿ ಸಂಕೀರ್ಣದ ಸಮೀಕ್ಷೆ ವಿರೋಧಿಸಿ ಮುಸ್ಲಿಮರು ಸಲ್ಲಿಸಿರುವ ಅರ್ಜಿಯ ವಿಚಾರಣೆಗೆ ಪಟ್ಟಿ ಮಾಡಲು ಕೋರ್ಟ್ ಸಮ್ಮತಿಸಿತು. ಶೀಘ್ರ ವಿಚಾರಣೆಗೆ ಪರಿಗಣಿಸಬೇಕೆಂಬ ಮನವಿಗೆ 'ನೋಡೋಣ' ಎಂದೂ ಪೀಠ ಪ್ರತಿಕ್ರಿಯಿಸಿತು.

'ಸದ್ಯ, ಈ ಬಗ್ಗೆ ನಮಗೆ ಏನೂ ತಿಳಿದಿಲ್ಲ. ಮಧ್ಯಂತರ ಆದೇಶ ನೀಡುವುದು ಹೇಗೆ? ಮೊದಲು ತಿಳಿಯುತ್ತೇವೆ ನೋಡೋಣ' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಹೇಳಿದರು.

ಸಹಕಾರ: ಜ್ಞಾನವಾಪಿ ಸಂಕೀರ್ಣದಲ್ಲಿ ಸ್ಥಗಿತಗೊಂಡಿದ್ದ ವಿಡಿಯೊ ಚಿತ್ರೀಕರಣ ಸಮೀಕ್ಷೆಯು ಶನಿವಾರ ಪುನರಾರಂಭವಾಗಲಿದೆ. ಸ್ಥಳೀಯ ನ್ಯಾಯಾಲಯವು ನಿಯೋಜಿಸಿದ ತಂಡದೊಂದಿಗೆ ಸಹಕರಿಸುವುದಾಗಿ ಮಸೀದಿ ಆಡಳಿತ ಸಮಿತಿ ಶುಕ್ರವಾರ ಹೇಳಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮೊಹಾಲಿ ಸ್ಫೋಟ: ಐವರ ಬಂಧನ

ಚಂಡೀಗಡ(ಪಿಟಿಐ): ಪಂಜಾಬ್‌ನ ಮೊಹಾಲಿಯಲ್ಲಿರುವ ಪೊಲೀಸ್ ಗುಪ್ತಚರ ವಿಭಾಗದ ಕೇಂದ್ರ ಕಚೇರಿ ಮೇಲೆ ರಾಕೆಟ್ ಚಾಲಿತ ಗ್ರೆನೇಡ್ (ಆರ್‌ಪಿಜಿ) ದಾಳಿ ನಡೆಸಿದ ಪ್ರಕರಣ ಸಂಬಂಧ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರೆಲ್ಲರಿಗೂ ಉಗ್ರ ಸಂಘಟನೆ ಬಬ್ಬರ್ ಖಲಸಾ ಇಂಟರ್‌ನ್ಯಾಷನಲ್ ಮತ್ತು ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಜೊತೆ ಸಂಪರ್ಕವಿದೆ ಎಂಬುದು ತಿಳಿದು ಬಂದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಖಾಲಿ ನಿವೇಶನದಲ್ಲಿ ಕಸ: ₹1 ಲಕ್ಷ ತನಕ ದಂಡ

ಬೆಂಗಳೂರು: ಯಲಹಂಕ ವಲಯದ ಬಡಾವಣೆಗಳ ಖಾಲಿ ನಿವೇಶನಗಳಲ್ಲಿ ಕಸದ ರಾಶಿ ಹೆಚ್ಚುತ್ತಿದ್ದು, ನಿವೇಶನ ಸ್ವಚ್ಛವಾಗಿಟ್ಟುಕೊಳ್ಳದಿದ್ದರೆ ₹50 ಸಾವಿರದಿಂದ ₹1 ಲಕ್ಷದ ತನಕ ದಂಡ ವಿಧಿಸಲಾಗುವುದುಎಂದುಬಿಬಿಎಂಪಿಎಚ್ಚರಿಸಿದೆ.

ಕೆಂಪೇಗೌಡ ವಾರ್ಡ್, ಚೌಡೇಶ್ವರಿ, ಅಟ್ಟೂರು, ಯಲಹಂಕ ನ್ಯೂ ಟೌನ್, ಜಕ್ಕೂರು, ಥಣಿಸಂದ್ರ, ಬ್ಯಾಟರಾಯನಪುರ, ಕೊಡಿಗೆಹಳ್ಳಿ, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ ಮತ್ತು ಕುವೆಂಪು ನಗರ ವಾರ್ಡ್‌ನ ನಿವಾಸಿಗಳು ಖಾಲಿ ನಿವೇಶನಗಳಲ್ಲಿನ ಕಸದ ರಾಶಿ ಮತ್ತು ಕಟ್ಟಡ ಅವಶೇಷಗಳನ್ನು ತೆರವುಗೊಳಿಸಿ ಶುಚಿತ್ವ ಕಾಪಾಡಿಕೊಳ್ಳಬೇಕು ಎಂದು ಯಲಹಂಕ ವಲಯದ ಜಂಟಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಮಿಷನರ್ ನೇಮಿಸಲು ಅರ್ಜಿ

ಮಥುರಾ (ಉತ್ತರಪ್ರದೇಶ) (ಪಿಟಿಐ): ಶ್ರೀ ಕೃಷ್ಣ ಜನ್ಮಭೂಮಿ- ಶಾಹಿ ಈದ್ಗಾ ಮಸೀದಿ ವಿವಾದದ ತ್ವರಿತ ವಿಚಾರಣೆಗೆ ಅಲಹಾಬಾದ್ ಹೈಕೋರ್ಟ್ ನಿರ್ದೇಶನ ನೀಡಿದ ಮರುದಿನವೇ, ಶೀಘ್ರವೇ ಹಿರಿಯ ಅಡ್ವೊಕೇಟ್ ಕಮಿಷನರ್ ನೇಮಿಸುವಂತೆ ಕೋರಿ ಮಥುರಾ ನ್ಯಾಯಾಲಯದಲ್ಲಿ ಶುಕ್ರವಾರ ಎರಡು ಅರ್ಜಿಗಳನ್ನು ಸಲ್ಲಿಸಲಾಗಿದೆ.

ಮಸೀದಿ ಸ್ಥಳದಲ್ಲಿ ಹಿಂದೂ ದೇವಾಲಯ ಇದ್ದಕುರುಹುಗಳನ್ನುಪರಿಶೀಲಿಸಲು,ಕುರುಹುಗಳನ್ನು ವಿರೂಪಗೊಳಿಸಲು ಅಥವಾ ನಾಶಪಡಿಸಲು ಅವಕಾಶ ನೀಡದಿರಲು ಶೀಘ್ರವೇ ಕಮಿಷನರ್ ಅವರನ್ನು ನೇಮಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

COMMERCIAL OFFICE Space For Rent opposite to Vijayanagar Metro Station 1st, 2nd Floor 500sft Each Call:7676900174 9620783186

COMMERCIAL BUILDING for RENT, J.P. Nagar II Phase, Basement & 3 Floors, Total 7,000 Sqft. Contact: 9449037775

R.T.NAGAR COMMERCIAL For RENT or LEASE @ C.B.I Road GF+3 Floor 5900 Sqft, 9482688688/ 9845004928

GROUND AND First Floor Commercial Space Available Immediately for Rent, off Meenakshi Koil Street, Shivaji Nagar, Bangalore. Contact: 9845328016, 9945591002.

PRIME COMMERCIAL Space total 16000sft near Vijayanagar Metro Station available for Rent. Ground + 3. Suitable for Banks, Supermarkets etc. Ph: 9845869155

COX TOWN Ground @ first floor ideal for bank, supermarket upto 6000sqft ct:9445097827

Flats

3 BHK Rent N.R. Greenwood Apartment. Generator, Swimming, Gym. Kaval Byrasandra, RT.Nagar Post. Contact; 9845016299.

MALLESWARAM: 3BHK Flat, 1600sft, Vitrified Tiles, Lift, Carparking. Rent Negotiable. (Vegetarians). 9845243757

House

INDIVIDUAL HOUSE, Ground Floor, 3 BHK, 1500 Sqft RENT Rs. 33000/- Basavanagudi, Bangalore. Call: 9108046572.

RENT: 2BHK GF, 1BHK 1st & 2nd Floor, Hanumanthnagar Semifurnished, Ready Occupation. Owner: 78925-30410/ 94488-09902

BUILDERS ESSENTIAL

Building Contractors

CONSTRUCT YOUR DREAM HOME AT LOWEST PRICE, BEAUTIFUL DESIGN, BEST QUALITY WITH TRUST. CONTACT: 9845583070

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

WE FIX LEAKING_ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS.9448572697

REAL ESTATE BUYING

Joint Development

General

REQUIRE LAND for JD / Purchase for Layout and Apartments. Agents, Please Excuse. Contact: 9663614614

Sites

BTM Layout

A KHATHA 1500 sft plot Arakere Hulimavu. Genuine Buyer. Brokers excuse. 9901626221

Multiple Locations

WANTED BDA Sites in Kanakapura Road Narayan Nagar BSK 6th Stage Judicial Layout Vakhil Layout Jayanagar Housing Co-Operative Society JP.Nagar 8th Phase 9th Phase Anjanapura Royal Pounty 30x40, 40x60 Contact: 9845059328/ 7676147245

Sadashiva Nagar

WANTED 40X60 site (or old house) in Sadhashiva Nagar. 40 feet road. Genuine buyer. Contact 9845295511.

Vishweshwariah Layout

WANTED BDA/ BBMP A/katha Vishweshwaraiah Layout Kengeri Upnagara surrounding 20x30 30x40 40x60 Immediate Registration Call: 9606226222/ 8431992589

WANTED SITES VISVESHWARAIAH LAYOUT, KEMPE GOWDA LAYOUT, NAGARBHAVI 30x40, 40x60, 50x80 Immediately Registration. Krishna: 9845488488

WANTED SITES Commercial/ Residential Vishweshwaraiah Layout, 100 Feet Road, Nagarabhavi, Vinayaka/ ITI/ RHCS Layout. 9901519025.

AVAILABLE/ WANTED 20x30, 30x40, 40x60, BDA Sites Nagarabhavi, Vishweshwariah, Banashankari, Kempegowda Layout Pracons Property 9902258767

JOB OPPORTUNITIES

Teachers/ Professors

ST.NORBERT SCHOOL Doddagubbi, Bangalore

TEACHERS WANTED

We are seeking outstanding teachers to help lead the transformation of young Norbians at St. Norbert School, Doddagubbi, Bangalore.

- B.Sc./M.SC., B.Ed. in Mathematics & Science
- B.A/M.A. B.Ed. in English, History & Civics or Social Sciences
- B.A/M.A. B.Ed. in Hindi & Kannada
- M.A/ M.SC. B.Ed. in Geography
- M.CA./ B.SC./ M.SC. B. ED. in Computer Applications
- B.P. ED/ M.P. ED in Physical Education
- B. FA in Fine Arts (Drawing, Music, Dance, Music instruments)

Interested candidates can apply with a resume to: Principal: principalstnorbertbangalore@gmail.com OR School Office: stnorbertschool4@gmail.com
Ph. +91 84 9499 2997

TEACHERS WANTED 1st to 8th Std, Sub: Science and Hindi Teachers Mavali Near Lalbagh Bangalore Good Salary: 9611165828

TEACHERS WANTED LKG To 10th Std Teachers, English Medium in all Subjects SAGAR CONVENT Kanakapura Main Road Bangalore- 82 Near APS Engineer College: 9342552428

Situation Required

REQUIRED COMPUTER Operator, cheque handling & table work job. In and around Nelamangala Tavarekere road. Call: 9964343227

Marketing & Sales

ECOPLANET ELEVATORS & ESCALATORS PVT LTD Looking ForMarketing Executive, Technicians & Helpers:- 9741639096/ 9591274266

Multiple Vacancy

OPPORTUNITY FOR Retired Officials, Bankers,NRI, Teachers, Professionals, Homemakers, CAs.Earn salary + Incentives. CALL: 8095301555

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

THE BANGALORE PRESS
(No.88, Mysore Road, Chamarajpet, Bangalore-18)
has opening for the below roles;

ROLE	REQUIREMENT
Marketing Officers	Matriculates. 1+ years experience in the field sales of consumer goods. Fluency in Kannada and English
Marketing Manager	4+ years experience in handling marketing and sales teams, preferably in FMCG company. Fluency in Kannada and English
Production Supervisor	2+ years experience in production unit, preferably a paper / book industry
Office Staff	Computer knowledge, including Microsoft Word, Excel, Fluency in Kannada & English

Please email details (including resume with your work experience and expected salary) to bangalorepressjobs@gmail.com

BUSINESS

Business to Business

Business

START_THREAD Business at Home_forTassels,Machine Embroideries.Dealer_enquiry solicited.Gemini Rayon_Embroidery Threads.Call:8095809223

GOLDEN OPPORTUNITY Looking for investors with ready funds of 3 to 5 Cr Bangalore in 2 acres on Kanakapura road NH 209/ 548. Proposal for petrol/ diesel/ fuel station along with CL7, Hotel, Restaurant. Call: 9035963540

Construction And Maintenance

CONSTRUCT YOUR DREAM HOUSE: SEMI FURNISHED Rs. 1,949/- sqft (Ground + 2) SVASTI CONSTRUCTIONS 9880438314

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PUBLIC NOTICE

ELCITA

TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore: 560 100 has invited tenders as detailed below:

Sl. no	Tender Name	Tender Number	Last date to apply	Closing timings
1	DESIGN,FABRICATE, SUPPLY, INSTALL SMART BUS-STOPS IN ELECTRONICS CITY, BANGALORE.	ELCITA/UD D/2022-- 23/Smart bus stops_1305	28/5/ 2022	5:00 PM

Details of the Tenders can be downloaded from the e-procurement website eproc.karnataka.gov.in under Urban Development Department- Electronics city Industrial Township Authority. Also details are available in www.elcita.in For queries Contact: 080-4660 2222 / write to: sustainability1@elcita.in

Electronics City Industrial Township Authority (ELCITA)
7 (P), West Phase, Electronics City, Bangalore: 560 100
Website: www.elcita.in
Phone: 080-4660 2222

EDUCATIONAL

Admission

JOIN BEFORE 31-5-2022. MOST INNOVATIVE UGC NAAC 'A' GRADE Government Recognised South Indian University. Examinations November 2022. MBA (20 Specialisations) MCA/M.Sc/ MA/ M.Com/BA/B.Com/BBA/ BCA/B.Sc. 100% Pass. LOWEST FEE EVER. Asha Academy, Bangalore. Ph: 9448460103/ 7093438248

PERSONAL

Change of Name

I, YOGESH BABU S, Residing at #256/1, 1st Cross, 1st Main, Sanjeevini Nagar Moodalpalya, Bengaluru - 560072. have changed my Minor Son's name from LIKHIL.Y To ADHVIK SURYA.Y.M born on 24/04/2020 vide affidavit dated 13.05.2022 before notary Gangaraju, Bengaluru

JURI SHARMA, Wife/o. 6492619X, HAV, BHAIRAB JYOTI SARMA, Vill- Changchaki, Dhakhin Changchaki Garubat Nagaon Assam changed name from JURI SHARMA to JURI BEZBORA, SARMA 13/05/2022 Notary K.V. Mani Bangalore

JC-672449W- SUB/MT- PATEL JAYESH KUMAR NATVAR BHAI at 502 ASC Bn, changed my minor son's name from TILAK KUMAR to PATEL TILAK KUMAR JAYESH BHAI notary K.V.Mani Bangalore.

ANITA W/O JC-672449W- SUB/MT- PATEL JAYESH KUMAR NATVAR BHAI R/a Jantral, Vijapur, Mehsana, Gujarat changed name from ANITA to PATEL ANITA BEN JAYESH BHAI notary K.V.Mani Bangalore.

14816818W HAV/MT ARVIND KUMAR 2ATC My MOTHER Name records BINDU KUMARI Instead of INDU DEVI Notary K.V MANI Bangalore

14833903P SEP/MT JADHAV GANESH SOPAN 2ATC My DAUGHTER Name records MANASVI Instead of MANASWI GANESH JADHAV Notary K.V MANI Bangalore

NARESH PAL, 6495907P, HAV/ASH, Vill- Rampuria, Rampura Ratan, Faridpur, Bareilly, Uttar Pradesh mother changed name from SMT PARAN DEVI to POORANA DEVI 13/05/2022 Notary K.V. Mani Bangalore

6396473X HAV RAJU RANJAN PRASAD 2ATC My FATHER Name records BRAMHA NAND Instead of BRAMHA NAND SAH Notary K.V MANI Bangalore

6396473X HAV RAJU RANJAN PRASAD 2ATC My MOTHER Name records TARA WATI DEVI Instead of TARAWATI DEVI Notary K.V MANI Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

14833916M SEP/MT ADINARAYANA SANAPATHI 2ATC My MOTHER Name records NOOKALAMMA Instead of SENAPATI NOOKALAMMA Notary K.V MANI Bangalore

RAMSE BAPU TULSIRAM, 6492531N, HAV, Vill- Pimpalgaon, Pachora, Jalgaon, Maharashtra, changed Son's name from PAWAN to PAWAN BAPU RAMSE 12/05/2022 Notary K.V. Mani Bangalore

RAMSE BAPU TULSIRAM, 6492531N, HAV, Vill- Pimpalgaon, Pachora, Jalgaon, Maharashtra, changed Son's name from LOKESH to LOKESH BAPU RAMSE 12/05/2022 Notary K.V. Mani Bangalore

GEETA DEVI W/O 14816763X HAV SANJAY KUMAR R/A FEROZEPUR BAGHOLA PALWAL HARYANAMY NAME GEETA DEVI TO GEETA RANA Notary K.V MANI Bangalore

6492636X HAV/MT MANOJ KUMAR 2ATC My MOTHER Name records MONVATI Instead of MONO Notary K.V MANI Bangalore

14833916M SEP/MT ADINARAYANA SANAPATHI 2ATC My FATHER Name records APPALA NAIDU Instead of SENAPATI APPALA NAIDU Notary K.V MANI Bangalore

Lost

DOCUMENT LOST
I, Hemanth. A, C/o. 83/05, Lakshmi Nilaya, Weavers Colony, Anekal, Bengaluru - 562 106 do hereby declare that, I have lost 3 Sale Deed documents pertaining to properties comes under Anekal Purasabha Maruthi Layout limits viz., 1), Site No.43 (Khata No. 540) and Site No.46, (Khata No. 543), 2) Anekal Rural Sy.No. 465/1B while travelling. A complaint was lodged on 05/05/2022 bearing No. 0215591/2022.
If anyone found the same, kindly contact: 96113 36708.

‘ಬಿಬಿಎಂಪಿ ನೌಕರರ ಸಂಘ ನೌಕರರ ಪ್ರತಿನಿಧಿಯಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ನೌಕರರ/ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ನೌಕರರನ್ನು ಪ್ರತಿನಿಧಿಸುವುದಕ್ಕೆ ಸಂಬಂಧಿಸಿದಂತೆ ಮಾನ್ಯತೆ ಪಡೆದಿಲ್ಲ. ಇದು ಅಧಿಕಾರಿಗಳನ್ನು ಅಥವಾ ನೌಕರರನ್ನು ಅಧಿಕೃತವಾಗಿ ಪ್ರತಿನಿಧಿಸುವುದಿಲ್ಲ’ ಎಂದು ಲಂಚಮುಕ್ತ ಕರ್ನಾಟಕ ನಿರ್ಮಾಣ ವೇದಿಕೆ ಆರೋಪಿಸಿದೆ.

‘ಬಿಬಿಎಂಪಿ ನೌಕರರು ಹಾಗೂ ಅಧಿಕಾರಿಗಳನ್ನು ಪ್ರತಿನಿಧಿಸುವ ಸಲುವಾಗಿ ಬಿಬಿಎಂಪಿ ನೌಕರರ/ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಮಾನ್ಯತೆ ನೀಡಿರುವ ಆದೇಶದ ಪ್ರತಿಯನ್ನು ನೀಡುವಂತೆ ಕೋರಿ ನಗರಾಭಿವೃದ್ಧಿ ಇಲಾಖೆಗೆ ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದ್ದೆ. ‘ಈ ವಿಚಾರ ತಮ್ಮ ವ್ಯಾಪ್ತಿಗೆ ಬರುವುದಿಲ್ಲ. ಬಿಬಿಎಂಪಿಗೆ ಅರ್ಜಿ ಸಲ್ಲಿಸಿ’ ಎಂದು ಅಧಿಕಾರಿಗಳು ಕೈತೊಳೆದುಕೊಂಡರು. ಬಿಬಿಎಂಪಿಗೆ ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದಾಗ ಅವರಿಂದಲೂ ಸಮರ್ಪಕ ಉತ್ತರ ಬಂದಿಲ್ಲ’ ಎಂದು ವೇದಿಕೆಯ ಅಧ್ಯಕ್ಷ ವಿಜಯ ರಾಘವ ಮರಾಠೆ ತಿಳಿಸಿದರು.

‘ಬಿಬಿಎಂಪಿ ನೌಕರರ/ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘವು ವೃತ್ತಿ ಸಂಘಗಳ ಕಾಯ್ದೆ 1926 ಹಾಗೂ ಅದರಡಿ 2019ರ ಜೂನ್ 27ರಂದು ನೋಂದಣಿಯಾದ ಮಾಹಿತಿಯನ್ನು ನೀಡಿದ್ದಾರೆ. ಆದರೆ, ಸಂಘವು ಬಿಬಿಎಂಪಿ ನೌಕರರು ಹಾಗೂ ಅಧಿಕಾರಿಗಳನ್ನು ಪ್ರತಿನಿಧಿಸುವ ಸಲುವಾಗಿ ನೀಡಿದ ಮಾನ್ಯತೆ ಪತ್ರವನ್ನು ಒದಗಿಸಿಲ್ಲ. ಬಿಬಿಎಂಪಿ ಮುಖ್ಯ ಆಯುಕ್ತರಿಂದ ಮಾನ್ಯತೆ ಪಡೆದ ಬಗ್ಗೆ ದಾಖಲೆಗಳನ್ನು ನೀಡಿಲ್ಲ’ ಎಂದು ಅವರು ತಿಳಿಸಿದ್ದಾರೆ.

ದುರುದ್ದೇಶದಿಂದ ಆರೋಪ: ‘ನೌಕರರ ಸಂಘಕ್ಕೆ ಸಹಕಾರ ಸಂಘದಿಂದ ಮಾನ್ಯತೆ ಸಿಕ್ಕಿದೆ. ಅದರ ಆಧಾರದಲ್ಲೇ ಚುನಾವಣೆ ಪ್ರಕ್ರಿಯೆ ನಡೆಸಿ ಪದಾಧಿಕಾರಿಗಳ ಆಯ್ಕೆ ಆಗಿದೆ. ಸಂಘದ ವಿರುದ್ಧ ದುರುದ್ದೇಶದಿಂದ ಆರೋಪ ಮಾಡಲಾಗಿದೆ. ನಮ್ಮ ಸಂಘಕ್ಕೂ ದೂರುದಾರರಿಗೂ ಸಂಬಂಧ ಇಲ್ಲ. ಮರಾಠೆ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇವೆ’ ಎಂದು ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ಪ್ರತಿಕ್ರಿಯಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಶೈಕ್ಷಣಿಕ ನಗರಗಳಲ್ಲಿ ಹಾಸ್ಟೆಲ್ ನಿರ್ಮಾಣ

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ‘ಅಥಣಿ ಬ್ರ್ಯಾಂಡ್’ನ ಚಪ್ಪಲಿಗಳನ್ನು ಬಿಡುಗಡೆ ಮಾಡಿದರು. ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಸಚಿವ ಗೋವಿಂದ ಕಾರಜೋಳ, ಮಾದಾರ ಚನ್ನಯ್ಯ ಸ್ವಾಮೀಜಿ, ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್‌ಲಿಂಗಣ್ಣ, ವ್ಯವಸ್ಥಾಪಕ ನಿರ್ದೇಶಕ ಎಚ್‌.ನಟರಾಜ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಬೆಳಗಾವಿ, ಕಲಬುರಗಿ, ಧಾರವಾಡ, ಮೈಸೂರು, ಬೆಂಗಳೂರು, ಮಂಗಳೂರು ಸೇರಿದಂತೆ ರಾಜ್ಯದ ಶೈಕ್ಷಣಿಕ ನಗರಗಳಲ್ಲಿ 1 ಸಾವಿರ ಮಂದಿ ಸಾಮರ್ಥ್ಯದ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯ ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಅರಮನೆ ಮೈದಾನದಲ್ಲಿ ಇದೇ 17ರವರೆಗೆ ಆಯೋಜಿಸಿರುವ ‘ಚರ್ಮ ಕುಶಲಕರ್ಮಿಗಳ ಸಮಾವೇಶ, ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ’ಕ್ಕೆ ಶುಕ್ರವಾರ ಚಾಲನೆ ನೀಡಿದರು.

‘ರೈತರಿಗೆ ಅಗತ್ಯವಿರುವ ಹಗ್ಗ, ಬಾರು ಕೋಲು ಸೇರಿದಂತೆ ಹಲವು ವಸ್ತುಗಳನ್ನು ಚರ್ಮ ಕುಶಲಕರ್ಮಿಗಳು ತಯಾರಿಸುತ್ತಾರೆ. ಇವರು ಈಗಿನ ಸ್ಥಿತಿಯಲ್ಲೇ ಮುಂದುವರಿದರೆ ಅಭಿವೃದ್ಧಿ ಸಾಧ್ಯವಿಲ್ಲ. ಆಧುನಿಕ ತಾಂತ್ರಿಕತೆ ಮೂಲಕ ಉತ್ಪನ್ನಗಳ ಉತ್ಪಾದನೆ ಹೆಚ್ಚಾಗಬೇಕು. ಈ ಸಮುದಾಯದ ಮಕ್ಕಳೂ ಉನ್ನತ ಶಿಕ್ಷಣ ಪಡೆದು ಸಮಾಜವನ್ನು ಮುನ್ನಡೆಸಬೇಕು’ ಎಂದರು.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ‘ರಾಜ್ಯದಲ್ಲಿ ಚರ್ಮ ಕೈಗಾರಿಕೆಯನ್ನೇ ಕುಲಕಸುಬಾಗಿ ನಂಬಿಕೊಂಡಿರುವ 50 ಸಾವಿರ ಕುಟುಂಬಗಳಿವೆ. ರಾಜ್ಯದಾದ್ಯಂತ ಚರ್ಮ ಕುಟೀರಗಳ ಸ್ಥಾಪನೆಗೆ ಸಹಕಾರ ನೀಡಲಾಗುವುದು’ ಎಂದು ಭರವಸೆ ನೀಡಿದರು.

ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ‘ಸ್ವಯಂಉದ್ಯೋಗ ಮಾಡುವ ಯುವಕರಿಗೆ ಸರ್ಕಾರ ಆರ್ಥಿಕವಾಗಿ ನೆರವಾಗುತ್ತಿದೆ. ನಿರುದ್ಯೋಗಿಯಾಗಿ ಅಲೆಯುವ ಬದಲು ಇಂತಹ ಉದ್ಯೋಗಗಳಲ್ಲಿ ತೊಡಗಿ’ ಎಂದರು.

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ‘ಚರ್ಮ ಕೈಗಾರಿಕೆಯನ್ನು ಚಮ್ಮಾರ ಅಥವಾ ಮಾದಿಗ ಸಮುದಾಯವರೇ ಮಾಡಬೇಕು. ಆದರೆ, ಪ್ರಸ್ತುತ ಬೇರೆಯವರ ಕೈಯಲ್ಲಿದೆ. ಚರ್ಮ ಕುಶಲಕರ್ಮಿಗಳು ಮುಂದೆ ಮನೆಯಲ್ಲೇ ಉದ್ಯಮ ನಡೆಸಲು ಸಾಲ ಸೌಲಭ್ಯ, ತರಬೇತಿ, ತಾಂತ್ರಿಕ ಮತ್ತು ಮಾರುಕಟ್ಟೆ ನೆರವಿನ ಅಗತ್ಯವಿದೆ’ ಎಂದರು.

ಕಾರ್ಯಕ್ರಮದಲ್ಲಿ ‘ಅಥಣಿ’ ಬ್ರ್ಯಾಂಡ್‌ನ ಚಪ್ಪಲಿಗಳನ್ನು ಅನಾವರಣಗೊಳಿಸಲಾಯಿತು. ಅಲ್ಲಿದ್ದ ನೂರಕ್ಕೂ ಹೆಚ್ಚು ಪ್ರದರ್ಶನ ಮಳಿಗೆಗಳಿಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಜನ ಭೇಟಿ ನೀಡಿದರು.

ದರೋಡೆಗೆ ಹೊಂಚು: ಆರೋಪಿಗಳ ಬಂಧನ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕರನ್ನು ಅಡ್ಡಗಟ್ಟಿ ದರೋಡೆ ಮಾಡಲು ಹೊಂಚು ಹಾಕಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಶಾಬಾಜ್ ಖಾನ್ (22), ತಬ್ರೇಜ್ ಖಾನ್ (24) ಜಾಫರ್ ಸಾದಿಕ್ (20) ಬಂಧಿತರು.’ ಎಂದು ಬಾಣಸವಾಡಿ ಪೊಲೀಸರು ಹೇಳಿದರು.

ವಿಚಾರಣೆ ವೇಳೆ ಮಾಹಿತಿ ನೀಡಿದ ಡಿವೈಎಸ್ಪಿ ಶಾಂತಕುಮಾರ್

ನೇಮಕಾತಿ ವಿಭಾಗವೇ ‘ಅಕ್ರಮ’ದ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಪೊಲೀಸ್ ನೇಮಕಾತಿ ವಿಭಾಗವೇ ಕೇಂದ್ರವಾಗಿದ್ದ ಸಂಗತಿ ಸಿಐಡಿ ತನಿಖೆಯಿಂದ ಹೊರಬಿದ್ದಿದ್ದು, ಇದೀಗ ಬಂಧಿಸಿರುವ ಡಿವೈಎಸ್ಪಿ ಶಾಂತಕುಮಾರ್ ಸಹ ಹಲವು ಮಾಹಿತಿ ಬಾಯ್ಬಿಟ್ಟಿದ್ದಾರೆ.

‘ಡಿವೈಎಸ್ಪಿ ಸೇರಿದಂತೆ ನೇಮಕಾತಿ ವಿಭಾಗದ ಐವರನ್ನು ಈಗಾಗಲೇ ಬಂಧಿಸಲಾಗಿದೆ. ಪಿಎಸ್‌ಐ ನೇಮಕಾತಿ ಬಯಸಿ ಅರ್ಜಿ ಸಲ್ಲಿಸುವುದರಿಂದ ಹಿಡಿದು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟವಾಗುವವರೆಗೂ ಅಕ್ರಮ ನಡೆದಿರುವ ಮಾಹಿತಿ ಇದೆ. ಈ ಬಗ್ಗೆ ಮತ್ತಷ್ಟು ಪುರಾವೆ ಸಂಗ್ರಹಿಸಬೇಕಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಅಕ್ರಮವಾಗಿ ಆಯ್ಕೆ ಆಗಲು ಹಣ ನೀಡಿದ್ದ ಅಭ್ಯರ್ಥಿಗಳ ಅನುಕೂಲಕ್ಕಾಗಿಪರೀಕ್ಷಾಕೇಂದ್ರಗಳನ್ನೇಬದಲಿಸಲಾಗಿದೆ. ಲಿಖಿತ ಪರೀಕ್ಷೆ ವೇಳೆ ಅಭ್ಯರ್ಥಿಗಳು ಖಾಲಿ ಬಿಟ್ಟಿದ್ದ ಒಎಂಆರ್ ಪ್ರತಿಯನ್ನು, ನೇಮಕಾತಿ ವಿಭಾಗದಲ್ಲೇ ಭರ್ತಿ ಮಾಡಲಾಗಿದೆ. ಜೊತೆಗೆ, ಕೆಲ ಒಎಂಆರ್ ಪ್ರತಿಗಳನ್ನು ಹೊರಗೆ ಕೊಟ್ಟು ತಿದ್ದಿಸಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

‘ಪ್ರಶ್ನೆ ಪತ್ರಿಕೆ ಸೋರಿಕೆ ಮಾಡುತ್ತಿದ್ದ ಬಗ್ಗೆಯೂ ಸಂಶಯವಿದ್ದು, ಆ ಆಯಾಮದಲ್ಲೂ ತನಿಖೆ ಮುಂದುವರಿದಿದೆ’ ಎಂದೂ ಹೇಳಿವೆ.

ಡಿವೈಎಸ್ಪಿ ಹಿಡಿತದಲ್ಲಿ ವಿಭಾಗ: ‘ತಂತ್ರಜ್ಞಾನದಲ್ಲಿ ಪರಿಣಿತನಾಗಿದ್ದ ಡಿವೈಎಸ್ಪಿ ಶಾಂತಕುಮಾರ್, ವಿಭಾಗದ ಹಿರಿಯರಿಂದ ಕಿರಿಯರವರೆಗೂ ಹಿಡಿತದಲ್ಲಿ ಇಟ್ಟುಕೊಂಡಿದ್ದ. ಆತ ಹೇಳಿದ ರೀತಿಯಲ್ಲೇ ಎಲ್ಲರೂ ಕೆಲಸ ಮಾಡುತ್ತಿದ್ದರು. ಜೊತೆಗೆ, ತನಗೆ ಬೇಕಾದವರನ್ನು ಆತ ನಿಯೋಜನೆ ಮೇರೆಗೆ ವಿಭಾಗಕ್ಕೆ ಕರೆಸಿಕೊಳ್ಳುತ್ತಿದ್ದ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

‘ವಿಭಾಗದ ತಂತ್ರಜ್ಞಾನ ನಿರ್ವಹಣೆ ಜವಾಬ್ದಾರಿಯನ್ನು ಖಾಸಗಿ ಕಂಪನಿಗೆ ವಹಿಸಲಾಗಿತ್ತು. ಕಂಪನಿ ಪ್ರತಿನಿಧಿಗಳು ಸಹ ಶಾಂತಕುಮಾರ್ ಹೇಳಿದಂತೆ ಕೇಳುತ್ತಿದ್ದರು. ಅಕ್ರಮದಲ್ಲಿ ಅವರೂ ಭಾಗಿಯಾಗಿರುವ ಮಾಹಿತಿ ಇದ್ದು, ಪರಿಶೀಲಿಸಲಾಗುತ್ತಿದೆ’ ಎಂದೂ ಹೇಳಿವೆ.

ಶಾಂತಕುಮಾರ್ ಬಂಧಿಸದಂತೆ ಒತ್ತಡ: ಜಗ್ಗದ ಸಿಐಡಿ

ಪ್ರಕರಣದ ವಿಚಾರಣೆಗಾಗಿ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಸಿಐಡಿ ಕಚೇರಿಗೆ ಗುರುವಾರ ಬೆಳಿಗ್ಗೆ ಕರೆಸಿದ್ದ ಅಧಿಕಾರಿಗಳು, ಸಂಜೆಯವರೆಗೂ ವಿಚಾರಣೆ ನಡೆಸಿದ್ದರು. ನಂತರ, ‘ನಿಮ್ಮನ್ನು ಬಂಧಿಸಿದ್ದೇನೆ. ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ’ ಎಂದು ಸಿಐಡಿ ಅಧಿಕಾರಿಗಳು ಹೇಳಿದ್ದರೆಂದು ಗೊತ್ತಾಗಿದೆ.

ಅದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಶಾಂತಕುಮಾರ್, ‘ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಕರೆದಿದ್ದಕ್ಕೆ ವಿಚಾರಣೆಗೆ ಬಂದಿದ್ದೇನೆ. ಎಲ್ಲಿಯೂ ತಪ್ಪಿಸಿಕೊಂಡು ಹೋಗಿಲ್ಲ’ ಎಂದಿದ್ದರು. ಸಿಐಡಿ ಅಧಿಕಾರಿಗಳು ಪುರಾವೆಗಳನ್ನು ತೋರಿಸುತ್ತಿದ್ದಂತೆ, ‘ನನ್ನನ್ನು ಬಂಧಿಸಬಹುದು. ಆದರೆ, ಪೊಲೀಸ್ ಇಲಾಖೆಯ ಘಟಾನುಘಟಿಗಳು ಹಾಗೂ ರಾಜಕೀಯದ ಪ್ರಭಾವಿಗಳನ್ನು ಬಂಧಿಸಲು ಸಾಧ್ಯವೇ’ ಎಂದು ಪ್ರಶ್ನಿಸಿದ್ದರು. ‘ಪುರಾವೆ ಸಿಕ್ಕರೆ ಯಾರನ್ನೂ ಬಿಡುವುದಿಲ್ಲ’ ಎಂದು ಸಿಐಡಿ ಅಧಿಕಾರಿಗಳು ಖಡಕ್ ಉತ್ತರ ನೀಡಿದರೆಂದು ಮೂಲಗಳು ಹೇಳಿವೆ.

‘ಶಾಂತಕುಮಾರ್ ಸಿಐಡಿ ವಶದಲ್ಲಿದ್ದಾರೆ’ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಕೆಲ ಪ್ರಭಾವಿಗಳು, ಹಿರಿಯ ಅಧಿಕಾರಿಗಳ ಮೇಲೆ ಒತ್ತಡ ತರಲು ಯತ್ನಿಸಿದ್ದರೆಂದು ತಿಳಿದುಬಂದಿದೆ. ಅದಕ್ಕೆ ಜಗ್ಗದ ಸಿಐಡಿ ಅಧಿಕಾರಿಗಳು, ‘ಪ್ರಕರಣ ಭೇದಿಸಲು ಹಗಲಿರುಳು ಕೆಲಸ ಮಾಡುತ್ತಿದ್ದೇವೆ. ಪುರಾವೆ ಇದ್ದರೂ ಶಾಂತಕುಮಾರ್ ಅವರನ್ನು ಬಿಟ್ಟು ಕಳುಹಿಸಿದರೆ, ತನಿಖಾ ತಂಡದ ಮನೋಸ್ಥೈರ್ಯ ಕುಂದುತ್ತದೆ. ಇದು ತನಿಖೆ ಮೇಲೆ ಪ್ರಭಾವ ಬೀರುತ್ತದೆ’ ಎಂಬುದಾಗಿ ಹೇಳಿ, ಶಾಂತಕುಮಾರ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಸಾಲ ಪಾವತಿಸದಿದ್ದಕ್ಕೆ ಜಗಳ: ಸ್ನೇಹಿತನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲದ ತಿಂಗಳ ಕಂತು ಪಾವತಿಸುವ ವಿಚಾರವಾಗಿ ನಡೆದ ಜಗಳದಲ್ಲಿ ಜಯಕುಮಾರ್ (31) ಅವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಸ್ನೇಹಿತ ರಾಹೀಲ್‌ನನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

‘ಥಣಿಸಂದ್ರದ ನಿವಾಸಿ ಜಯಕುಮಾರ್, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಪತ್ನಿ ಹಾಗೂ ಮಕ್ಕಳ ಜೊತೆ ವಾಸವಿದ್ದರು. ಅವರ ಕೊಲೆ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ರಾಹೀಲ್‌ನನ್ನು ಬಂಧಿಸಲಾಗಿದೆ’ ಎಂದು ಬಾಣಸವಾಡಿ ಪೊಲೀಸರು ಹೇಳಿದರು.

‘ಪದವೀಧರನಾದ ಆರೋಪಿ ರಾಹೀಲ್, ಕಾಚರಕನಹಳ್ಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಸ್ನೇಹಿತರ ಜೊತೆ ವಾಸವಿದ್ದ. ಕೆಲ ವರ್ಷಗಳ ಹಿಂದೆಯಷ್ಟೇ ಆತನಿಗೆ ಜಯಕುಮಾರ್ ಪರಿಚಯವಾಗಿತ್ತು. ಸ್ನೇಹಿತರಾಗಿದ್ದ ಇಬ್ಬರೂ ಪಾಲುದಾರಿಕೆಯಲ್ಲಿ ಹೋಟೆಲ್ ತೆರೆಯಲು ಮುಂದಾಗಿದ್ದರು.’

‘ಹೋಟೆಲ್ ತೆರೆಯುವುದಕ್ಕಾಗಿ ಜಯಕುಮಾರ್ ತಮ್ಮ ಪತ್ನಿ ಹೆಸರಿನಲ್ಲಿ ಬ್ಯಾಂಕ್‌ನಿಂದ ₹ 19 ಲಕ್ಷ ವೈಯಕ್ತಿಕ ಸಾಲ ಪಡೆದಿದ್ದರು. ರಾಹೀಲ್ ಹಾಗೂ ಜಯಕುಮಾರ್ ಇಬ್ಬರೂ ಸೇರಿ ತಿಂಗಳ ಕಂತು ಪಾವತಿಸುವಂತೆ ಮಾತುಕತೆ ಆಗಿತ್ತು. ಕೆಲ ತಿಂಗಳು ಕಂತು ಪಾವತಿಸಿದ್ದ ರಾಹೀಲ್, ಮೇ ತಿಂಗಳ ಕಂತು ತುಂಬಿರಲಿಲ್ಲ. ಇದರಿಂದ ಜಯಕುಮಾರ್ ಸಿಟ್ಟಾಗಿದ್ದರು’ ಎಂದೂ ಪೊಲೀಸರು ತಿಳಿಸಿದರು.

‘ರಾಹೀಲ್ ವಾಸವಿದ್ದ ಫ್ಲ್ಯಾಟ್‌ಗೆ ಗುರುವಾರ ಹೋಗಿದ್ದ ಜಯಕುಮಾರ್, ತಿಂಗಳ ಕಂತು ಪಾವತಿಸುವಂತೆ ಪಟ್ಟು ಹಿಡಿದಿದ್ದರು. ಹಣವಿಲ್ಲವೆಂದು ರಾಹೀಲ್ ಹೇಳಿದ್ದ. ಮಾತಿಗೆ ಮಾತು ಬೆಳೆದು ಇಬ್ಬರ ನಡುವೆ ಜಗಳ ಶುರುವಾಗಿತ್ತು. ಇದೇ ಸಂದರ್ಭದಲ್ಲೇ ಆರೋಪಿ, ತರಕಾರಿ ಕತ್ತರಿಸುವ ಚಾಕುವಿನಿಂದ ಜಯಕುಮಾರ್ ಎದೆಯ ಎಡಭಾಗಕ್ಕೆ ಇರಿದಿದ್ದರು. ಮಧ್ಯಪ್ರವೇಶಿಸಿದ್ದ ಸ್ನೇಹಿತರು, ಜಗಳ ಬಿಡಿಸಿದ್ದರು’ ಎಂದೂ ಹೇಳಿದರು.

ಮಲಗಿದ್ದಲ್ಲೇ ಸಾವು: ‘ಚಾಕು ಇರಿತದ ಬಳಿಕ ಜಯಕುಮಾರ್, ಫ್ಲ್ಯಾಟ್‌ನಲ್ಲೇ ಮಲಗಿದ್ದರು. ಅವರನ್ನು ಆಸ್ಪತ್ರೆಗೆ ಸೇರಿಸಲು ಸ್ನೇಹಿತರು ಸಹ ಪ್ರಯತ್ನಿಸಿರಲಿಲ್ಲ’ ಎಂದು ಪೊಲೀಸರು ತಿಳಿಸಿದರು.

‘ಸ್ವಲ್ಪ ಹೊತ್ತಿನ ಬಳಿಕ ಸ್ನೇಹಿತರು, ಜಯಕುಮಾರ್ ಅವರನ್ನು ಎಬ್ಬಿಸಲು ಹೋಗಿದ್ದರು. ಆದರೆ, ಎದ್ದಿರಲಿಲ್ಲ. ಕೂಡಲೇ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ ವೈದ್ಯರು, ರಕ್ತಸ್ರಾವದಿಂದ ಜಯಕುಮಾರ್ ಮೃತಪಟ್ಟಿರುವುದಾಗಿ ಹೇಳಿದರು’ ಎಂದೂ ವಿವರಿಸಿದರು.



ಮೃತದೇಹವಿದ್ದ ಕಾರು

ರಸ್ತೆ ಪಕ್ಕದಲ್ಲಿದ್ದ ಕಾರಿನಲ್ಲಿ ಮೃತದೇಹ

ಬೆಂಗಳೂರು: ರಾಜಾಜಿನಗರ ಕೈಗಾರಿಕಾ ಪ್ರದೇಶದ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಕಾರಿನಲ್ಲಿ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾಗಿದ್ದು, ಈ ಬಗ್ಗೆ ಮಾಗಡಿ ರಸ್ತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘4ನೇ ಅಡ್ಡರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದ ಅಂಬಾಸಿಡರ್ ಕಾರಿನಿಂದ ಶುಕ್ರವಾರ ದುರ್ವಾಸನೆ ಬರುತ್ತಿತ್ತು. ಅನುಮಾನಗೊಂಡ ಸ್ಥಳೀಯರು, ಕಾರಿನ ಬಳಿ ಹೋಗಿ ನೋಡಿದಾಗ ಮೃತದೇಹ ಕಂಡಿತ್ತು. ನಂತರ ಠಾಣೆಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಆರು ದಿನಗಳ ಹಿಂದೆ ವ್ಯಕ್ತಿ ಮೃತಪಟ್ಟಿರುವ ಶಂಕೆ ಇದ್ದು, ಇದು ಕೊಲೆಯೋ, ಅಸಹಜ ಸಾವೋ ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದೂ ತಿಳಿಸಿದರು. ‘ಅಂಬಾಸಿಡರ್ ಕಾರನ್ನು ಎರಡು ವರ್ಷಗಳಿಂದ ರಸ್ತೆಬದಿಯಲ್ಲಿ ನಿಲ್ಲಿಸಲಾಗಿತ್ತು. ಇದೇ ಸ್ಥಳದಲ್ಲಿ ತಿಂಗಳ ಹಿಂದೆಯಷ್ಟೇ ಸಿನಿಮಾ ಚಿತ್ರೀಕರಣ ಮಾಡಿದ್ದ ಕೆಲವರು, ಕಾರಿಗೆ ಬಣ್ಣ ಬಳಿದಿದ್ದರು. ಕಾರಿನ ಮಾಲೀಕರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’ ಎಂದೂ ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಮೈಸೂರಿನ ವೈದ್ಯ ಕೇರಳದಲ್ಲಿ ಹತ್ಯೆ

ಮೈಸೂರು: ಇಲ್ಲಿನ ವಸಂತನಗರದಲ್ಲಿ 3 ವರ್ಷಗಳ ಹಿಂದೆ ನಾಪತ್ತೆಯಾಗಿದ್ದ ನಾಟಿವೈದ್ಯ ಶಬ್ಬಾ ಷರೀಫ್ ಹತ್ಯೆಯಾಗಿದ್ದು, ನಾಲ್ವರು ಆರೋಪಿಗಳನ್ನು ಕೇರಳದ ಮಲಪ್ಪುರಂ ಜಿಲ್ಲೆಯ ಪೊಲೀಸರು ಗುರುವಾರ ಬಂಧಿಸಿದ್ದಾರೆ.

‘ವಸಂತನಗರದಲ್ಲಿ ಮೂಲವ್ಯಾಧಿಗೆ ನಾಟಿ ಔಷಧ ನೀಡುತ್ತಿದ್ದ ಷರೀಫ್ ಬಳಿ ಕೇರಳದಿಂದ ಹೆಚ್ಚಿನ ಮಂದಿ ಬಂದು ಔಷಧ ಪಡೆದು ಗುಣಮುಖರಾಗುತ್ತಿದ್ದರು. ಇದು ಅವರಿಗೆ ಕೇರಳದಲ್ಲಿ ಹೆಚ್ಚಿನ ಪ್ರಸಿದ್ಧಿಯನ್ನು ತಂದುಕೊಟ್ಟಿತ್ತು. ಈ ಔಷಧದ ರಹಸ್ಯ ತಿಳಿದು ದುಬೈ ಸೇರಿದಂತೆ ವಿದೇಶದಲ್ಲಿ ಔಷಧ ಮಾರಾಟ ಮಾಡಿ ಹಣ ಸಂಪಾದಿಸುವ ಉದ್ದೇಶದಿಂದ ಇವರ ಕೊಲೆ ನಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕೇರಳದ ಉದ್ಯಮಿ ಶಬೀನ್ ಅಶ್ರಫ್ ಎಂಬಾತನ ಮನೆಯಲ್ಲಿ ಏ.24 ರಂದು ನಡೆದ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳದ ಪೊಲೀಸರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ಷರೀಫ್ ಕೊಲೆ ಕೃತ್ಯ ಬಯಲಾಗಿದೆ.

ನ್ಯಾ. ಎ.ಜೆ.ಸದಾಶಿವ ಆಯೋಗದ ವರದಿ ಜಾರಿಗೆ ಪ್ರಯತ್ನ

‘ಆರ್‌ಎಸ್‌ಎಸ್ ಜತೆ ಗಂಭೀರ ಚರ್ಚೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಯ (ಎಸ್ಸಿ) ಆಂತರಿಕ ಮೀಸಲು ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಅನುಷ್ಠಾನಗೊಳಿಸುವುದಕ್ಕಾಗಿ ಮುಖ್ಯಮಂತ್ರಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಪ್ರಮುಖರು, ಪಕ್ಷದ ವರಿಷ್ಠರು ಹಾಗೂ ಕಾನೂನು ತಜ್ಞರ ಜೊತೆ ಗಂಭೀರ ಚರ್ಚೆ ನಡೆಸುತ್ತಿದ್ದೇನೆ’ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣ ಸ್ವಾಮಿ ಹೇಳಿದರು.

ವಿಶ್ವ ಮಾದಿಗ ದಿನದ ಅಂಗವಾಗಿ ಶುಕ್ರವಾರ ಇಲ್ಲಿ ಆಯೋಜಿಸಲಾಗಿದ್ದ ಸಮುದಾಯದ ಚಿಂತಕರ ಮತ್ತು ಬುದ್ಧಿಜೀವಿಗಳ ನಾಲ್ಕನೇ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಒಳಮೀಸಲು ಕುರಿತಂತೆ ನ್ಯಾಯಮೂರ್ತಿ ಪಿ.ರಾಮಚಂದ್ರ ರಾಜು ವರದಿ, ಮಹಾರಾಷ್ಟ್ರದಲ್ಲಿನ ಲಹೂಜಿ ಸಾಳ್ವೆ ಆಯೋಗದ ವರದಿಗಳನ್ನು ಇದೇ ವೇಳೆ ಪ್ರಸ್ತಾಪಿಸಿದರು.

‘ರಾಜ್ಯದಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ 20 ವರ್ಷಗಳಿಂದ ಏನಾಗುತ್ತಿದೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದ ಅವರು, ‘ನಾನಿಲ್ಲಿ ನಿಮ್ಮ ಮುಂದೆ ಮಂತ್ರಿಯಾಗಿ ಬಂದು ನಿಂತಿಲ್ಲ. ಬದಲಿಗೆ ಮಾದಿಗ, ಚಮ್ಮಾರರ ಮಗನಾಗಿ ಬಂದಿದ್ದೇನೆ. ಸಮುದಾಯದ ಏಳ್ಗೆಗೆ ಕಟಿಬದ್ಧವಾಗಿ ಕೆಲಸ ಮಾಡುತ್ತೇನೆ’ ಎಂದರು.

‘ಇವತ್ತಿಗೂ ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಐಐಟಿಯಂತಹ ಸಂಸ್ಥೆಗಳಲ್ಲಿ ತುಳಿತಕ್ಕೊಳಗಾದ ಸಮುದಾಯದ ಪಾಲುದಾರಿಕೆ ಬೆರಳೆಣಿಕೆಯಷ್ಟಿದೆ. 70 ದಶಕಗಳಿಗೂ ಮೀರಿದ ಈ ಹಿಂದಿನ ಸರ್ಕಾರಗಳಲ್ಲಿ ದಮನಿತರಿಗಾಗಿ ಯಾವೆಲ್ಲಾ ಯೋಜನೆಗಳು ಎಷ್ಟು ಅನುಷ್ಠಾನಗೊಂಡವು ಎಂಬುದು ಗೊತ್ತಾಗಲೇ ಇಲ್ಲ. ಸೌಲಭ್ಯಗಳು ಶೇ 5 ರಷ್ಟು ಜನರಿಗೆ ಮಾತ್ರವೇ ತಲುಪುತ್ತಿವೆ’ ಎಂದು ಕಳವಳ ವ್ಯಕ್ತಪಡಿಸಿದರು.

ಮನವಿ: ಇದೇ ವೇಳೆ, ‘ಇಂಟಲೆಕ್ಚುಯಲ್ ಫೋರಂ ಫಾರ್ ಮಾದಿಗ’ ಸಮಿತಿ ವತಿಯಿಂದ ಮಾದಿಗ ಮತ್ತು ಮಾದಿಗ ಸಂಬಂಧಿತ ಜಾತಿಗಳ ಸರ್ವತೋಮುಖ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

‘ದಕ್ಷಿಣ ಭಾರತದ ಹೆಬ್ಬಾಗಿಲು ಮಾಡುತ್ತೇವೆ’

‘ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಚಲಮಟ್ಟಿ ಗ್ರಾಮದ ಬಳಿ ಶಿವಶರಣ ಮಾದಾರ ಚನ್ನಯ್ಯ ಗುರುಪೀಠ ಟ್ರಸ್ಟ್‌ಗೆ ರಾಜ್ಯ ಸರ್ಕಾರ ನೀಡಿರುವ 81 ಎಕರೆ ಪ್ರದೇಶವನ್ನು ಮಾದಿಗ ಸಮುದಾಯದ ಪಾಲಿಗೆ ದಕ್ಷಿಣ ಭಾರತದ ಹೆಬ್ಬಾಗಿಲಾಗಿ ಮಾಡುತ್ತೇನೆ’ ಎಂದು ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ ಇದೇ ವೇಳೆ ತಿಳಿಸಿದರು.

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಮಾತನಾಡಿ, ‘ದಕ್ಷಿಣ ಭಾರತದ ಎಲ್ಲ ಮಾದಿಗರೂ ಸಾಂಸ್ಕೃತಿಕವಾಗಿ ಒಂದಾಗಬೇಕು. ಸರ್ಕಾರಿ ನೌಕರರೆಲ್ಲಾ ನಿವೃತ್ತರಾದ ನಂತರ ಕುಟುಂಬಕ್ಕೆ ಸೀಮಿತವಾಗದೆ ಕ್ರಿಯಾಶೀಲವಾಗಿ ಸಮಾಜದ ಏಳ್ಗೆಗೆ ತೊಡಗಿಸಿಕೊಳ್ಳಬೇಕು’ ಎಂದರು.

ಗೋಣು ಅಲ್ಲಾಡಿಸಿ ಹೋದ ಸಿ.ಎಂ

ನ್ಯಾಯಮೂರ್ತಿ ಎ. ಜೆ.ಸದಾಶಿವ ಆಯೋಗದ ವರದಿ ಜಾರಿಗೆ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮೌನವಾಗಿ ಗೋಣು ತಿರುಗಿಸಿ ನಿರ್ಗಮಿಸಿದ ಪ್ರಸಂಗ ಇಲ್ಲಿ ನಡೆಯಿತು.

ಸಮಾವೇಶ ಸ್ಥಳದಿಂದ ತೆರಳುತ್ತಿದ್ದ ಮುಖ್ಯಮಂತ್ರಿಗಳನ್ನು ಎಸ್ಸಿ ಆಂತರಿಕ ಮೀಸಲಾತಿ ಕುರಿತಂತೆ ‘ಪ್ರಜಾವಾಣಿ’ ಪ್ರಶ್ನಿಸಿದಾಗ ಯಾವುದೇ ಮೌಖಿಕ ಪ್ರತಿಕ್ರಿಯೆ ನೀಡಲು ನಿರಾಕರಿಸಿದರಲ್ಲದೆ ಗೋಣು ಅಲ್ಲಾಡಿಸಿ ತೆರಳಿದರು. ವೇದಿಕೆಯ ಮೇಲೆ ಮಾತ್ರ, ‘ನಾನು ನಿಮ್ಮ ಸಮುದಾಯದವರೊಂದಿ ಗೇ ಬೆಳೆದಿದ್ದೇನೆ. ಡಾ.ಬಾಬಾ ಸಾಹೇಬ ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಂ ನನ್ನ ರಾಜಕೀಯ ಜೀವನದ ಪ್ರೇರಣಾ ಶಕ್ತಿ. ನಿಮಗಾಗಿ ನನ್ನ ಮನೆಯ ಬಾಗಿಲು ಮಾತ್ರವಲ್ಲ, ಹೃದಯದ ಬಾಗಿಲು ಕೂಡಾ ಸದಾ ತೆರೆದಿರುತ್ತದೆ’ ಎಂದು ಭಾವುಕ ನುಡಿಗಳನ್ನಾಡಿದರು.

ಚಾಮರಾಜನಗರ: 750 ಹಾಸಿಗೆ ಆಸ್ಪತ್ರೆಗೆ 85 ನರ್ಸ್‌ಗಳು

ಸಿಮ್ಸ್: ನರ್ಸ್‌ಗಳ ಕೊರತೆ, ಶಸ್ತ್ರಕ್ರಿಯೆ ಸ್ಥಗಿತ!

• ಸೂರ್ಯನಾರಾಯಣ ವಿ.

ಪ್ರಜಾವಾಣಿ ವಿಶೇಷ

ಚಾಮರಾಜನಗರ: ನರ್ಸ್‌ಗಳ ಕೊರತೆಯಿಂದಾಗಿ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಸಿಮ್ಸ್) ಬೋಧನಾ ಆಸ್ಪತ್ರೆಯಲ್ಲಿ ತುರ್ತು, ಗಂಭೀರ ಪ್ರಕರಣ ಬಿಟ್ಟು ಉಳಿದ ಪ್ರಕರಣಗಳಲ್ಲಿ ಶಸ್ತ್ರ ಚಿಕಿತ್ಸೆ ನಡೆಸದಿರಲು ಸಂಸ್ಥೆಯ ಆಡಳಿತ ನಿರ್ಧರಿಸಿದೆ.

2016ರಲ್ಲಿ ಆರಂಭವಾಗಿರುವ ಸಿಮ್ಸ್, ಎರಡು ಆಸ್ಪತ್ರೆಗಳನ್ನು ನಿರ್ವಹಿಸುತ್ತಿದ್ದು, 750 ಹಾಸಿಗೆಗಳಿವೆ. ಹಳೆಯ ಜಿಲ್ಲಾ ಆಸ್ಪತ್ರೆಯ ಕಟ್ಟಡದಲ್ಲಿ 300 ಹಾಸಿಗೆ ಸಾಮರ್ಥ್ಯ ದ ತಾಯಿ–ಮಗು ಆಸ್ಪತ್ರೆ ಇದೆ. ಹೊರವಲಯದ ಯಡಬೆಟ್ಟದಲ್ಲಿ 450 ಹಾಸಿಗೆಗಳ ಹೊಸ ಆಸ್ಪತ್ರೆ ಕಳೆದ ಅಕ್ಟೋಬರ್‌ನಲ್ಲಿ ಆರಂಭವಾಗಿದೆ.

ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇಲ್ಲ. ಶುಶ್ರೂಷಕರು, ಗ್ರೂಪ್ ಡಿ ಸೇರಿದಂತೆ ಇತರ ಸಿಬ್ಬಂದಿ ಸಾಕಷ್ಟು ಸಂಖ್ಯೆಯಲ್ಲಿಲ್ಲ. ಸದ್ಯ 85 ನರ್ಸ್‌ಗಳಿದ್ದಾರೆ. ಹೊಸ ಆಸ್ಪತ್ರೆ ಉದ್ಘಾಟನೆಯಾದ ಬಳಿಕ ಸರ್ಕಾರ ಒಂದೂ ಹುದ್ದೆ ಮಂಜೂರು ಮಾಡಿಲ್ಲ.

ಕೋವಿಡ್ ಸಮಯದಲ್ಲಿ 120 ನರ್ಸ್‌ಗಳು, 70 ಡಿ–ಗ್ರೂಪ್ ನೌಕರರು ಸೇರಿ 226 ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿತ್ತು. ಮಾರ್ಚ್ 31ರಂದು ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಿದೆ. ಹೀಗಾಗಿ, ಸಿಬ್ಬಂದಿ ಕೊರತೆ ಕಾಡುತ್ತಿದೆ.

40 ಶಸ್ತ್ರಚಿಕಿತ್ಸೆ: ಸಿಮ್ಸ್ ಜಿಲ್ಲೆಯ ಏಕೈಕ ದೊಡ್ಡ ಆಸ್ಪತ್ರೆ. ಜಿಲ್ಲೆಯ ಎಲ್ಲೆಡೆಯಿಂದ ಜನರು ಇಲ್ಲಿಗೆ ಬರುತ್ತಾರೆ. ನಿತ್ಯ ಸರಾಸರಿ 40 ಶಸ್ತ್ರಕ್ರಿಯೆ ನಡೆಯುತ್ತವೆ. ಹಳೆ ಆಸ್ಪತ್ರೆಯಲ್ಲಿ 9, ಹೊಸ ಆಸ್ಪತ್ರೆಯಲ್ಲಿ 9 ಶಸ್ತ್ರಚಿಕಿತ್ಸಾ ಕೊಠಡಿಗಳಿವೆ.

‘ಶಸ್ತ್ರಚಿಕಿತ್ಸೆ ನಡೆಸಲು ಕನಿಷ್ಠ ಇಬ್ಬರು ನರ್ಸ್‌ಗಳ ನೆರವು ಬೇಕಾಗುತ್ತದೆ. ಕ್ಲಿಷ್ಟಕರ ಶಸ್ತ್ರಕ್ರಿಯೆಗೆ ಹೆಚ್ಚೇ ಸಿಬ್ಬಂದಿ ಬೇಕು. ಶಸ್ತ್ರಕ್ರಿಯೆ ನಂತರವೂ ರೋಗಿಗಳ ಆರೈಕೆಗೆ ಶುಶ್ರೂಷಕರು ಬೇಕು. ಅಷ್ಟು ಸಿಬ್ಬಂದಿ ನಮ್ಮಲ್ಲಿ ಈಗ ಇಲ್ಲ. ಹಾಗಾಗಿ, ಅನಿವಾರ್ಯವಾಗಿ ಕಾಯಬಹುದಾದ ಪ್ರಕರಣಗಳಲ್ಲಿ ಶಸ್ತ್ರಚಿಕಿತ್ಸೆ ಮುಂದೂಡಲಿದ್ದೇವೆ’ ಎಂದು ಜಿಲ್ಲಾ ಸರ್ಜನ್ ಡಾ.ಶ್ರೀನಿವಾಸ ‘ಪ್ರಜಾವಾಣಿ’ಗೆ ತಿಳಿಸಿದರು.

ರೋಗಿಗಳಿಗೆ ತೊಂದರೆ: ಬಡ ಕುಟುಂಬಗಳೇ ಹೆಚ್ಚಾಗಿರುವ ಜಿಲ್ಲೆಯಲ್ಲಿ ಚಿಕಿತ್ಸೆಗಾಗಿ ಜನರು ಇದೇ ಆಸ್ಪತ್ರೆಯನ್ನು ಅವಲಂಬಿಸಿದ್ದು, ಶಸ್ತ್ರಚಿಕಿತ್ಸೆ ಸ್ಥಗಿತಗೊಂಡರೆ, ರೋಗಿಗಳಿಗೆ ತೀವ್ರ ತೊಂದರೆಯಾಗಲಿದೆ.



ಸಿಬ್ಬಂದಿ ನೇಮಕಾತಿಗೆ ಮನವಿ ಮಾಡಿ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಕೂಡ ಹಣಕಾಸು ಇಲಾಖೆಯ ಗಮನಕ್ಕೆ ತಂದಿದ್ದಾರೆ

ಡಾ.ಜಿ.ಎಂ.ಸಂಜೀವ್
ಸಿಮ್ಸ್ ಡೀನ್, ನಿರ್ದೇಶಕ

ವರ್ಷದಿಂದ ಬೇಡಿಕೆ

228 ನರ್ಸಿಂಗ್ ಹುದ್ದೆ ಹಾಗೂ 344 ಗ್ರೂಪ್ ಡಿ ಮತ್ತು ಸಿ ಹುದ್ದೆಗಳನ್ನು ಮಂಜೂರು ಮಾಡುವಂತೆ ಕಾಲೇಜು ಆಡಳಿತವು ಒಂದು ವರ್ಷದಿಂದ ಸರ್ಕಾರಕ್ಕೆ ಮನವಿ ಮಾಡುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎನ್.ಮಹೇಶ್ ಅವರೂ ಈ ವಿಚಾರವನ್ನು ಹಣಕಾಸು ಇಲಾಖೆಯ ಗಮನಕ್ಕೆ ತಂದಿದ್ದಾರೆ. ಆದರೆ, ಪ್ರಯೋಜನವಾಗಿಲ್ಲ.

ಆಯಾ ಹಂತದಲ್ಲೇ ಟೆಂಡರ್: ಸಿ.ಎಂ ಸೂಚನೆ

ಬೆಂಗಳೂರು: ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ನಡೆಯುವ ಕಾಮಗಾರಿಗಳಿಗೆ ಆಯಾ ಹಂತದಲ್ಲೇ ಟೆಂಡರ್ ಪ್ರಕ್ರಿಯೆ ನಡೆಸುವುದನ್ನು ಕಡ್ಡಾಯಗೊಳಿಸಿ ಆದೇಶ ಹೊರಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಸೂಚಿಸಿದ್ದಾರೆ.

ವಿವಿಧ ಇಲಾಖೆಗಳ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ, ಬಿಲ್ ಪಾವತಿಯಲ್ಲಿ ಭ್ರಷ್ಟಾಚಾರ, ಬಿಲ್ ಬಾಕಿ ಮತ್ತಿತರ ವಿಷಯಗಳ ಕುರಿತು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ನೇತೃತ್ವದ ನಿಯೋಗದೊಂದಿಗೆ ಮುಖ್ಯಮಂತ್ರಿ ಏಪ್ರಿಲ್ 25ರಂದು ಸಭೆ ನಡೆಸಿದ್ದರು. ಆ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಆಧರಿಸಿ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಮುಖ್ಯ ಕಾರ್ಯದರ್ಶಿಯವರಿಗೆ ಏಪ್ರಿಲ್ 29ರಂದು ಟಿಪ್ಪಣಿ ಕಳುಹಿಸಿದ್ದಾರೆ.

ಪ್ಯಾಕೇಜ್ ಟೆಂಡರ್‌ಗಳ ಗರಿಷ್ಠ ಮೊತ್ತವನ್ನು ₹ 1 ಕೋಟಿಗೆ ಸೀಮಿತಗೊಳಿಸಬೇಕು. ಗುತ್ತಿಗೆದಾರರು ಸ್ವಂತ ಯಂತ್ರೋಪಕರಣ ಹೊಂದಿರಬೇಕು ಎಂಬ ಷರತ್ತನ್ನು ₹ 3 ಕೋಟಿಗಿಂತ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಮಾತ್ರ ವಿಧಿಸುವ ಕುರಿತು ನಿಯಮಾವಳಿ ಪರಿಶೀಲಿಸಿ, ಕ್ರಮ ಕೈಗೊಳ್ಳಬೇಕು. ಜ್ಯೇಷ್ಠತೆ ಆಧಾರದಲ್ಲಿ ಬಿಲ್ ಪಾವತಿಸಬೇಕು. ಎಲ್ಲ ಕಾಮಗಾರಿಗಳಿಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಯಲ್ಲಿ ಪಾರದರ್ಶಕತೆ (ಕೆಟಿಟಿಪಿ) ಕಾಯ್ದೆಯ ಅಡಿಯಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಿ, ಅತಿಕಡಿಮೆ ದರ ನಮೂದಿಸಿದ (ಎಲ್–1) ಬಿಡ್‌ದಾರರಿಗೆ ಗುತ್ತಿಗೆ ನೀಡುವುದನ್ನು ಕಡ್ಡಾಯಗೊಳಿಸಬೇಕು ಎಂದು ಸೂಚಿಸಲಾಗಿದೆ.

ಎಲ್–1 ಬಿಡ್‌ದಾರರನ್ನು ಕೈಬಿಟ್ಟು ಎಲ್–2 ಬಿಡ್‌ದಾರರಿಗೆ ಗುತ್ತಿಗೆ ನೀಡುವುದಾದರೆ ಸೂಕ್ತ ಸಮರ್ಥನೆಗಳೊಂದಿಗೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿ ಒಪ್ಪಿಗೆ ಪಡೆಯುವ ವ್ಯವಸ್ಥೆ ಮಾಡಬೇಕು. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಮತ್ತು ಜ್ಯೇಷ್ಠತೆ ಆಧಾರದಲ್ಲಿ ಬಿಲ್ ಪಾವತಿಗೆ ಹೊಸ ತಂತ್ರಾಂಶ ಅಭಿವೃದ್ಧಿಪಡಿಸಬೇಕು ಎಂದು ಟಿಪ್ಪಣಿಯಲ್ಲಿ ಸೂಚನೆ ನೀಡಲಾಗಿದೆ.

‘ಹಲೋ ಕಂದಾಯ ಸಚಿವರೇ’ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಹ ಫಲಾನುಭವಿಗಳಿಗೆ 72 ಗಂಟೆಗಳೊಳಗೆ ಸಾಮಾಜಿಕ ಪಿಂಚಣಿ ಆದೇಶ ತಲುಪಿಸುವುದಕ್ಕಾಗಿ ಕಂದಾಯ ಇಲಾಖೆ ರೂಪಿಸಿರುವ ‘ಹಲೋ ಕಂದಾಯ ಸಚಿವರೇ’ (ಟೋಲ್ ಫ್ರೀ ಸಂಖ್ಯೆ- 155245) ಸಹಾಯವಾಣಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

ಸಾರ್ವಜನಿಕರು ಟೋಲ್ ಫ್ರೀ ಸಂಖ್ಯೆ- 155245ಗೆ ಕರೆ ಮಾಡುತ್ತಿದ್ದಂತೆಯೇ ಸಹಾಯವಾಣಿ ಕೇಂದ್ರದಲ್ಲಿರುವ ಸಿಬ್ಬಂದಿ ಅವರ ಆಧಾರ್ ಸಂಖ್ಯೆ, ವಿಳಾಸ, ವಯಸ್ಸು, ಯಾವ ವಿಭಾಗದಡಿ ಸಾಮಾಜಿಕ ಪಿಂಚಣಿ ಕೋರುತ್ತಿದ್ದಾರೆ ಎಂಬ ಮಾಹಿತಿಯನ್ನು ಪಡೆಯುತ್ತಾರೆ. ಅದನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುತ್ತಿದ್ದಂತೆಯೇ ಮಾಹಿತಿ ಸಮೇತ ಅರ್ಜಿಯು ಸಂಬಂಧಿಸಿದ ಗ್ರಾಮ ಲೆಕ್ಕಿಗರ ಮೊಬೈಲ್ ಸಂಖ್ಯೆಗೆ ರವಾನೆಯಾಗುತ್ತದೆ. ಗ್ರಾಮಲೆಕ್ಕಿಗರು ಅರ್ಜಿದಾರರ ಮನೆಗೆ ತೆರಳಿ ಅಗತ್ಯ ದಾಖಲೆ ಪಡೆದು, ಅರ್ಹರಿರುವವರಿಗೆ ಮೂರು ದಿನಗಳೊಳಗೆ ಆದೇಶದ ಪ್ರತಿ ನೀಡಬೇಕು.

ಬಾಗಲಕೋಟೆ ಜಿಲ್ಲೆಯ ಹುನಗುಂದ ಗ್ರಾಮದ ದೀಪಾ ಎಂಬುವವರ ಕರೆಯನ್ನು ವೇದಿಕೆಯಲ್ಲೇ ಸ್ವೀಕರಿಸಿ ಮಾತನಾಡಿದ ಮುಖ್ಯಮಂತ್ರಿ, ಅಗತ್ಯ ವಿವರಗಳನ್ನು ಪಡೆದುಕೊಂಡರು. ಬಳಿಕ ಮಾಹಿತಿಯನ್ನು ಸಂಬಂಧಿಸಿದ ಗ್ರಾಮಲೆಕ್ಕಿಗರಿಗೆ ರವಾನಿಸಲಾಯಿತು.

‘ಪ್ರತಿ ವರ್ಷ ರಾಜ್ಯ ಸರ್ಕಾರ ಸಾಮಾಜಿಕ ಪಿಂಚಣಿ ಯೋಜನೆಗಳ ಅಡಿಯಲ್ಲಿ ₹ 10,000 ಕೋಟಿ ವೆಚ್ಚ ಮಾಡುತ್ತಿದೆ. 72 ಲಕ್ಷಕ್ಕೂ ಹೆಚ್ಚು ಜನರು ಪಿಂಚಣಿ ಪಡೆಯುತ್ತಿದ್ದಾರೆ. ಆಡಳಿತವೇ ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ಹೋಗಬೇಕು ಎಂಬ ಮುಖ್ಯಮಂತ್ರಿಯವರ ಆಶಯದಂತೆ ಸಹಾಯವಾಣಿ ಆರಂಭಿಸಲಾಗಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಮುಂದಿನ ದಿನಗಳಲ್ಲಿ ಸಾಮಾಜಿಕ ಪಿಂಚಣಿ ಪಡೆಯಲು ಜನರು ಸರ್ಕಾರಿ ಕಚೇರಿಗಳಿಗೆ ಅಲೆಯಬೇಕಿಲ್ಲ. ಸಹಾಯವಾಣಿಗೆ ಕರೆಮಾಡಿದರೆ ಸಾಕು ಎಂದು ತಿಳಿಸಿದರು.

ಪುಟ್ಟಸ್ವಾಮಿ ಪೀಠಾಧಿಕಾರಕ್ಕೆ ತಡೆ

ಬೆಂಗಳೂರು: ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಮೊದಲ ಪೀಠಾಧಿಪತಿಯಾಗಿ ಇದೇ 15ರಂದು ಅಧಿಕಾರ ಸ್ವೀಕರಿಸಬೇಕಿದ್ದ ಬಿಜೆಪಿ ಮುಖಂಡ ಬಿ.ಜೆ.ಪುಟ್ಟಸ್ವಾಮಿ ಅವರ ಪಟ್ಟಾಭಿಷೇಕಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ನ್ಯಾಯಾಲಯ ಪ್ರತಿವಾದಿಗಳಾದ ಬಿ.ಜೆ.ಪುಟ್ಟಸ್ವಾಮಿ ಸೇರಿದಂತೆ ಮಠದ ಒಟ್ಟು 11 ಟ್ರಸ್ಟಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಸಾಗರ: ಮಸೀದಿಯಲ್ಲಿ ಸಂವಿಧಾನದ ಪ್ರಸ್ತಾವನೆ ಪಠಣ

ಆನಂದಪುರದ ಜಾಮಿಯಾ ಮಸೀದಿಯಲ್ಲಿ ಸಮಾನತೆ, ಸಹೋದರತೆಯ ಸಂದೇಶ

• ಎಂ.ರಾಘವೇಂದ್ರ

ಸಾಗರ: ತಾಲ್ಲೂಕಿನ ಆನಂದಪುರದ ಜಾಮಿಯಾ ಮಸೀದಿಯಲ್ಲಿ ಮುಸಲ್ಮಾನರು ಪ್ರಾರ್ಥನೆ ನಂತರ ಸಂವಿಧಾನದ ಪ್ರಸ್ತಾವನೆಯನ್ನು ಓದುವ ಮೂಲಕ ಅದರ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು.

ಶುಕ್ರವಾರದ ಅಜಾನ್ ನಂತರ ಮಸೀದಿಯ ಧರ್ಮಗುರು ಮೌಲಾನಾ ಮುಫ್ತಿ ಸಫೀರುದ್ದೀನ್ ಪ್ರವಚನ ನೀಡಿದರು. ನಂತರ ಸಾಗರದ ವಕೀಲರಾದ ಮಹಮದ್ ಜಿಕ್ರಿಯಾ ಸಂವಿಧಾನ ರಚನೆಯಾದ ಸಂದರ್ಭ ಹಾಗೂ ಅದರ ಮಹತ್ವದ ಕುರಿತು ಉಪನ್ಯಾಸ ನೀಡಿದರು.

ಆಮೇಲೆ ಎಲ್ಲರೂ 'ಭಾರತ ಪ್ರಜೆಗಳಾದ ನಾವು, ಭಾರತವನ್ನು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ರೂಪಿಸುವ, ಭ್ರಾತೃತ್ವದ ಭಾವನೆ ಮೂಡಿಸುವ ದೃಢಸಂಕಲ್ಪ ಮಾಡಿದ್ದೇವೆ' ಎಂಬ ಸಂವಿಧಾನದ ಪ್ರಸ್ತಾವನೆ ಓದಿದರು.

'ಮಸೀದಿ ಆವರಣದಲ್ಲಿ ಮುಸಲ್ಮಾನರು ಸಂವಿಧಾನದ ಪ್ರಸ್ತಾವನೆ ಓದುವ ಮೂಲಕ ಹೊಸ ಸಂಪ್ರದಾಯಕ್ಕೆ ಮುನ್ನುಡಿ ಬರೆದಿದ್ದಾರೆ. ಸಂವಿಧಾನ ಕುರಿತಂತೆ ಅರಿವು ಪಡೆಯಲು ಮುಸಲ್ಮಾನರ ಪ್ರತಿಯೊಂದು ಕಾರ್ಯಕ್ರಮದಲ್ಲೂ ಈ ರೀತಿಯ ಪರಿಪಾಠ ಬೆಳೆಯಬೇಕು ಎಂಬ ಸದುದ್ದೇಶ ಈ ಕಾರ್ಯಕ್ರಮದ ಹಿಂದೆ ಇದೆ' ಎಂದು ಮಸೀದಿಯ ಮುಖಂಡರು ತಿಳಿಸಿದ್ದಾರೆ.



ಸಾಗರ ತಾಲ್ಲೂಕಿನ ಆನಂದಪುರದ ಜಾಮಿಯಾ ಮಸೀದಿಯಲ್ಲಿ ಶುಕ್ರವಾರದ ಪ್ರಾರ್ಥನೆಯ ನಂತರ ಸಂವಿಧಾನದ ಪೀಠಿಕೆಯನ್ನು ಓದಲಾಯಿತು

ಸಂವಿಧಾನ ನಮಗೆ ನೀಡಿರುವ ಹಕ್ಕುಗಳ ಮೇಲೆ ನಿರ್ಬಂಧ ಹೇರುವ ಕೆಲಸ ನಡೆಯುತ್ತಿದೆ. ನಮ್ಮ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡುವುದು ನಮ್ಮ ಉದ್ದೇಶ
ಮೌಲಾನಾ ಮುಫ್ತಿ ಸಫೀರುದ್ದೀನ್, ಧರ್ಮಗುರು, ಜಾಮಿಯಾ ಮಸೀದಿ

ನೀನು ಯಾವ ದೇಶದಲ್ಲಿ ಹುಟ್ಟಿರುವೆಯೋ ಆ ದೇಶವನ್ನು ಗೌರವಿಸು ಎಂದು ಇಸ್ಲಾಂ ಹೇಳುತ್ತದೆ. ಭಾರತದ ಸಂವಿಧಾನ ಕೂಡ ಇದೇ ವಿಷಯವನ್ನು ಪ್ರತಿಪಾದಿಸುತ್ತದೆ
ಎಂ. ಸಾದಿಕ್, ಸಾಮಾಜಿಕ ಚಿಂತನಾ ವೇದಿಕೆ ಸಂಚಾಲಕ, ಯಡೇಹಳ್ಳಿ

ಭಾರತದ ಪ್ರಜೆಗಳಾದ ನಮಗೆ ಯಾವ ಬಟ್ಟೆ ಧರಿಸಬೇಕು, ಯಾವ ಆಹಾರ ಸ್ವೀಕರಿಸಬೇಕು ಎಂಬುದನ್ನು ಸಂವಿಧಾನ ನಿರ್ದೇಶಿಸಬೇಕೇ ಹೊರತು ಯಾವುದೇ ಸಂಘಟನೆ ಅಥವಾ ವ್ಯಕ್ತಿಗಳಲ್ಲ
ಮಹಮದ್ ಜಿಕ್ರಿಯಾ, ವಕೀಲ, ಸಾಗರ

ಟಿಪ್ಪು ಸುಲ್ತಾನ್ ಕಾಲದಿಂದಲೂ ಸಾಮರಸ್ಯ ಮೆರೆದ ಆನಂದಪುರ: ಸಾಗರ ತಾಲ್ಲೂಕಿನ ಆನಂದಪುರದ ಜಾಮಿಯಾ ಮಸೀದಿ 1632ರಲ್ಲಿ ಕೆಳದಿ ಅರಸ ವೀರಭದ್ರ ನಾಯಕರಿಂದ ನಿರ್ಮಾಣಗೊಂಡಿದೆ. ಆನಂದಪುರದ ಕೋಟೆಯನ್ನು ಬ್ರಿಟಿಷರು ವಶಪಡಿಸಿಕೊಂಡಿದ್ದರು. ವಿಷಯ ತಿಳಿದ ಟಿಪ್ಪು ಸುಲ್ತಾನ್ ತನ್ನ ಸೇನೆಯನ್ನು ಕಳುಹಿಸಿ ಕೋಟೆಯನ್ನು ಮರು ವಶಪಡಿಸಿಕೊಂಡ. ನಂತರ ಮಸೀದಿಗೆ ಬಂದು ಪ್ರಾರ್ಥನೆ ಸಲ್ಲಿಸಿದ. ಇದೆಲ್ಲವೂ ಇತಿಹಾಸದಲ್ಲಿ ದಾಖಲಾಗಿದೆ.

ಇಳುವರಿ ಕಡಿಮೆ ಇದ್ದರೂ ಬೆಲೆ ಇಳಿಕೆ; ಬೆಳೆಗಾರರು ಕಂಗಾಲು

ಮಳೆ ಹೊಡೆತ: ಮಾವು ದರ ಕುಸಿತ

• ಆರ್. ಜಿತೇಂದ್ರ

ರಾಮನಗರ: ಕೆಲವು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ನಿರಂತರ ಮಳೆ ಹೊಡೆತದಿಂದ ಕಳೆದೊಂದು ವಾರದಲ್ಲಿ ಮಾವಿನ ಧಾರಣೆ ಅರ್ಧದಷ್ಟು ಕುಸಿದಿದೆ.

ಬಿರುಗಾಳಿ ಮತ್ತು ಆಲಿಕಲ್ಲಿನ ಹೊಡೆತದಿಂದ ಕಾಯಿಗಳು ನೆಲ ಕಚ್ಚುತ್ತಿವೆ. ಮಳೆ ಹೆಚ್ಚಾದರೆ ಕಾಯಿ ಕಪ್ಪಾಗುತ್ತದೆ ಎಂಬ ಆತಂಕದಿಂದ ಕಂಗಾಲಾಗಿರುವ ಬೆಳೆಗಾರರು ಅವಧಿ ಪೂರ್ವ ಕೊಯ್ಲಿಗೆ ಮುಂದಾಗಿದ್ದಾರೆ.

ಪರಿಸ್ಥಿತಿಯ ಲಾಭ ಪಡೆದು ಮಾವಿನ ಜ್ಯೂಸ್ ತಯಾರಿಕಾ ಕಾರ್ಖಾನೆಗಳು ದಲ್ಲಾಳಿಗಳ ಮೂಲಕ ಕಡಿಮೆ ಬೆಲೆಗೆ ಖರೀದಿಗೆ ಮುಂದಾಗಿವೆ. ಕಾರ್ಖಾನೆಗಳಿಗೆ ಸಗಟು ದರದಲ್ಲಿ ಬಾದಾಮಿ ಪ್ರತಿ ಕೆ.ಜಿ.ಗೆ ₹30 ಹಾಗೂ ಸೇಂದೂರ ₹19–20ರಂತೆ ಮಾರಾಟ ನಡೆದಿದೆ.

ಮುಂದಿನ ದಿನಗಳಲ್ಲಿ ಮಾವಿನ ಬೆಲೆ ಇನ್ನಷ್ಟು ಕುಸಿತ ಕಾಣುವ ಸಾಧ್ಯತೆ ಇದೆ.

'ಇಳುವರಿ ಕುಸಿತದಿಂದ ಉತ್ತಮ ಬೆಲೆ ಸಿಗಲಿದೆ ಎಂದು ನಂಬಿದ್ದೆವು. ಆದರೆ ನಮ್ಮ ಲೆಕ್ಕಾಚಾರ ತಲೆಕೆಳಗಾಗಿದೆ. ಮಾರುಕಟ್ಟೆಯಲ್ಲಿ ಕಡಿಮೆ ಉತ್ಪನ್ನ ಇದ್ದರೂ ಬೆಲೆ ಕುಸಿದಿದೆ' ಎಂದು ರಾಮನಗರದ ಮಾವು ಬೆಳೆಗಾರ ಶಿವರಾಮಯ್ಯ ಆತಂಕ ವ್ಯಕ್ತಪಡಿಸಿದರು.

ಇಡೀ ರಾಜ್ಯದಲ್ಲೇ ಮೊದಲಿಗೆ ರಾಮನಗರದಲ್ಲಿ ಕೊಯ್ಲು ನಡೆದಿದ್ದು ಜಿಲ್ಲೆಯ 33 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯುವ ಮಾವಿನ ಪೈಕಿ ಶೇಕಡ 70ರಷ್ಟು ಬಾದಾಮಿ ತಳಿಯದ್ದಾಗಿದೆ. ಶುಕ್ರವಾರ ರಾಮನಗರ, ಚನ್ನಪಟ್ಟಣ ಎಪಿಎಂಸಿಗಳಲ್ಲಿ ಬಾದಾಮಿ ತಳಿಯ ಮಾವು ಪ್ರತಿ ಕೆ.ಜಿ.ಗೆ ₹45–₹50ರಂತೆ ಮಾರಾಟ ನಡೆಯಿತು. ಕಳೆದ ವಾರ ಇದೇ ತಳಿಯ ಕಾಯಿಗೆ ಎಪಿಎಂಸಿ ಕೆ.ಜಿ.ಗೆ ₹85–90ರವರೆಗೂ ಧಾರಣೆ ಇತ್ತು.

ಮಳೆಯ ಕಾರಣಕ್ಕೆ ರೈತರು ಅವಧಿ ಪೂರ್ವ ಕೊಯ್ಲಿಗೆ ಮುಂದಾಗಿದ್ದು, ಮಾರುಕಟ್ಟೆಗೆ ಹೆಚ್ಚು ಉತ್ಪನ್ನ ಬಂದ ಕಾರಣ ಬೆಲೆಯಲ್ಲಿ ಇಳಿಕೆ ಆಗಿದೆ ಎಂದು ಉಪ ನಿರ್ದೇಶಕ ಮುನೇಗೌಡ ಹೇಳಿದರು.



ರಾಮನಗರದ ಎಪಿಎಂಸಿಯಲ್ಲಿ ಮಾವಿನ ವಹಿವಾಟು ನಡೆದಿರುವುದು

ಗಾಳಿ, ಮಳೆ: ಮಾವು ಬೆಳೆ ಹಾನಿ

ಪ್ರಜಾವಾಣಿ ವಿಶೇಷ

ಹುಬ್ಬಳ್ಳಿ: ಧಾರವಾಡ, ಬೆಳಗಾವಿ ಸೇರಿದಂತೆ ಕೆಲವೆಡೆ ಗಾಳಿ, ಮಳೆಯಿಂದ ಮಾವು ಬೆಳೆಗೆ ಹಾನಿಯಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ 3,400 ಹೆಕ್ಟೇರ್‌ನಲ್ಲಿ ಮಾವು ಬೆಳೆಯಲಾಗಿದೆ. ಮಳೆ–ಗಾಳಿಯಿಂದ ಬೆಳಗಾವಿ ತಾಲ್ಲೂಕಿನಲ್ಲಿ 3 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

ಧಾರವಾಡದಲ್ಲಿ 7-8 ಸಾವಿರ ಹೆಕ್ಟೇರ್ ವ್ಯಾಪ್ತಿಯಲ್ಲಿ ಮಾವು ಬೆಳೆ ಇದ್ದು, ಆಲಿಕಲ್ಲು ಮಳೆಯಿಂದ 5 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಡಾ.ಕಾಶಿನಾಥ ಭದ್ರಣ್ಣನವರ ತಿಳಿಸಿದರು. 'ಮಾವು ಇಳುವರಿ ಹಂತದಲ್ಲಿದೆ. ಆಲಿಕಲ್ಲು ಮತ್ತು ಗಾಳಿ ಸಹಿತ ಮಳೆಯಾಗಿದ್ದರಿಂದ ಈ ಬಾರಿ ಮಾವು ಬೆಳೆ ಹಾನಿಯಾಗಿದೆ' ಎಂದು ಪ್ರಜಾವಾಣಿಗೆ ತಿಳಿಸಿದರು.

ಅಂಕಿ-ಅಂಶಗಳು

1.65 ಲಕ್ಷ ಹೆಕ್ಟೇರ್ ರಾಜ್ಯದಲ್ಲಿ ಮಾವು ಬೆಳೆಯುವ ಪ್ರದೇಶ

12-15 ಲಕ್ಷ ಟನ್ ವಾರ್ಷಿಕ ಸರಾಸರಿ ಇಳುವರಿ

ಶೇ **25-30** ಈ ಬಾರಿ ಹವಾಮಾನ ವೈಪರೀತ್ಯದಿಂದ ಬಂದ ಫಸಲು

5-6 ಲಕ್ಷ ಟನ್ ಈ ಬಾರಿ ನಿರೀಕ್ಷಿತ ಮಾವು ಉತ್ಪನ್ನ

ಮಾವಿನ ದರ– ರಾಮನಗರ ಮಾವು ಮೇಳ (ಪ್ರತಿ ಕೆ.ಜಿ.ಗೆ, ಹಣ್ಣು)

ತಳಿ	ದರ
ಬಾದಾಮಿ	₹120
ರಸಪುರಿ	₹90
ಸೇಂದೂರ	₹63
ಬೈಗನ್‌ಪಲ್ಲಿ	₹80
ಮಲ್ಲಿಕ	₹110
ಮಲಗೋವ	₹160
ತೋತಾಪುರಿ	₹30

ಮಾವು ಧಾರಣೆ– ರಾಮನಗರ ಎಪಿಎಂಸಿ (ಪ್ರತಿ ಕೆ.ಜಿ.ಗೆ, ಕಾಯಿ)

ತಳಿ	ದರ
ಬಾದಾಮಿ	₹45-50
ರಸಪುರಿ	₹25-30
ಸೇಂದೂರ	₹18-20
ಬೈಗನ್‌ಪಲ್ಲಿ	₹40
ತೋತಾಪುರಿ	₹4-8

ಚುನಾವಣೆ: ಇಂದು ಬಿಜೆಪಿ ಪ್ರಮುಖ ನಾಯಕರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಮತ್ತು ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ಬಿಜೆಪಿ ಪ್ರಮುಖ ನಾಯಕರ (ಕೋರ್ ಕಮಿಟಿ) ಸಭೆ ಶನಿವಾರ ನಡೆಯಲಿದೆ.

ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯವ ಒಟ್ಟು ಏಳು ಸ್ಥಾನಗಳಲ್ಲಿ ನಾಲ್ಕು ಸ್ಥಾನಗಳು, ರಾಜ್ಯಸಭೆಯ ನಾಲ್ಕು ಸ್ಥಾನಗಳಲ್ಲಿ ಎರಡು ಸ್ಥಾನಗಳನ್ನು ಬಿಜೆಪಿ ಅನಾಯಾಸವಾಗಿ ಗೆಲ್ಲಬಹುದು. ಪದವೀಧರರು ಮತ್ತು ಶಿಕ್ಷಕರ ಕ್ಷೇತ್ರಗಳ ನಾಲ್ಕು ಸ್ಥಾನಗಳಲ್ಲಿ ಮೂರಕ್ಕೆ ಅಭ್ಯರ್ಥಿ ಈಗಾಗಲೇ ಘೋಷಣೆಯಾಗಿದ್ದು, ನಾಲ್ಕನೇ ಸ್ಥಾನಕ್ಕೆ ಅಭ್ಯರ್ಥಿಯಾಗಿ ಬಸವರಾಜ ಹೊರಟ್ಟಿ ಆಯ್ಕೆಯಾಗಲಿದ್ದಾರೆ ಎಂದು ಮೂಲಗಳು ಹೇಳಿವೆ.

ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ 2023ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದು. ಅದರಲ್ಲೂ ವಿಶೇಷವಾಗಿ ಒಬಿಸಿಯ ಸಣ್ಣ– ಪುಟ್ಟ ಜಾತಿಗಳಿಗೆ ಸೇರಿದವರಿಗೆ ಆದ್ಯತೆ ಸಿಗಲಿದೆ. ಈ ಹಿಂದಿನಂತೆಯೇ ಅಚ್ಚರಿಯ ಹೆಸರುಗಳೇ ಬರಬಹುದು. ಪ್ರಮುಖ ನಾಯಕರ ಸಭೆಯಲ್ಲಿ ಈ ಬಗ್ಗೆ ಸ್ಪಷ್ಟ ಚಿತ್ರಣ ಸಿಗಬಹುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ರಾಜ್ಯಸಭೆಯ ಎರಡು ಸ್ಥಾನಗಳಿಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಕೆ.ಸಿ. ರಾಮಮೂರ್ತಿ ಅವರಿಗೆ ಟಿಕೆಟ್ ಸಿಗಬಹುದು. ನಿರ್ಮಲಾ ಸೀತಾರಾಮನ್ ಅವರನ್ನು ರಾಜ್ಯದಿಂದ ಮತ್ತೆ ಆಯ್ಕೆ ಮಾಡುವ ಬಗ್ಗೆ ಪಕ್ಷದಲ್ಲಿ ಯಾರದ್ದೂ ತಕರಾರು ಇಲ್ಲ. ರಾಮಮೂರ್ತಿಯವರನ್ನು ಕಾಂಗ್ರೆಸ್‌ನಿಂದ ಕರೆ ತಂದು ಪುನಃ ಗೆಲ್ಲಿಸಿಕೊಳ್ಳಲಾಗಿತ್ತು. ರೆಡ್ಡಿ ಸಮೂಹದಲ್ಲಿ ಪ್ರಭಾವ ಹೊಂದಿರುವ ಅವರನ್ನು ಈ ಬಾರಿ ಮತ್ತೆ ಕಣಕ್ಕೆ ಇಳಿಸಬಹುದು ಎಂದು ಮೂಲಗಳು ತಿಳಿಸಿವೆ.

ಶಿಕ್ಷಕರ ಕ್ಷೇತ್ರದಿಂದ ಹಾಲಿ ಸದಸ್ಯ ಅರುಣ್ ಶಹಾಪುರ, ಜೆಡಿಎಸ್ ತೊರೆದು ಬಂದಿರುವ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪದವೀಧರ ಕ್ಷೇತ್ರಗಳ ಎರಡು ಸ್ಥಾನಗಳಿಗೆ ಹಾಲಿ ಸದಸ್ಯ ಹಣಮಂತ ರುದ್ರಪ್ಪ ನಿರಾಣಿ ಮತ್ತು ಎಂ.ವಿ.ರವಿಶಂಕರ್ ಅವರಿಗೆ ಟಿಕೆಟ್ ಖಚಿತವಾಗಿದೆ. ವಿಧಾನಪರಿಷತ್‌ನಲ್ಲಿ ಬಹುಮತ ಪಡೆಯಲು ಬಿಜೆಪಿಗೆ ಒಂದು ಸ್ಥಾನದ ಕೊರತೆ ಇದ್ದು, ಈ ಚುನಾವಣೆಗಳ ಬಳಿಕ ಬಿಜೆಪಿ ಬಹುಮತ ಪಡೆಯಲಿದೆ.

ಚುನಾವಣೆ ಬಗ್ಗೆ ಚರ್ಚೆ: 'ವಿಧಾನಪರಿಷತ್ ಮತ್ತು ರಾಜ್ಯಸಭೆ ಚುನಾವಣೆ ಬಗ್ಗೆ ಪಕ್ಷದ ಪ್ರಮುಖ ನಾಯಕರ ಸಭೆಯಲ್ಲಿ ಚರ್ಚಿಸಲಾಗುವುದು. ಗುರುವಾರ ರಾತ್ರಿ ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಜತೆಗೂ ಈ ಬಗ್ಗೆ ಚರ್ಚಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ಬಿ.ಎಸ್.ಯಡಿಯೂರಪ್ಪ ಅವರ ಜತೆಗೂ ಅಭ್ಯರ್ಥಿಗಳ ಆಯ್ಕೆ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚರ್ಚೆ ನಡೆಸಿದ್ದಾರೆ. ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಅವರು ಪ್ರಮುಖರ ಸಭೆಯಲ್ಲಿ ಭಾಗವಹಿಸಲು ಶುಕ್ರವಾರ ರಾತ್ರಿ ಬೆಂಗಳೂರಿಗೆ ಬಂದರು.

ಯಾರಿಗೆ ಎಷ್ಟು ಸ್ಥಾನ ಗೆಲ್ಲುವ ಅವಕಾಶ

ವಿಧಾನಸಭೆಯಿಂದ ಪರಿಷತ್‌ಗೆ	ಬಿಜೆಪಿ 4, ಕಾಂಗ್ರೆಸ್ 2, ಜೆಡಿಎಸ್ 1
ರಾಜ್ಯಸಭೆಗೆ	ಬಿಜೆಪಿ 2, ಕಾಂಗ್ರೆಸ್ 1

ಇನ್ನೊಂದು ಸ್ಥಾನಕ್ಕೆ ಪೈಪೋಟಿ ನಡೆಯಲಿದೆ.

ಚುನಾವಣೆ ದಿನಾಂಕ

ವಿಧಾನಸಭೆಯಿಂದ ಪರಿಷತ್	ಜೂನ್ 3	7 ಸ್ಥಾನ
ಶಿಕ್ಷಕರು ಮತ್ತು ಪದವೀಧರ ಕ್ಷೇತ್ರ	ಜೂನ್ 13	4 ಸ್ಥಾನ
ರಾಜ್ಯಸಭೆ	ಜೂನ್ 10	4 ಸ್ಥಾನ



ಚಾಮರಾಜನಗರ ತಾಲ್ಲೂಕಿನ ಬಸಪ್ಪನ ಪಾಳ್ಯದಲ್ಲಿ ಕಾಲುವೆ ಒಡೆದು ಮನೆಗಳಿಗೆ ನೀರು ನುಗ್ಗಿರುವುದು

ಕಾಲುವೆ ಒಡೆದು ಮನೆಗಳಿಗೆ ನೀರು

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: ಗಡಿ ಜಿಲ್ಲೆ ಚಾಮರಾಜನಗರ ಸೇರಿದಂತೆ ಮೈಸೂರು ಭಾಗದಲ್ಲಿ ಜಿಟಿಜಿಟಿ ಮಳೆ ಮುಂದುವರಿದಿದೆ. ಚಾಮರಾಜನಗರ ಜಿಲ್ಲೆಯಾದ್ಯಂತ ಗುರುವಾರ ರಾತ್ರಿಯಿಡೀ ಉತ್ತಮ ಮಳೆಯಾಗಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಜಿಲ್ಲೆಯಲ್ಲಿ ಸರಾಸರಿ 3.97 ಸೆಂ.ಮೀ ಮಳೆಯಾಗಿದೆ. ಮಳೆ ಹಾಗೂ ಶೀತ ವಾತಾವರಣದಿಂದಾಗಿ ಜನಜೀವನ ಅಸ್ತವ್ಯಸ್ತವಾಯಿತು. ಕೃಷಿ ಚಟುವಟಿಕೆಗಳಿಗೂ ಹಿನ್ನಡೆಯಾಯಿತು.

ಒಡೆದ ಕಾಲುವೆ: ಚಾಮರಾಜನಗರ ತಾಲ್ಲೂಕು ಚಂದಕವಾಡಿ ಹೋಬಳಿಯ ಬಸಪ್ಪನಪಾಳ್ಯದಲ್ಲಿ ಗುರುವಾರ ರಾತ್ರಿ ಕೆರೆಯ ಕಾಲುವೆ ಒಡೆದು 25ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿತು. ದಿನಸಿ ಸಾಮಗ್ರಿ, ಬಟ್ಟೆ ಸೇರಿದಂತೆ ದಿನ ಬಳಕೆ ವಸ್ತುಗಳು ನೀರಲ್ಲಿ ತೋಯ್ದವು.

ನಸುಕಿನ ವೇಳೆ ಮಳೆ: ಮೈಸೂರು ನಗರದಲ್ಲಿ ಶುಕ್ರವಾರ ನಸುಕಿನಲ್ಲಿ ಸಾಧಾರಣ ಮಳೆ ಸುರಿದಿಯಿತು. ಗುರುವಾರವೂ ಇಡೀ ದಿನ ಉತ್ತಮ ಮಳೆಯಾಗಿತ್ತು. ಕೊಡಗು ಜಿಲ್ಲೆಯಾದ್ಯಂತ ದಿನವಿಡೀ ಸಾಧಾರಣ, ಮಂಡ್ಯ ಜಿಲ್ಲೆಯ ಕೆಲವೆಡೆ ತುಂತುರು ಮಳೆಯಾಗಿದೆ.

ಪಿಎಸ್ಐ ನೇಮಕಾತಿ ಪರೀಕ್ಷೆ ಅಕ್ರಮ; ಕಾರ್ಬನ್ ಕಾಪಿ ನಾಶ ಮಾಡಿದ ಮಂಜುನಾಥ ಮೇಳಕುಂದಿ

ಸಾಕ್ಷ್ಯಾಧಾರ ಸಂಗ್ರಹ ಸಿಐಡಿಗೆ ಸವಾಲು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್ಐ ನೇಮಕಾತಿ ಪರೀಕ್ಷೆ ಬರೆದ ಕೆಲ ಅಭ್ಯರ್ಥಿಗಳ ಒಎಂಆರ್ ಶೀಟ್‌ನ ಕಾರ್ಬನ್ ಕಾಪಿಗಳನ್ನು, ಆರೋಪಿ ಮಂಜುನಾಥ ಮೇಳಕುಂದಿ ನಾಶಪಡಿಸಿದ್ದು, ಸಾಕ್ಷ್ಯಾಧಾರ ಸಂಗ್ರಹಿಸುವುದೇ ಸಿಐಡಿ ಅಧಿಕಾರಿಗಳಿಗೆ ಸವಾಲಾಗಿದೆ.

‘2021ರ ಅ. 3ರಂದು ನಡೆದಿದ್ದ 545 ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲೂ ಇದೇ ರೀತಿ ವ್ಯವಹಾರ ಕುದುರಿಸಿದ್ದ. ನೇಮಕಾತಿ ಆದೇಶ ಬರುವವರೆಗೂ ಅಭ್ಯರ್ಥಿಗಳ ಒಎಂಆರ್ ಶೀಟಿನ ಕಾರ್ಬನ್ ಕಾಪಿ ಹಾಗೂ ಕೆಲ ಶೈಕ್ಷಣಿಕ ದಾಖಲೆಗಳನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದ. ಅಕ್ರಮ ಹೊರಬೀಳುತ್ತಿದ್ದಂತೆಯೇ ಕಾರ್ಬನ್ ಕಾಪಿಗಳನ್ನು ಹರಿದು, ನಾಲೆಗೆ ಬಿಸಾಕಿದ’ ಎಂದು ಮೂಲಗಳು ತಿಳಿಸಿವೆ.

‘ಒಎಂಆರ್ ಶೀಟಿನಲ್ಲಿ ವ್ಯತ್ಯಾಸ ಕಂಡುಬಂದ ಮೂವರು ಅಭ್ಯರ್ಥಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಇವರೆಲ್ಲ ನಗರದ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿನ ಕೇಂದ್ರದಲ್ಲೇ ಪರೀಕ್ಷೆ ಬರೆದವರು. ಆದರೆ, ರಾಜ್ಯದ ಬೇರೆ ಬೇರೆ ಪರೀಕ್ಷಾ ಕೇಂದ್ರಗಳಲ್ಲೂ ಮಂಜುನಾಥ ಮೇಳಕುಂದಿ ಇದೇ ರೀತಿಯ ಅಕ್ರಮ ಎಸಗಿದ ಸಾಧ್ಯತೆಯಿದ್ದು, ಸಿಐಡಿ ಅಧಿಕಾರಿಗಳು ತನಿಖೆ ನಡೆಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ. ಅಲ್ಲದೇ, ಎಂ.ಎಸ್. ಇರಾನಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ನಡೆದ ಅಕ್ರಮ ಆರೋಪದಡಿ ಬಂಧಿತರಾದ ಅಭ್ಯರ್ಥಿ ಪ್ರಭು, ಅವರ ತಂದೆ ಶರಣಪ್ಪ, ಮಧ್ಯವರ್ತಿ ಚಂದ್ರಕಾಂತ ಕುಲಕರ್ಣಿ ಅವರನ್ನೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮಂಜುನಾಥ ಮೇಳಕುಂದಿಯ ತಮ್ಮ ರವೀಂದ್ರ ಮೇಳಕುಂದಿ ಕೂಡ ಆರೋಪಿಯಾಗಿದ್ದು, ಇನ್ನೂ ಪತ್ತೆಯಾಗಿಲ್ಲ. ಶಾಂತಿಬಾಯಿ ಕೂಡ ಸಿಕ್ಕಿಲ್ಲ.

ಅಂಡರ್ಸನ್‌ಪೇಟೆ ಎಸ್ಐ ಕರೆದೊಯ್ದು ಸಿಐಡಿ

ಕೋಲಾರ: ಪಿಎಸ್ಐ ನೇಮಕಾತಿ ಅಕ್ರಮದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು ಕೆಜಿಎಫ್‌ನ ಅಂಡರ್ಸನ್‌ಪೇಟೆ ಠಾಣೆಯ ಎಸ್ಐ ಸುನಿಲ್‌ಕುಮಾರ್ ಅವರನ್ನು ವಿಚಾರಣೆಗೆ ಕರೆದೊಯ್ದಿದ್ದಾರೆ.

ಪ್ರೊಬೇಷನರಿ ಪಿಎಸ್ಐ ಸುನಿಲ್‌ಕುಮಾರ್ ಅವರು ಒಂದು ತಿಂಗಳಿನಿಂದ ಈ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನೇಮಕಾತಿ ಅಕ್ರಮದ ಆರೋಪಿಗಳ ಜತೆ ನಂಟು ಹೊಂದಿರುವ ಆರೋಪದಡಿ ಗುರುವಾರ ರಾತ್ರಿ ಕರೆದೊಯ್ಯಲಾಗಿದೆ ಎಂದು ಗೊತ್ತಾಗಿದೆ.

ಮಂಡ್ಯ ಜಿಲ್ಲೆಯ ಕೆ.ಎಂ ದೊಡ್ಡಿ ಗ್ರಾಮದ ಸುನಿಲ್‌ಕುಮಾರ್ ಅವರು 2019ರಲ್ಲಿ ಎಸ್ಐ ಪರೀಕ್ಷೆ ಬರೆದು ಆಯ್ಕೆಯಾಗಿದ್ದರು. ತರಬೇತಿ ಅವಧಿ ಪೂರ್ಣಗೊಳಿಸಿದ ನಂತರ ಅವರನ್ನು ಅಂಡರ್ಸನ್‌ಪೇಟೆ ಠಾಣೆಯಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.

‘ಸಿಐಡಿ ಅಧಿಕಾರಿಗಳು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ. ಹೆಚ್ಚಿನ ಮಾಹಿತಿ ಕೊಟ್ಟಿಲ್ಲ’ ಎಂದು ಕೆಜಿಎಫ್ ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಧರಣಿದೇವಿ ‘ಪ್ರಜಾವಾಣಿ’ಗೆ ಖಚಿತಪಡಿಸಿದ್ದಾರೆ.

ಡಿವೈಎಸ್‌ಪಿ ವೈಜನಾಥ ಕರೆತಂದು ಮಹಜರು

ಕಲಬುರಗಿ: ಬ್ಲೂಟೂತ್ ಬಳಸಿ ನಡೆಸಿದ ಅಕ್ರಮಕ್ಕೆ ಸಂಬಂಧಿಸಿ ಬಂಧಿತ ಇಲ್ಲಿನ 6ನೇ ಕೆಎಸ್‌ಆರ್‌ಪಿ ಬಟಾಲಿಯನ್‌ನ ಸಹಾಯಕ ಕಮಾಂಡೆಂಟ್ (ಡಿವೈಎಸ್ಪಿ) ವೈಜನಾಥ ರೇವೂರಗೆ ಸಿಐಡಿ ಅಧಿಕಾರಿಗಳು ಶುಕ್ರವಾರ ಕೆಲ ಸ್ಥಳಗಳಿಗೆ ಕರೆದೊಯ್ದು ಮಹಜರು ನಡೆಸಿದರು.

ನಗರದ ಹೊರವಲಯದ ಉದನೂರ ಕ್ರಾಸ್ ಬಳಿ ಕರೆತಂದು ಸ್ಥಳದ ಮಹಜರು ಮಾಡಿಸಿದರು. ಪ್ರಮುಖ ಆರೋಪಿ ರುದ್ರಗೌಡ ಡಿ. ಪಾಟೀಲ, ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಮುಖ್ಯಸ್ಥೆ ದಿವ್ಯಾ ಹಾಗರಗಿ ಸೇರಿ ಇದೇ ಸ್ಥಳದಲ್ಲಿ ‘ಹಣಕಾಸಿನ ಡೀಲ್’ ನಡೆಸಿದ್ದಾಗಿ ವೈಜನಾಥ ತಿಳಿಸಿದ್ದ’ ಎಂದು ಮೂಲಗಳು ತಿಳಿಸಿವೆ.

ಪತ್ನಿ ಜೈಲರ್; ಪತಿ ಕೈದಿ!

ಕಲಬುರಗಿ: ಪಿಎಸ್ಐ ನೇಮಕಾತಿ ಪರೀಕ್ಷೆ ಹಗರಣದಲ್ಲಿ ಬಂಧಿತ, ಇಲ್ಲಿನ ಕೆಎಸ್‌ಆರ್‌ಪಿ ಸಹಾಯಕ ಕಮಾಂಡೆಂಟ್ (ಡಿವೈಎಸ್ಪಿ) ವೈಜನಾಥ ಕಲ್ಯಾಣಿ ರೇವೂರಗೆ ಶುಕ್ರವಾರ ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ಕರೆದೊಯ್ಯಲಾಯಿತು. ವೈಜನಾಥ ಪತ್ನಿ ಸುನಂದಾ ಇದೇ ಕಾರಾಗೃಹದ ಜೈಲರ್ ಆಗಿದ್ದಾರೆ.

ಪೊಲೀಸ್ ವಾಹನದಲ್ಲಿ ಕರೆತಂದ ಸಿಐಡಿ ಅಧಿಕಾರಿಗಳು ಜೈಲಿನ ಮುಂದೆ ನಿಲ್ಲಿಸಿದ ಕೂಡಲೇ ಇಳಿದ ವೈಜನಾಥ, ಲಗುಬಗೆಯಿಂದ ಜೈಲಿನೊಳಗೆ ಧಾವಿಸಿದ. ಜೈಲು ಸಿಬ್ಬಂದಿ ತಡೆದು, ತಪಾಸಣೆ ಬಳಿಕ ಒಳಗೆ ಬಿಟ್ಟರು.

ಪತಿ ಜೈಲು ಸೇರಿದ್ದರಿಂದ ಸುನಂದಾ ಅವರಿಗೆ ತಾತ್ಕಾಲಿಕ ರಜೆ ನೀಡಲಾಗಿದೆ ಎಂದು ಕಾರಾಗೃಹ ಮೂಲಗಳು ತಿಳಿಸಿವೆ. ಸಿಐಡಿ ಕಸ್ಟಡಿ ಶುಕ್ರವಾರ (ಮೇ 13) ಮುಗಿದ ಕಾರಣ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. 3ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಸಹಾಯಕ ಸರ್ಕಾರಿ ಅಭಿಯೋಜಕ ಶಿವಶರಣಪ್ಪ ಹೋತಪೇಟ ಅವರು ಸಿಐಡಿ ಪರ ವಾದ ಮಂಡಿಸಿದರು.

ಉದಯಪುರದಲ್ಲಿ ಡಿಕೆಶಿ–ಎಂ.ಬಿ. ಪಾಟೀಲ ಕುಶಲೋಪರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಭೇಟಿ ಕುರಿತ ಹೇಳಿಕೆಯಿಂದ ಮುನಿಸಿಕೊಂಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಪ್ರದೇಶ ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಉದಯಪುರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ನಗುತ್ತಾ ಕುಶಲೋಪರಿ ನಡೆಸಿದ್ದಾರೆ.

‘ಸಚಿವ ಅಶ್ವತ್ಥ ನಾರಾಯಣ ತಮ್ಮ ಸ್ವಯಂ ರಕ್ಷಣೆಗಾಗಿ ಎಂ.ಬಿ. ಪಾಟೀಲ ಅವರನ್ನು ಭೇಟಿಮಾಡಿದ್ದಾರೆ’ ಎಂದು ಶಿವಕುಮಾರ್ ಹೇಳಿಕೆ ನೀಡಿದ್ದರು. ಅಶ್ವತ್ಥ ನಾರಾಯಣ ಮತ್ತು ಪಾಟೀಲ ಇಬ್ಬರೂ ಭೇಟಿಯನ್ನು ನಿರಾಕರಿಸಿದ್ದರು. ಶಿವಕುಮಾರ್ ಹೇಳಿಕೆ ಕುರಿತು ಪಾಟೀಲ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದರು. ಪಕ್ಷದ ವೇದಿಕೆಯಲ್ಲಿ ಪ್ರಶ್ನಿಸುವುದಾಗಿಯೂ ಹೇಳಿದ್ದರು.

ರಾಜಸ್ಥಾನದ ಉದಯಪುರದಲ್ಲಿ ಶುಕ್ರವಾರದಿಂದ ಆರಂಭವಾದ ‘ಕಾಂಗ್ರೆಸ್ ಚಿಂತನ ಶಿಬಿರ’ದಲ್ಲಿ ಇಬ್ಬರೂ ನಾಯಕರು ಮುಖಾಮುಖಿಯಾಗಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೂಡ ಈ ಸಂದರ್ಭದಲ್ಲಿ ಜತೆಗಿದ್ದರು.

ಶಿವಕುಮಾರ್ ಮತ್ತು ಎಂ.ಬಿ. ಪಾಟೀಲ ನಗುತ್ತಾ ಮಾತುಕತೆಯಲ್ಲಿ ತೊಡಗಿರುವುದು, ತಬ್ಬಿಕೊಂಡಿರುವ ಫೋಟೊಗಳನ್ನು ಕೆಪಿಸಿಸಿಯ ಅಧಿಕೃತ ಸಾಮಾಜಿಕ ಮಾಧ್ಯಮ ಗುಂಪುಗಳಲ್ಲಿ ಹಂಚಿಕೊಂಡಿದ್ದಾರೆ.



ರಾಜಸ್ಥಾನದ ಉದಯಪುರದಲ್ಲಿ ಶುಕ್ರವಾರ ಆರಂಭವಾದ ‘ಕಾಂಗ್ರೆಸ್ ಚಿಂತನ ಶಿಬಿರ’ದಲ್ಲಿ ಪಾಲ್ಗೊಂಡಿದ್ದ ಡಿ.ಕೆ. ಶಿವಕುಮಾರ್ ಮತ್ತು ಎಂ.ಬಿ. ಪಾಟೀಲ ಕುಶಲೋಪರಿಯಲ್ಲಿ ತೊಡಗಿರುವುದು

‘ಡಿಕೆಶಿ ಬಣ್ಣ ಬಯಲು ಮಾಡಿದ ರಮ್ಯಾ’

ಬೆಂಗಳೂರು: ‘ತಮ್ಮದೇ ಪಕ್ಷದ ಶಾಸಕ ಎಂ.ಬಿ.ಪಾಟೀಲ ಮತ್ತು ನನ್ನ ಹೆಸರು ಹೇಳಿಕೊಂಡು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಮ್ಮ ಬೇಳೆ ಬೇಯಿಸಿಕೊಳ್ಳಲು ಮುಂದಾಗಿದ್ದರು. ಅವರ ಬಣ್ಣವನ್ನು ರಮ್ಯಾ ಅವರ ಟ್ವೀಟ್ ಬಯಲು ಮಾಡಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ವ್ಯಂಗ್ಯವಾಡಿದ್ದಾರೆ.

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಟ್ವೀಟ್ ಸಮರದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಂಗ್ ನಂಬರ್ ಡಯಲ್ ಮಾಡಿದ ಶಿವಕುಮಾರ್ ಪೆಚ್ಚು ಮೋರೆ ಹಾಕಿಕೊಂಡು ಓಡಾಡಬೇಕಾಗಿದೆ’ ಎಂದರು.

‘ಸರ್ಕಾರದಲ್ಲಿ ನಾನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆ. ಆದರೂ ಅವರು ನನ್ನನ್ನು ನಿರ್ನಾಮ ಮಾಡಲು ಬಂದು ಅವರೇ ನಿರ್ನಾಮವಾಗುತ್ತಿದ್ದಾರೆ. ಟ್ವೀಟ್ ಕಿತ್ತಾಟ ಕಾಂಗ್ರೆಸ್‌ನ ಆಂತರಿಕ ವಿಚಾರ. ಆದರೆ, ನನ್ನ ಹೆಸರನ್ನು ಎಳೆದು ತಂದಿದ್ದರಿಂದ ನಾನು ಪ್ರತಿಕ್ರಿಯೆ ನೀಡುತ್ತಿದ್ದೇನೆ. ಶಿವಕುಮಾರ್ ಅವರ ಮಾತುಗಳನ್ನು ಅವರ ಪಕ್ಷದ ನಾಯಕರೇ ಖಂಡಿಸಿರುವುದು ಸ್ವಾಗತಾರ್ಹ. ವೈಯಕ್ತಿಕ ಸಂಬಂಧ ಮತ್ತು ರಾಜಕೀಯ ಎರಡನ್ನೂ ಬೆರೆಸುವುದು ನೀಚ ಮನಸ್ಥಿತಿ’ ಎಂದು ಅಶ್ವತ್ಥನಾರಾಯಣ ಕಿಡಿ ಕಾರಿದರು.

ಡಿವೈಎಸ್ಪಿ ಶಾಂತಕುಮಾರ್ 12 ದಿನ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಹೆಚ್ಚಿನ ವಿಚಾರಣೆಗಾಗಿ 12 ದಿನಗಳವರೆಗೆ ಸಿಐಡಿ ಅಧಿಕಾರಿಗಳ ಕಸ್ಟಡಿಗೆ ನೀಡಲಾಗಿದೆ.

2011 ರಿಂದ ಪೊಲೀಸ್ ನೇಮಕಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಸಿಐಡಿ ಅಧಿಕಾರಿಗಳು ಗುರುವಾರ ಬಂಧಿಸಿದ್ದರು. ಅವರನ್ನು ಶುಕ್ರವಾರ ಮಧ್ಯಾಹ್ನ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

'ಅಕ್ರಮ ಪ್ರಕರಣದಲ್ಲಿ ಶಾಂತಕುಮಾರ್ ಭಾಗಿಯಾಗಿರುವುದಕ್ಕೆ ಕೆಲ ಪುರಾವೆಗಳು ಸಿಕ್ಕಿವೆ. ಅವುಗಳನ್ನು ಆಧರಿಸಿ ಮತ್ತಷ್ಟು ಮಂದಿಯನ್ನು ಬಂಧಿಸಬೇಕಿದೆ. ಹೀಗಾಗಿ, ಶಾಂತಕುಮಾರ್ ಅವರನ್ನು ವಿಚಾರಣೆಗಾಗಿ ಕಸ್ಟಡಿಗೆ ನೀಡಬೇಕು’ ಎಂದು ಸಿಐಡಿ ಅಧಿಕಾರಿಗಳು ನ್ಯಾಯಾಲಯವನ್ನು ಕೋರಿದರು.

ವಿಚಾರಣೆ ನಡೆಸಿದ ನ್ಯಾಯಾಧೀಶ ಆನಂದ್ ಟಿ. ಚವ್ಹಾಣ್, ಆರೋಪಿ ಶಾಂತಕುಮಾರ್ ಅವರನ್ನು 12 ದಿನ ಸಿಐಡಿ ಕಸ್ಟಡಿಗೆ ಒಪ್ಪಿಸಿದರು.

ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಬಂಧಿಸಲಾಗಿದ್ದ ಕಾನ್‌ಸ್ಟೆಬಲ್ ಸೋಮನಾಥ್ ಹಿರೇಮಠ ಹಾಗೂ ಯಶವಂತ್ ಗೌಡ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಸಿಐಡಿ ಕಚೇರಿಯಲ್ಲಿ ವಿಚಾರಣೆ: ‘ಆಂತರಿಕ ಭದ್ರತಾ ವಿಭಾಗದಲ್ಲಿದ್ದ ಶಾಂತಕುಮಾರ್, ನಿಯೋಜನೆ ಮೇರೆಗೆ 2011 ರಿಂದ ಪೊಲೀಸ್ ನೇಮಕಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಪಿಎಸ್ಐ ಅಕ್ರಮ ಬಗ್ಗೆ ಪ್ರಕರಣ ದಾಖಲಾಗುತ್ತಿದ್ದಂತೆ ಮಾತೃ ವಿಭಾಗವಾದ ಆಂತರಿಕ ಭದ್ರತಾ ವಿಭಾಗಕ್ಕೆ ರಾಜ್ಯ ಸರ್ಕಾರ ವಾಪಸು ಕಳುಹಿಸಿತ್ತು. ಇದೀಗ ಪ್ರಕರಣದಲ್ಲಿ ಶಾಂತಕುಮಾರ್ ಅವರನ್ನು ಬಂಧಿಸಿ, ಕಸ್ಟಡಿಗೆ ಪಡೆಯಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಸಿಐಡಿ ಕಚೇರಿ ಇರುವ ಕಟ್ಟಡದಲ್ಲೇ ಪೊಲೀಸ್ ನೇಮಕಾತಿ ವಿಭಾಗವಿದೆ. ಇದೇ ಸ್ಥಳದಲ್ಲಿ ಅಕ್ರಮ ನಡೆದಿದ್ದು, ಇದೆಲ್ಲವೂ ಶಾಂತಕುಮಾರ್ ಅವರಿಗೆ ಗೊತ್ತಿದೆ. ಅಕ್ರಮ ಹೇಗಾಯಿತು? ಎಂಬುದನ್ನು ತಿಳಿಯಲು ವಿಚಾರಣೆ ಮುಂದುವರಿಸಲಾಗಿದೆ. ವಿಭಾಗ ಹಾಗೂ ಇತರೆ ಸ್ಥಳಗಳಿಗೂ ಆರೋಪಿಯನ್ನು ಕರೆದೊಯ್ದು ಮಾಹಿತಿ ಪಡೆಯಲಾಗುವುದು’ ಎಂದೂ ತಿಳಿಸಿವೆ.

ಸಿನಿಮಾದಲ್ಲೂ ‘ಪಿಎಸ್‌ಐ’ ಆಗಿದ್ದ ಆರೋಪಿ

‘ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿತನಾಗಿರುವ ಅಭ್ಯರ್ಥಿ ಜಿ.ಸಿ. ರಾಘವೇಂದ್ರ, ‘ಅಟ್ಟಯ್ಯ ವರ್ಸಸ್ ಹಂದಿ ಕಾಯೋಳು' ಸಿನಿಮಾದಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ಪಾತ್ರ ಮಾಡಿದ್ದ. ಅದರಿಂದ ಪ್ರೇರಣೆಗೊಂಡು, ಹಣ ನೀಡಿ ಅಕ್ರಮವಾಗಿ ಪಿಎಸ್ಐ ಆಗಲು ಹೊರಟಿದ್ದ’ ಎಂದು ಸಿಐಡಿ ಮೂಲಗಳು ಹೇಳಿವೆ.

‘ರಾಘವೇಂದ್ರನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆತ ಪರೀಕ್ಷೆ ಬರೆದಿದ್ದ ಕೇಂದ್ರದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಿ ಪರಿಶೀಲಿಸಬೇಕಿದೆ’ ಎಂದೂ ತಿಳಿಸಿವೆ.

‘ನಟ ಸುದೀಪ್ ಅಭಿನಯದ ‘ಹೆಬ್ಬುಲಿ’ ಸಿನಿಮಾನದಲ್ಲೂ ಆರೋಪಿ ರಾಘವೇಂದ್ರ, ಸೈನಿಕನ ಪಾತ್ರ ಮಾಡಿದ್ದ’ ಎಂದೂ ಹೇಳಿವೆ.

ನರ್ಸಿಂಗ್: ಸದನ ಸಮಿತಿ ಆದೇಶಕ್ಕೆ ತಡೆ

ಬೆಂಗಳೂರು: 2021 ಕ್ಕೂ ಮುನ್ನ ಅನುಮತಿ ಪಡೆದ ನರ್ಸಿಂಗ್ ಕಾಲೇಜುಗಳ ಮಾನ್ಯತೆ ಮತ್ತು ಅನುದಾನದ ಬಗ್ಗೆ ಪರಿಶೀಲನೆ ನಡೆಸಲು ಜಂಟಿ ಸದನ ಸಮಿತಿ ರಚಿಸುವ ವಿಧಾನಪರಿಷತ್ ಸಚಿವಾಲಯದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ರಜಾಕಾಲದ ವಿಶೇಷ ನ್ಯಾಯಪೀಠ ವಿಚಾರಣೆ ನಡೆಸಿತು. ‘2021 ಕ್ಕೂ ಹಿಂದೆ ಆರಂಭ ವಾಗಿರುವ ನರ್ಸಿಂಗ್ ಕಾಲೇಜುಗಳ ಕುರಿತಂತೆ ಪರಿಶೀಲನೆ ನಡೆಸಲು ರಚಿಸಲಾಗಿರುವ ಜಂಟಿ ಸದನ ಸಮಿತಿಗೆ ತಡೆ ನೀಡಿದ ನ್ಯಾಯಪೀಠ, ಶಾಸಕಾಂಗದ ಅಧಿಕಾರಕ್ಕೆ ಸಂಬಂಧಿಸಿದಂತೆ ಕಾಯ್ದೆಯನ್ನು ಪುನರ್ ಪರಿಶೀಲಿಸುವ ಅಗತ್ಯವಿದೆ’ ಎಂದಿದೆ.

ಕರ್ನಾಟಕ ನರ್ಸಿಂಗ್ ಮತ್ತು ಆರೋಗ್ಯ ವಿಜ್ಞಾನಗಳ ನಿರ್ವಹಣೆಯ ರಾಜ್ಯ ಒಕ್ಕೂಟ, ಹೈದರಾಬಾದ್-ಕರ್ನಾಟಕ ನರ್ಸಿಂಗ್ ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ಮತ್ತು ಕರ್ನಾಟಕ ನರ್ಸಿಂಗ್ ಸಂಸ್ಥೆಗಳ ಮ್ಯಾನೇಜ್‌ಮೆಂಟ್ ಈ ಅರ್ಜಿ ಸಲ್ಲಿಸಿವೆ.

ರಮ್ಯಾ ತೋರಿದ್ದು ಅಶಿಸ್ತು: ಧ್ರುವನಾರಾಯಣ

ಪ್ರಜಾವಾಣಿ ವಾರ್ತೆ

ಮೈಸೂರು: ‘ನಟಿ ರಮ್ಯಾ ಕೆಪಿಸಿಸಿ ಅಧ್ಯಕ್ಷರ ವಿರುದ್ಧ ಟ್ವೀಟ್ ಮಾಡಿರುವುದು ಅಶಿಸ್ತು ಮಾತ್ರವಲ್ಲ, ಉದ್ಧಟತನವೂ ಹೌದು. ಈ ಕುರಿತು ಅವರನ್ನು ಕರೆದು ವಿವರಣೆ ಕೇಳುತ್ತೇವೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ತಿಳಿಸಿದರು.

‘ರಮ್ಯಾ, ಮೊಹಮ್ಮದ್ ನಲಪಾಡ್ ಅಥವಾ ನಾನೇ ಆಗಲಿ ಪಕ್ಷದ ವಿರುದ್ಧ ನಡೆದುಕೊಂಡರೆ ಅದು ಅಶಿಸ್ತು’ ಎಂದು ಶುಕ್ರವಾರ ಇಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಭಿನ್ನಾಭಿಪ್ರಾಯಗಳಿದ್ದರೆ ಪಕ್ಷದ ವರಿಷ್ಠರು, ರಾಜ್ಯದ ಉಸ್ತುವಾರಿಗಳ ಗಮನಕ್ಕೆ ತರಬಹುದಿತ್ತು. ಇದು ಆಂತರಿಕ ವಿಚಾರವಾಗಿದ್ದು, ಪಕ್ಷದ ಚೌಕಟ್ಟಿನೊಳಗೆ ಬಗೆಹರಿಸಿಕೊಳ್ಳುತ್ತೇವೆ’ ಎಂದು ಹೇಳಿದರು.

ರಮ್ಯಾ ಏನು ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ: ನಲಪಾಡ್ ಮೈಸೂರು: ‘ರಮ್ಯಾ ಪಕ್ಷದಿಂದ ಸಂಸದರಾಗಿದ್ದರು. ನಾಲ್ಕು ವರ್ಷಗಳಿಂದ ಅವರು ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬ ವಿಚಾರ ಗೊತ್ತಿಲ್ಲ’ ಎಂದು ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಹೇಳಿದರು.

ರಮ್ಯಾ ಟ್ವೀಟ್ ಕುರಿತು ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ‘ಆ ರೀತಿ ಟ್ವೀಟ್ ಮಾಡಬಾರದಿತ್ತು. ಡಿ.ಕೆ. ಶಿವಕುಮಾರ್ ಜತೆ ಏನೇ ಭಿನ್ನಾಭಿಪ್ರಾಯಗಳು ಇದ್ದರೆ, ಕರೆ ಮಾಡಿ ಅಥವಾ ಪಕ್ಷದ ವೇದಿಕೆಯಲ್ಲಿ ಚರ್ಚಿಸಲು ಅವಕಾಶವಿತ್ತು’ ಎಂದರು.

‘ನಾನು ರಮ್ಯಾ ವಿರುದ್ಧ ನಿಂತಿಲ್ಲ. ಸಂಸದೆ, ಪಕ್ಷದ ಸಾಮಾಜಿಕ ಮಾಧ್ಯಮಗಳ ಉಸ್ತುವಾರಿಯಾಗಿ ಕೆಲಸ ಮಾಡಿದ್ದಾರೆ. ₹ 8 ಕೋಟಿ ತೆಗೆದುಕೊಂಡು ಹೋಗಿದ್ದಾರೆ ಎಂಬ ಆರೋಪವನ್ನು ನಾನು ಒಪ್ಪುವುದಿಲ್ಲ. ಅವರು ಶಿಸ್ತಿನ ಸಿಪಾಯಿ’ ಎಂದರು.

ರಾಜ್ಯದಲ್ಲಿ ‘ಕೆ–23 ಗ್ಯಾಂಗ್’: ಅಶೋಕ ವ್ಯಂಗ್ಯ

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಜಿ–23 ಇದ್ದ ಹಾಗೆ ಕರ್ನಾಟಕ ಕಾಂಗ್ರೆಸ್‌ನಲ್ಲಿ ಕೆ–23 ಭಿನ್ನಮತೀಯ ಗ್ಯಾಂಗ್ ಆರಂಭವಾಗುತ್ತಿದ್ದು, ಇದಕ್ಕೆ ಮಾಜಿ ಸಂಸದೆ ರಮ್ಯಾ ಇದಕ್ಕೆ ಮುಹೂರ್ತ ಇಟ್ಟಿದ್ದಾರೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾಂಗ್ರೆಸ್ ಮನೆಯೊಂದು ಮೂರು ಬಾಗಿಲು ಎಂಬಂತಾಗಿದೆ. ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರದು ಒಂದೊಂದು ಬಾಗಿಲು ಆಗಿದ್ದರೆ, ರಮ್ಯಾ ಮೂರನೇ ಬಾಗಿಲು’ಎಂದರು.

‘ಆ್ಯಸಿಡ್ ದಾಳಿ ಸಂತ್ರಸ್ತೆಯರಿಗೆ ವಸತಿ, ಆರ್ಥಿಕ ನೆರವು’

ಒಂದನೇ ಪುಟದಿಂದ

ಆ್ಯಸಿಡ್ ದಾಳಿ ಸಂತ್ರಸ್ತರಿಗೆ ನೀಡುತ್ತಿದ್ದ ಮಾಸಿಕ ಪಿಂಚಣಿ ಮೊತ್ತವನ್ನು ₹3,000 ದಿಂದ ₹10,000ಕ್ಕೆ ಹೆಚ್ಚಿಸಲಾಗಿದೆ. ಸಮಾರಂಭದಲ್ಲಿ ಕೆಲವು ಸಂತ್ರಸ್ತರಿಗೆ ಮುಖ್ಯಮಂತ್ರಿ ಪಿಂಚಣಿ ಆದೇಶ ವಿತರಿಸಿದರು. ಆಗ ಸಂತ್ರಸ್ತೆಯರು ತಮ್ಮ ಸಮಸ್ಯೆಗಳನ್ನು ಮುಖ್ಯಮಂತ್ರಿಯವರ ಬಳಿ ಹೇಳಿಕೊಂಡರು. ಬಳಿಕ ಸಮಾರಂಭ ಉದ್ದೇಶಿಸಿ ಮಾತನಾಡಿದ ಬೊಮ್ಮಾಯಿ, ಆ್ಯಸಿಡ್ ದಾಳಿಯ ಸಂತ್ರಸ್ತರಿಗೆ ನಿವೇಶನ, ಮನೆ ಮತ್ತು ಸ್ವಯಂ ಉದ್ಯೋಗಕ್ಕೆ ನೆರವು ನೀಡುವ ಘೋಷಣೆ ಮಾಡಿದರು.

‘ಆ್ಯಸಿಡ್ ದಾಳಿಯಿಂದ ಸಂತ್ರಸ್ತರಾದ ಎಲ್ಲ ಮಹಿಳೆಯರಿಗೂ ಸರ್ಕಾರದಿಂದ ನಿವೇಶನ ಮಂಜೂರು ಮಾಡಿ, ಮನೆಯನ್ನೂ ನಿರ್ಮಿಸಿ ಕೊಡಲಾಗುವುದು. ಸ್ವಯಂ ಉದ್ಯೋಗ ಯೋಜನೆಯಡಿ ತಲಾ ₹ 5 ಲಕ್ಷ ನೆರವು ನೀಡಲಾಗುವುದು. ಶನಿವಾರವೇ ಈ ಸಂಬಂಧ ಆದೇಶ ಹೊರಡಿಸಲಾಗುವುದು’ ಎಂದರು.

‘ರಕ್ಷಿಸಬೇಕಾದ ಪುರುಷರೇ ಮಹಿಳೆಯರ ಮೇಲೆ ಆ್ಯಸಿಡ್ ದಾಳಿ ನಡೆಸಿ ಅವರು ಜೀವನಪರ್ಯಂತ ನರಳುವಂತೆ ಮಾಡಿದ್ದಾರೆ. ಇಂತಹ ಕೃತ್ಯಗಳು ಪುರುಷರು ತಲೆತಗ್ಗಿಸುವಂತೆ ಮಾಡಿವೆ. ನೋವು ತುಂಬಿಕೊಂಡು ಜೀವನ ನಡೆಸುವ ಸಂತ್ರಸ್ತೆಯರ ಧೈರ್ಯವನ್ನು ಶ್ಲಾಘಿಸಬೇಕಿದೆ. ಈಗ ಸರ್ಕಾರ ಅವರ ನೆರವಿಗೆ ಬರುತ್ತಿದೆ’ ಎಂದರು.



ಸಮಾರಂಭದಲ್ಲಿ ವಿವಿಧ ನೆರವು ಘೋಷಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಆ್ಯಸಿಡ್ ದಾಳಿ ಸಂತ್ರಸ್ತೆಯರು ಮತ್ತು ಅವರ ಕುಟುಂಬದವರು ನಮಸ್ಕರಿಸಿ, ಧನ್ಯವಾದ ಹೇಳಿದರು – ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ವರದಿಯಾಗಿರುವ ಆ್ಯಸಿಡ್ ದಾಳಿ ಪ್ರಕರಣಗಳ ಸಂಖ್ಯೆ

ವರ್ಷ	ಪ್ರಕರಣಗಳ ಸಂಖ್ಯೆ
2019	07
2020	05
2021	01
2022	02

ಆ್ಯಸಿಡ್ ಸಂತ್ರಸ್ತೆಯರಿಗೆ ವಸತಿ ಸೌಕರ್ಯ ಮತ್ತು ಸ್ವಯಂ ಉದ್ಯೋಗ ಎರಡಕ್ಕೂ ನೆರವು ಘೋಷಿಸಿ ಮುಖ್ಯಮಂತ್ರಿ ತಾಯಿ ಹೃದಯ ಪ್ರದರ್ಶಿಸಿದ್ದಾರೆ

–ಆರ್.ಅಶೋಕ, ಸಚಿವ

ಸ್ವಾಮೀಜಿ ವೇಷದಲ್ಲಿ ಸಿಕ್ಕಿಬಿದ್ದ ನಾಗೇಶ್



ಬೆಂಗಳೂರು: ಪ್ರೀತಿ ನಿರಾಕರಿಸಿದರೆಂಬ ಕಾರಣಕ್ಕೆ 24 ವರ್ಷದ ಯುವತಿ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿದ್ದ ಆರೋಪಿ ನಾಗೇಶ್ ಬಾಬು (30), ತಮಿಳುನಾಡಿನ ತಿರುವಣ್ಣಾಮಲೈನಲ್ಲಿ ಶುಕ್ರವಾರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

‘ಏಪ್ರಿಲ್ 28ರಂದು ಕೃತ್ಯ ಎಸಗಿದ್ದ ನಾಗೇಶ್, ತಮಿಳುನಾಡಿಗೆ ಹೋಗಿ ಸ್ವಾಮೀಜಿ ವೇಷ ಧರಿಸಿದ್ದ. ತಿರುವಣ್ಣಾಮಲೈನಲ್ಲಿರುವ ಶಿವ ದೇವಸ್ಥಾನದ ಕೊಠಡಿಯೊಂದರಲ್ಲಿ ಉಳಿದುಕೊಂಡಿದ್ದ. ನಿತ್ಯವೂ ಧ್ಯಾನ ಹಾಗೂ ಪೂಜೆಯಲ್ಲಿ ತೊಡಗಿದ್ದ. ದೇವಸ್ಥಾನಕ್ಕೆ ಬರುತ್ತಿದ್ದ ಭಕ್ತರಿಗೂ ಉಪದೇಶ ಮಾಡುತ್ತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ಪತ್ತೆಗೆ ಎಂಟು ತಂಡಗಳನ್ನು ರಚಿಸಲಾಗಿತ್ತು. ಒಂದು ತಂಡ, ತಮಿಳುನಾಡಿನ ಎಲ್ಲ ದೇವಸ್ಥಾನಗಳಲ್ಲಿ ಶೋಧ ನಡೆಸುತ್ತಿತ್ತು. ಶಿವ ದೇವಸ್ಥಾನದಲ್ಲಿ ಹೊಸ ಸ್ವಾಮೀಜಿ ಬಂದಿರುವ ಮಾಹಿತಿ ಸ್ಥಳೀಯರಿಂದ ಗೊತ್ತಾಗಿತ್ತು. ಪೊಲೀಸರ ತಂಡ, ಭಕ್ತರ ವೇಷದಲ್ಲಿ ದೇವಸ್ಥಾನದೊಳಗೆ ಹೋಗಿತ್ತು. ಸ್ವಾಮೀಜಿ ವೇಷದಲ್ಲಿದ್ದ ನಾಗೇಶ್‌ನನ್ನು ನೋಡಿ ಖಚಿತಪಡಿಸಿಕೊಂಡಿತ್ತು. ನಂತರ, ಆರೋಪಿಯನ್ನು ಬಂಧಿಸಿ ಬೆಂಗಳೂರಿಗೆ ಕರೆತರುತ್ತಿದೆ’ ಎಂದೂ ತಿಳಿಸಿವೆ.

ವಿಚಾರಣೆ: ‘ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯ ಸುಂಕದಕಟ್ಟೆಯಲ್ಲಿರುವ ಫೈನಾನ್ಸ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಮೇಲೆ ಗುರುವಾರ (ಏಪ್ರಿಲ್ 28) ಬೆಳಿಗ್ಗೆ ಆರೋಪಿ ಆ್ಯಸಿಡ್ ಎರಚಿದ್ದ. ಇದೀಗ ಆರೋಪಿ ಸಿಕ್ಕಿಬಿದ್ದಿದ್ದು, ಆತನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುವುದು’ ಎಂದು ಮೂಲಗಳು ಹೇಳಿವೆ. ‘ಏಳು ವರ್ಷದಿಂದ ಸ್ನೇಹ ಹೊಂದಿದ್ದ ಯುವತಿ, ತನ್ನನ್ನು ಪ್ರೀತಿಸಲು ನಿರಾಕರಿಸಿದರು’ ಎಂಬ ಕಾರಣಕ್ಕೆ ಆ್ಯಸಿಡ್ ಎರಚಿದ್ದ. ಆತನಿಗೆ ಆ್ಯಸಿಡ್ ಸಿಕ್ಕಿದ್ದು ಎಲ್ಲಿ? ಎಂಬುದು ವಿಚಾರಣೆಯಿಂದ ತಿಳಿಯಬೇಕು’ ಎಂದಿವೆ

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹ

‘ಮತಾಂತರ ನಿಷೇಧ: ಸುಗ್ರೀವಾಜ್ಞೆ ತಿರಸ್ಕರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತ ಸಮುದಾಯದವರನ್ನು ಬೆದರಿಸುವ ಮತ್ತು ಅವರಿಗೆ ಕಿರುಕುಳ ನೀಡುವ ಉದ್ದೇಶದಿಂದ ಬಿಜೆಪಿ ಸರ್ಕಾರವು ‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಕಾಯ್ದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲು ಮುಂದಾಗಿದ್ದು, ಅದನ್ನು ರಾಜ್ಯಪಾಲರು ತಿರಸ್ಕರಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಈ ಕುರಿತು ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಭ್ರಷ್ಟಾಚಾರ ಮತ್ತು ದುರಾಡಳಿತದಿಂದ ರಾಜ್ಯದ ಬಿಜೆಪಿ ಸರ್ಕಾರ ನಿತ್ಯವೂ ಬೆತ್ತಲೆಯಾಗುತ್ತಿದೆ. ಈ ಸಂದರ್ಭದಲ್ಲಿ ಜನರ ಗಮನವನ್ನು ಬೇರೆಡೆ ಸೆಳೆಯುವುದಕ್ಕಾಗಿ ಮತಾಂತರ ನಿಷೇಧ ಕಾಯ್ದೆಯ ಜಾರಿಗೆ ಸುಗ್ರೀವಾಜ್ಞೆ ತರಲು ಹೊರಟಿದೆ’ ಎಂದು ಟೀಕಿಸಿದ್ದಾರೆ.

‘ಆಮಿಷ, ಒತ್ತಡ, ಬೆದರಿಕೆಗಳ ಮೂಲಕ ನಡೆಯುವ ಬಲಾತ್ಕಾರದ ಮತಾಂತರಗಳನ್ನು ತಡೆಯಲು ಈಗಾಗಲೇ ನಮ್ಮಲ್ಲಿ ಜಾರಿಯಲ್ಲಿರುವ ಕಾನೂನು ಸಶಕ್ತವಾಗಿದೆ. ಹೀಗಿದ್ದಾಗ `ಹೊಸ ಕಾಯ್ದೆಯ ಅವಶ್ಯಕತೆ ಏನಿದೆ? ಸಹಬಾಳ್ವೆ- ಸೌಹಾರ್ದ ಪರಂಪರೆಯ ಹಿಂದೂ ಧರ್ಮದ ನೈಜ ಅನುಯಾಯಿಗಳಾಗಿರುವವರು ಇಂತಹದ್ದೊಂದು ಅನಗತ್ಯ ಕಾಯ್ದೆಗೆ ಒತ್ತಾಯಿಸಿಲ್ಲ. ಇದನ್ನು ಒಪ್ಪುವುದೂ ಇಲ್ಲ. ಇದು ಸಂಘ ಪರಿವಾರದ ರಾಜಕೀಯ ಹಿಂದುತ್ವದ ಕಾರ್ಯಸೂಚಿಯಾಗಿದೆ’ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

‘ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲ ಅಲ್ಪಸಂಖ್ಯಾತರು ಮತ್ತು ಅವರ ಪೂಜಾ ಸ್ಥಳಗಳ ಮೇಲೆ ದಾಳಿ ನಡೆಯುವುದಕ್ಕೆ ದೇಶ ಸಾಕ್ಷಿಯಾಗಿದೆ. ಕರ್ನಾಟಕದಲ್ಲಿ ಚರ್ಚ್‌ಗಳ ಮೇಲೆ ನಡೆದಿರುವ ದಾಳಿಯಿಂದ ರಾಜ್ಯದ ಜನತೆ ತಲೆತಗ್ಗಿಸುವಂತಾಗಿದೆ. ತರಾತುರಿಯ ಮತಾಂತರ ನಿಷೇಧ ಕಾಯ್ದೆ ಇಂತಹ ದಾಳಿಗೆ ದುಷ್ಕರ್ಮಿಗಳ ಕೈಗೆ ನೀಡುವ ಆಯುಧವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪ್ರಶ್ನಿಸಿದ್ದಾರೆ.

ಸ್ವಇಚ್ಛೆಯಿಂದ ಮತಾಂತರಗೊಳ್ಳುವ ಹಕ್ಕನ್ನು ಸಂವಿಧಾನವೇ ನೀಡಿದೆ. ‘ಕರ್ನಾಟಕ ಧಾರ್ಮಿಕ ಹಕ್ಕು ಸಂರಕ್ಷಣಾ ಕಾಯ್ದೆಯನ್ನು ದುರುಪಯೋಗ ಮಾಡಿಕೊಳ್ಳಲು ಕಾಂಗ್ರೆಸ್ ಪಕ್ಷವು ಅವಕಾಶ ನೀಡುವುದಿಲ್ಲ. ಅನ್ಯಾಯ ಮತ್ತು ದೌರ್ಜನ್ಯಕ್ಕೊಳಗಾಗುವ ಪ್ರತಿಯೊಬ್ಬ ಅಲ್ಪಸಂಖ್ಯಾತರ ಜತೆ ತಮ್ಮ ಪಕ್ಷ ನಿಲ್ಲಲಿದೆ. ಈ ಕಾಯ್ದೆಯ ವಿರುದ್ಧ ಕಾಂಗ್ರೆಸ್ ಪಕ್ಷ ಜನಾಂದೋಲನ ನಡೆಸಲಿದೆ’ ಎಂದು ತಿಳಿಸಿದ್ದಾರೆ.

‘ಮತಾಂತರಗೊಂಡವರಿಗೆ ಮೀಸಲಾತಿ ರದ್ದು ಕ್ರಮ ಸೂಕ್ತ’

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರು ಬೌದ್ಧ ಧರ್ಮ ಹೊರತುಪಡಿಸಿ ಬೇರೆ ಯಾವುದೇ ಧರ್ಮಕ್ಕೆ ಮತಾಂತರಗೊಂಡರೂ ಮೀಸಲಾತಿ ಸೌಲಭ್ಯವನ್ನು ರದ್ದುಗೊಳಿಸುವ ಕ್ರಮ ಸ್ವಾಗತಾರ್ಹವಾದುದು ಎಂದು ಬಿಜೆಪಿ ಎಸ್.ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

‘ಈ ವರ್ಗದ ಜನರಿಗೆ ಆಸೆ ಆಮಿಷಗಳನ್ನು ಒಡ್ಡಿ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಮತಾಂತರ ಮಾಡಲಾಗುತ್ತಿದೆ. ಆದರೂ ಆ ಧರ್ಮಗಳಿಗೆ ಸೇರಿದ ಪರಿಶಿಷ್ಟರ ಬದುಕು ಬದಲಾಗಿಲ್ಲ. ಅವರಿಗೆ ಉತ್ತಮ ಬದುಕು ಸಿಗುತ್ತಿಲ್ಲ. ಬೌದ್ಧ ದರ್ಮ ಹೊರತುಪಡಿಸಿ ಕ್ರೈಸ್ತ ಮತ್ತು ಇಸ್ಲಾಂನಲ್ಲೂ ಅವರನ್ನು ದಲಿತರಾಗಿಯೇ ಪರಿಗಣಿಸಲಾಗುತ್ತದೆ’ ಎಂದು ಹೇಳಿದ್ದಾರೆ.



ಪೋಷಕರು ಮಕ್ಕಳಾಗುವ ಸಮಯ...

ಮನೆ ಒಳಗಾಗಲಿ, ಹೊರಗಾಗಲಿ 'ವಾತಾವರಣ' ಅಹ್ಲಾದಕರವಾಗಿದ್ದರೆ ಮಕ್ಕಳ ನಡವಳಿಕೆಯೂ ಉತ್ತಮವಾಗಿ ಇರುತ್ತದೆ. ಅಂಥ ಸಕಾರಾತ್ಮಕ ಪರಿಸರವನ್ನು ನಿರ್ಮಿಸುವುದು ಪೋಷಕರು ಮತ್ತು ನಾಗರಿಕರ ಜವಾಬ್ದಾರಿ.

ರಾಹುಲ ಬೆಳಗಲಿ

ವಾಯಲೆನ್ಸ್, ವಾಯಲೆನ್ಸ್, ವಾಯಲೆನ್ಸ್.. ಐ ಡೋಂಟ್ ಲೈಕ್ ಇಟ್.. ಸ್ಮಾರ್ಟ್‌ಫೋನ್‌ನಲ್ಲಿ ಬರುತ್ತಿದ್ದ ಕೆಜಿಎಫ್ -2 ಸಿನಿಮಾದ ನಟ ಯಶ್ ಡೈಲಾಗ್ ದೃಶ್ಯವನ್ನು ನೋಡುತ್ತಿದ್ದರು ತಾಯಿ ಸೌಜನ್ಯಾ. ಅವರ ಜೊತೆಗಿದ್ದ ಮಗಳು ಶ್ರಾವ್ಯಾ ತೊದಲ್ನುಡಿಯಲ್ಲಿ ವಾಲೆನ್ಸ್... ವಾಲೆನ್ಸ್ ಎನ್ನತೊಡಗಿದಳು. ಆಕೆಯ ವಯಸ್ಸು 6 ವರ್ಷ!

ಮಗ ಆಕಾಶ್‌ಗೆ ತಂದೆ ಕೃಷ್ಣಕುಮಾರನಂತೆ ಆಗಬೇಕು ಎಂಬ ಬಯಕೆ. ಹಾಗಾಗಿ ಅಪ್ಪನ ಎಲ್ಲ ನಡೆ-ನುಡಿಯನ್ನೂ ಅನುಸರಿಸುತ್ತಿದ್ದ. ಹೀಗೊಂದು ದಿನ ಬೇಸರಗೊಂಡಿದ್ದ ಕೃಷ್ಣಕುಮಾರ ಮನೆಯ ಟೆರೇಸ್ ಮೇಲೆ ಸಿಗರೇಟ್ ಸೇದುತ್ತ ನಿಂತಿದ್ದನ್ನು ಆಕಾಶ್ ನೋಡಿದ. ಕೆಲ ಹೊತ್ತಿನ ನಂತರ ಅಲ್ಲಿ ಆರಿಸಿ ಎಸೆದಿದ್ದ ಸಿಗರೇಟ್ ತುಂಡನ್ನು ಬಾಯಿಯಲ್ಲಿ ಇಟ್ಟುಕೊಂಡ. ಆತನ ವಯಸ್ಸು 12 ವರ್ಷ!

ಸೌಜನ್ಯಾ, ಕೃಷ್ಣಕುಮಾರ ಇಬ್ಬರದ್ದೂ ಮಧ್ಯಮವರ್ಗದ ಕುಟುಂಬಗಳು. ಬರುವ ಕಡಿಮೆ ಸಂಬಳದಲ್ಲಿಯೇ ಬದುಕು ಕಟ್ಟಿಕೊಂಡವರು. ಎಷ್ಟೇ ಕಷ್ಟಗಳು ಎದುರಾದರೂ, ಮಕ್ಕಳಿಗೆ ಯಾವುದೇ ಕೊರತೆ ಆಗದಂತೆ ಬೆಳೆಸುವ ಅಭಿಲಾಷೆ ಅವರದ್ದು. ಮಕ್ಕಳ ಈ ನಡವಳಿಕೆ ಅವರನ್ನು ತುಸು ಆತಂಕಕ್ಕೆ ದೂಡಿದೆ. 'ಮಕ್ಕಳು ನಮ್ಮ ಮಾತೇ ಕೇಳುವುದಿಲ್ಲ. ತುಂಬಾ ಅನುಕರಣೆ ಸ್ವಭಾವ ಅವರದ್ದು. ಒಮ್ಮೊಮ್ಮೆ ಕೆಟ್ಟದಾಗಿ ಮಾತನಾಡುತ್ತಾರೆ. ಎಷ್ಟು ಹೇಳಿದರೂ ತಿದ್ದಿಕೊಳ್ಳುವುದಿಲ್ಲ' ಎಂದು ಇಬ್ಬರೂ ಬೇಸರ ವ್ಯಕ್ತಪಡಿಸುತ್ತಾರೆ.

ಮಕ್ಕಳಲ್ಲಿನ ಈ ಸಮಸ್ಯೆ ಎರಡು ಕುಟುಂಬಗಳಿಗಷ್ಟೇ ಸೀಮಿತವಾಗಿಲ್ಲ. ಮಕ್ಕಳಿರುವ ಅನೇಕ ಕುಟುಂಬಗಳೂ ಈ ಸಮಸ್ಯೆಯನ್ನು ಎದುರಿಸುತ್ತಿವೆ. ಆದರೆ, ಸ್ವರೂಪ ಬೇರೆ ಅಷ್ಟೇ.

ಇದಕ್ಕೆ ಕಾರಣ ಏನು?

ಇಂಥ ಬದಲಾವಣೆಗೆ ನೇರವಾಗಿ ಮಕ್ಕಳನ್ನಷ್ಟೇ ದೂಷಿಸಲಾಗದು. ಮನೆ ಮತ್ತು ಸುತ್ತಮುತ್ತಲಿನ ಪರಿಸರದ ಪರಿಣಾಮವೂ ಕಾರಣವಿರುತ್ತದೆ. ಜೊತೆಗೆ ಮಕ್ಕಳಲ್ಲಿ ಮೂಡುವ ಅತಿ ಕುತೂಹಲವೂ ಹೀಗೆ ಮಾಡಲು ಅವರನ್ನು ಪ್ರೇರೇಪಿಸುತ್ತದೆ ಎನ್ನುತ್ತಾರೆ ಮನಃಶಾಸ್ತ್ರಜ್ಞೆ ಡಾ. ಜಯಶ್ರೀ ಎಸ್. ರೆಡ್ಡಿ.

ಮಕ್ಕಳು ಹೀಗೆ ತಪ್ಪು ಮಾಡುವಾಗ, ಪೋಷಕರು ಅದರ ಮೂಲ ಕಾರಣವನ್ನು ಪತ್ತೆಮಾಡಿ ತಿಳಿ ಹೇಳಬೇಕು. 'ತಾವು ಸಣ್ಣವರಿದ್ದಾಗ, ಇಂಥ ತಪ್ಪುಗಳನ್ನು ಮಾಡಿಯೇ ಇಲ್ಲವೇ' ಎಂಬುದನ್ನು ಸ್ವಯಂ ಪ್ರಶ್ನಿಸಿಕೊಳ್ಳಬೇಕು. ಆಗ ತಮ್ಮ ತಂದೆ-ತಾಯಿ ಪರಿಸ್ಥಿತಿ ಹೇಗೆ ನಿಭಾಯಿಸಿದ್ದರು? ಈಗ ಯಾಕೆ ಅದು ಸಾಧ್ಯವಾಗಲಿಲ್ಲ ಎಂದು ಅರಿಯಲು ಪ್ರಯತ್ನಿಸಬೇಕು ಎಂಬುದು ಅವರ ಸಲಹೆ.

ಸಮಸ್ಯೆಗೆ ಪರಿಹಾರವೇನು?

ಇಡೀ ಮನೆಯಷ್ಟೇ ಜಗತ್ತು ಮತ್ತು ಮನೆಯಲ್ಲಿನ ಕುಟುಂಬ ಸದಸ್ಯರಷ್ಟೇ ತನ್ನ ಪ್ರಪಂಚದವರು ಎಂಬ ಮುಗ್ಧ ಭಾವದಲ್ಲಿರುವ ಮಕ್ಕಳಿಗೆ ಸರಿ-ತಪ್ಪುಗಳ ತಿಳಿ ಹೇಳಬೇಕು. ಪೋಷಕರು, ಕೆಲಸದ ಹೊರೆಯನ್ನು ಮನೆಗೆ, ಮನೆಯ ಸಮಸ್ಯೆಯನ್ನು ಕಚೇರಿಗೆ ಒಯ್ಯದೇ ಅವುಗಳನ್ನು ಅಲ್ಲಲ್ಲಿಯೇ ಬಿಟ್ಟು ಮಗುವಿನ ಎದುರು ಸದಾ ಪ್ರಸನ್ನಚಿತ್ತರಾಗಿ ಇರುವಂತೆ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು.

ಮನೆಯಲ್ಲಿ ಪದೇ ಪದೇ ಆತಂಕ, ಖಿನ್ನತೆ ಮೂಡಿಸುವ ಜಗಳದಂತಹ ಘಟನೆಗಳು ನಡೆಯದಂತೆ ಎಚ್ಚರವಹಿಸಬೇಕು. ಇಂಥ ಘಟನೆಗಳು ಮಕ್ಕಳ ಮನಸ್ಸಿನ ಮೇಲೂ ತೀವ್ರ ಪರಿಣಾಮ ಬೀರುತ್ತವೆ. 'ಇಂಥ ಸಂದರ್ಭಗಳಲ್ಲಿ ಪೋಷಕರು ಮಕ್ಕಳ ಜೊತೆ ಮಕ್ಕಳಾಗಿ. ಸ್ನೇಹಿತರಾಗಿ ಅವರಲ್ಲಿರುವ ಗೊಂದಲವನ್ನು ಹೋಗಲಾಡಿಸಿ, ಆತ್ಮವಿಶ್ವಾಸ ಹೆಚ್ಚಿಸಬೇಕು' ಎಂದು ಸಲಹೆ ನೀಡುತ್ತಾರೆ ಮನಃಶಾಸ್ತ್ರಜ್ಞರು.

ಅವರ ಪ್ರಕಾರ, ಕೆಲ ಮಕ್ಕಳಿಗೆ ಕಾಡುವ ಮಾನಸಿಕ ಸಮಸ್ಯೆಗಳು ಮನೆಯಿಂದಲೇ ಆರಂಭಗೊಳ್ಳುತ್ತವೆ. ಪೋಷಕರು ಮನೆಯಲ್ಲಿನ ಪರಿಸ್ಥಿತಿ ಸುಧಾರಿಸಿಕೊಂಡು ಮಕ್ಕಳ ಜೊತೆ ಪ್ರೀತಿ ಮತ್ತು ಸ್ನೇಹಭಾವದಿಂದ ಕಳೆದರೆ, ಮಾನಸಿಕ ಸಮಸ್ಯೆಗಳನ್ನು ಮನೆಗಳಲ್ಲಿಯೇ ಪರಿಹರಿಸಿಕೊಳ್ಳಬಹುದು.

ಮೊಬೈಲ್ ಗೀಳಿನ ಸಮಸ್ಯೆ

ಈವರೆಗೆ ಮಕ್ಕಳು ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವ ಘಟನೆಗಳ ಅನುಕರಣೆ ಮಾಡುತ್ತಾರೆಂಬ ಆತಂಕದಲ್ಲಿದ್ದ ಪೋಷಕರಿಗೆ, ಈಗ ಅವರು ಮೊಬೈಲ್ ವೀಕ್ಷಣೆಯ ವ್ಯಸನಕ್ಕೆ ಒಳಗಾಗಿರುವುದು ದೊಡ್ಡ ತಲೆನೋವಾಗಿದೆ. ಫೋನ್‌ನಲ್ಲಿ ನೋಡುವ ದೃಶ್ಯಗಳನ್ನೂ ಅನುಕರಿಸುತ್ತಾರೆಂಬ ದೂರು ಪೋಷಕರದ್ದು. ಏಕೆಂದರೆ, ಮೊಬೈಲ್ ಬರೀ ಫೋನ್ ಆಗಿ ಉಳಿಯದೇ ಪುಟಾಣಿ ಟಿವಿ ಸೆಟ್ ಮತ್ತು ಪುಟ್ಟ ಸಿನಿಮಾ ಮಂದಿರವೂ ಆಗಿಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಪೋಷಕರು, ಮಕ್ಕಳ ಎದುರು ಮೊಬೈಲ್ ಅನ್ನು ಅತಿಯಾಗಿ ಬಳಸದಿರುವುದು ಒಳ್ಳೆಯದು.


ಮಕ್ಕಳು ಹಟ ಮಾಡುವಾಗ, ಅವರನ್ನು ಸಮಾಧಾನ ಮಾಡಲು ಕೆಲವು ಪೋಷಕರು ಮೊಬೈಲ್ ಕೊಡುತ್ತಾರೆ. ಇದು ತಕ್ಷಣದ ಪರಿಹಾರ ಎನಿಸಿದರೂ ದೀರ್ಘಕಾಲದಲ್ಲಿ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವ ಅಭ್ಯಾಸವಾಗಿದೆ. ಮೊಬೈಲ್‌ನ ಅತಿಯಾದ ವೀಕ್ಷಣೆ ಮಕ್ಕಳಲ್ಲಿನ ಸೃಜನಾತ್ಮಕ ಆಲೋಚನೆಗೆ ತಡೆಯೊಡ್ಡುವ ಸಾಧ್ಯತೆ ಇದೆ. ಮಾತ್ರವಲ್ಲ, ದೈಹಿಕ ಚಟುವಟಿಕೆಯನ್ನು ಕುಂಠಿತಗೊಳಿಸಬಹುದು. ಈ ಬಗ್ಗೆ ಎಚ್ಚರವಿರಲಿ.

ಇಲ್ಲಿವರೆಗೂ ಕೊರೊನಾ ಕಾರಣ ಆನ್‌ಲೈನ್ ತರಗತಿಯ ನೆಪದಲ್ಲಿ ಮೊಬೈಲ್ ಮಕ್ಕಳ ಕೈ ಸೇರಿತ್ತು. ಈಗ ತಕ್ಕ ಮಟ್ಟಿಗೆ ಸಮಸ್ಯೆ ಬಗೆಹರಿದಿದೆ. ಇನ್ನು ಕೆಲ ವರ್ಷಗಳ ಮಟ್ಟಿಗಾದರೂ ಮಕ್ಕಳು ಮೊಬೈಲ್‌ನಿಂದ ದೂರವಿರುವಂತೆ ನೋಡಿಕೊಳ್ಳಬೇಕು.

ಮನೆಯಲ್ಲಿ ಉತ್ತಮ, ಆಹ್ಲಾದಕರ ವಾತಾವರಣವನ್ನು ನಿರ್ಮಿಸುವ ಜೊತೆಗೆ, ಮಕ್ಕಳು ಸುಂದರ ಪರಿಸರದಲ್ಲಿ ಆಟವಾಡುವಂತಾಗಲಿ. ಕ್ಷಣ ಕ್ಷಣವೂ ಹೊಸ ಸಂಗತಿಗಳನ್ನು ಕಲಿಯುತ್ತ, ಅರಿಯುತ್ತ ಚೆಂದನೆಯ ವ್ಯಕ್ತಿತ್ವ ರೂಪಿಸಿಕೊಳ್ಳಲಿ.

'ಪೋಷಕರಲ್ಲಿ ಕಾಳಜಿ, ಅರಿವು ಅವಶ್ಯ'

'ಮಕ್ಕಳ ವ್ಯಕ್ತಿತ್ವವನ್ನು ಉತ್ತಮಗೊಳಿಸುವಲ್ಲಿ ಪೋಷಕರ ಪಾತ್ರ ಪ್ರಮುಖವಾದದ್ದು. ಹಾಗಾಗಿ, ಮಕ್ಕಳ ಎದುರು ತಾಳ್ಮೆ ಕಳೆದುಕೊಳ್ಳದೇ, ಜಗಳವಾಡದೇ, ಮನಸ್ತಾಪ ಅಥವಾ ಖಿನ್ನತೆ ಒಳಗಾಗದೇ ಉತ್ತಮ ನಡವಳಿಕೆ ರೂಢಿಸಿಕೊಳ್ಳುವುದು ಮುಖ್ಯ' ಎಂದು ಮನಃಶಾಸ್ತ್ರಜ್ಞೆ ಡಾ. ಜಯಶ್ರೀ ಎಸ್. ರೆಡ್ಡಿ ಹೇಳುತ್ತಾರೆ.



ಡಾ. ಜಯಶ್ರೀ ಎಸ್.ರೆಡ್ಡಿ

'ಪೋಷಕರ ಕೆಟ್ಟ ನಡವಳಿಕೆ ಮತ್ತು ಜೀವನಶೈಲಿಯು ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತವೆ. ಉತ್ತಮ ಗುಣ ಮತ್ತು ಸಕಾರಾತ್ಮಕ ಆಲೋಚನೆಗಳಿಂದ ಮಕ್ಕಳನ್ನು ಬೆಳೆಸಬೇಕೇ ಹೊರತು ಅವರನ್ನು ಮಾನಸಿಕವಾಗಿ ಕುಗ್ಗಿಸುವಂತಹ ವಾತಾವರಣ ಸೃಷ್ಟಿಸಬಾರದು' ಎಂಬ ಅಭಿಪ್ರಾಯ ಅವರದ್ದು.

'ನನ್ನ ಅಧ್ಯಯನದ ಪ್ರಕಾರ, ಅತಿಯಾದ ಮೊಬೈಲ್ ಬಳಕೆಯಿಂದ ಅನೇಕ ಮಕ್ಕಳು ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ಇದರಿಂದ ದೂರವಿರಿಸುವುದರ ಜೊತೆಗೆ ಅವರಲ್ಲಿ ಮೂಡುವ ಹೊಸ ಆಲೋಚನೆ ಮತ್ತು ಕುತೂಹಲಗಳಿಗೆ ಸಮಾಧಾನವಾಗಿ ಸ್ಪಂದಿಸುವ ಮನೋಭಾವವನ್ನು ಪೋಷಕರು ಬೆಳೆಸಿಕೊಳ್ಳಬೇಕು' ಎನ್ನುತ್ತಾರೆ ಅವರು.

'ಕ್ರೀಡೆ ಸೇರಿದಂತೆ ದೈಹಿಕ ಶ್ರಮ ಬಯಸುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕು' ಎಂದು ಅವರು ಸಲಹೆ ನೀಡುತ್ತಾರೆ.

ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳು ಬೇಸಿಗೆಯ ದಾಹ ತಣಿಸುವ ಜೊತೆಗೆ, ದೇಹಕ್ಕೆ ಅಗತ್ಯವಾದ ಪೋಷಕಾಂಶಗಳನ್ನು ನೀಡುತ್ತವೆ. ಸೀಜನ್‌ನಲ್ಲಿ ಸಿಗುವ ಹಣ್ಣುಗಳನ್ನು ಸಂಗ್ರಹಿಸಿ, ಮೌಲ್ಯವರ್ಧಿಸಿದರೆ, ರುಚಿ ರುಚಿಯಾದ ಖಾದ್ಯಗಳು, ಪೇಯಗಳು ಸಿದ್ಧವಾಗುತ್ತವೆ. ಅಂಥ ಹಣ್ಣಿನ ಖಾದ್ಯಗಳ ತಯಾರಿ ಕುರಿತ ಮಾಹಿತಿ ಇಲ್ಲಿದೆ.

ಫಲ ಪೇಯಗಳು

ಜಾನಕಿ ಎಸ್.

ನಳಪಾಕ

ಚಿಕ್ಕುಹಣ್ಣಿನ ಹಲ್ವ

ಬೇಕಾಗುವ ವಸ್ತುಗಳು: ಚಿಕ್ಕು ಹಣ್ಣು 6,ಹಸಿ ದ್ರಾಕ್ಷಿ 1ಕಪ್, ಖರ್ಜೂರ 5 - 6, ಸ್ವಲ್ಪ ಬೆಲ್ಲ, ಏಲಕ್ಕಿ, ಒಣ ಶುಂಠಿ ಪುಡಿ, ಕಾಳು ಮೆಣಸು 4-5,ತಾಜಾ ತುಪ್ಪ 2 ಚಮಚ.

ತಯಾರಿಸುವ ವಿಧಾನ: ಎಲ್ಲಾ ಹಣ್ಣುಗಳನ್ನು ಚೆನ್ನಾಗಿ ತೊಳೆದು ಸಣ್ಣದಾಗಿ ಕತ್ತರಿಸಿಕೊಳ್ಳಿ. ದಪ್ಪ ತಳದ ಬಾಣಲೆಗೆ ತುಪ್ಪ ಹಾಕಿ ಈ ಹಣ್ಣುಗಳನ್ನು ಮಿಶ್ರ ಮಾಡಬೇಕು. ಒಲೆ ಉರಿಯು ಮಧ್ಯಮ ಉರಿಯಲ್ಲಿರಲಿ. ನಂತರ ಎರಡು ಚಮಚ ಬೆಲ್ಲ ಸೇರಿಸಿ. ಆಮೇಲೆ ಶುಂಠಿ ಪುಡಿ ಚಿಟಿಕೆ, ಏಲಕ್ಕಿ, ಕಾಳುಮೆಣಸು ಪುಡಿ ಹಾಕಿ ಚೆನ್ನಾಗಿ ಕೈಯಾಡಿಸುತ್ತ ನೀರಿನ ಅಂಶ ಹೋಗುವವರೆಗೆ ಕೆದಕಿದರೆ ಸಾಕು.

ಇದು ಚಪಾತಿ, ದೋಸೆ ಜೊತೆಗೆ ತಿನ್ನಲು, ಹಾಗೆ ತಿನ್ನಲು ಚೆನ್ನಾಗಿರುತ್ತದೆ. ಎರಡು ಚಮಚ ಹಲ್ವವನ್ನು ಒಂದು ಗ್ಲಾಸ್ ಹಾಲಿಗೆ ಸೇರಿಸಿ ಮಿಕ್ಸಿಯಲ್ಲಿ ಮಿಕ್ಸ್ ಮಾಡಿ ಮಿಲ್ಕ್ ಶೇಕ್ ಮಾಡಿ ಕುಡಿದರೆ ರುಚಿಯಾಗಿರುತ್ತದೆ.





ಕೋಕೊ ಶೇಂಗಾ ಚಾಕಲೇಟ್

ಬೇಕಾಗುವ ವಸ್ತುಗಳು: ಶೇಂಗಾ ಬೀಜ - 1 ಕಪ್, ಹಾಲಿನ ಪುಡಿ - 1/3 ಕಪ್, ಬೆಣ್ಣೆ - 1/2 ಕಪ್, ಸಕ್ಕರೆ ಹಿಟ್ಟು - 1 ಕಪ್, ಕೊಕೊ ಪುಡಿ ಅಥವಾ ಬೊರನ್‌ವಿಟಾ/ಬೂಸ್ಟ್ 1-2 ಚಮಚ.

ತಯಾರಿಸುವ ವಿಧಾನ: ಶೇಂಗಾ ಹುರಿದು ಸಿಪ್ಪೆ ತೆಗೆದು ಅರ್ಧ ಆಗುವಂತೆ ಒಡೆದಿರಬೇಕು. ದಪ್ಪ ತಳದ ಬಾಣಲೆಗೆ ಬೆಣ್ಣೆ ಹಾಕಿ ಕರಗುತ್ತಿದ್ದಾಗ, ಸಕ್ಕರೆ ಹಿಟ್ಟು ಸೇರಿಸಿ, ಹಾಲಿನ ಪುಡಿ ಹಾಕಿ ಕೈಯಾಡಿಸುತ್ತಿರಬೇಕು. ಪಾಕ ಬಂದು ತಳ ಬಿಡುವಾಗ ಶೇಂಗಾ, ಕೊಕೊ ಪುಡಿ ಹಾಕಿ ಚೆನ್ನಾಗಿ ಕಲೆಸಿದರೆ 10 ನಿಮಿಷದಲ್ಲಿ ಚಾಕಲೇಟ್ ರೆಡಿ ಆಗುತ್ತದೆ. ಬೇಕಾದ ಆಕಾರ ಮಾಡಿಕೊಳ್ಳಿ.

ನೆಲ್ಲಿಕಾಯಿ ರಸಾಯನ

ಬೇಕಾಗುವ ವಸ್ತುಗಳು : ಬೆಟ್ಟದ ನೆಲ್ಲಿಕಾಯಿ - 15, ಒಣದ್ರಾಕ್ಷಿ - 1 ಕಪ್, ಕಾಳುಮೆಣಸು - 15, ಜೀರಿಗೆ ಪುಡಿ - 1ಚಮಚ, ಬೆಲ್ಲ - 2 ಕಪ್.

ತಯಾರಿಸುವ ವಿಧಾನ : ನೆಲ್ಲಿಕಾಯಿಯನ್ನು ನೀರಿನಲ್ಲಿ ಒಂದು ಕುದಿ ಕುದಿಸಿಕೊಂಡು, ಬೀಜ ತೆಗೆಯಿರಿ. ಅರ್ಧ ತಾಸು ನೆನೆಸಿಟ್ಟ ಒಣದ್ರಾಕ್ಷಿ, ಬೇಯಿಸಿದ ನೆಲ್ಲಿಕಾಯಿ ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಕೊಳ್ಳಿ. ದಪ್ಪ ತಳದ ಪಾತ್ರೆಯಲ್ಲಿ ಈ ಮಿಶ್ರಣದ ಜೊತೆಗೆ, ಬೆಲ್ಲ ಹಾಕಿ ಚೆನ್ನಾಗಿ ಕಾಯಿಸುತ್ತಾ ಇರಬೇಕು. ನೀರಿನಂಶ ಆರುತ್ತಾ ಇದ್ದಾಗ ಕಾಳುಮೆಣಸು, ಜೀರಿಗೆ ಪುಡಿ ಸೇರಿಸಿ ಕೈಯಾಡಿಸಿ ಸರಿಯಾಗಿ ಇನ್ನೊಮ್ಮೆ ಕುದಿಸಿದರೆ ರಸಾಯನ ಸಿದ್ಧ.

ಇದನ್ನು ಗಾಜಿನ ಬಾಟಲಿಯಲ್ಲಿ ಶೇಖರಿಡುವುದು ಉತ್ತಮ. ಇದು ತಿಂಗಳವರೆಗೆ ಕೆಡದಂತೆ ಇರುತ್ತದೆ. ಒಂದು ಚಮಚ ರಸಾಯನವನ್ನು ಒಂದು ಲೋಟ ನೀರಿಗೆ ಬೆರೆಸಿ, ಪಾನಕ ಮಾಡಿ ಕುಡಿಯಬಹುದು ಅಥವಾ ಒಂದು ಚಮಚದಷ್ಟು ತಿಂದು ನೀರು ಕುಡಿದರೂ ರುಚಿಯಾಗಿರುತ್ತದೆ.



ಕೌ-ಪ್ರಿಂಟ್ ವಿನ್ಯಾಸದ ಫ್ಯಾಷನ್ ನೋಟ



ರೇಷ್ಮಾ

ಫ್ಯಾಷನ್ ಟ್ರೆಂಡ್ ಸದಾ ಬದಲಾಗುತ್ತಿರುತ್ತದೆ. ಬದಲಾಗುತ್ತಲೇ ಇರುವ ಫ್ಯಾಷನ್ ಜಗತ್ತಿನಲ್ಲಿ ನವ ನವೀನ ವಿನ್ಯಾಸಗಳು ಫ್ಯಾಷನ್ ಪ್ರಿಯರನ್ನು ಹೆಚ್ಚು ಸೆಳೆಯುತ್ತವೆ. ಕಳೆದ ಕೆಲ ವರ್ಷಗಳಿಂದ ಪ್ರಾಣಿಗಳ ಮೈಬಣ್ಣದ ಚಿತ್ತಾರವನ್ನು ಡ್ರೆಸ್ ಮೇಲೆ ಮೂಡಿಸುವುದು ವಿಶೇಷವಾಗಿತ್ತು. ಜೀಬ್ರಾ, ಚಿರತೆ ಮೈಬಣ್ಣದ ಪ್ರಿಂಟ್ ಅನ್ನು ಹೋಲುವ ಉಡುಪುಗಳು ಫ್ಯಾಷನ್ ಮಾರುಕಟ್ಟೆಯಲ್ಲಿ ಹೆಚ್ಚು ಸದ್ದು ಮಾಡಿದ್ದವು. ಇತ್ತೀಚೆಗೆ ಈ ರೀತಿಯ ಹೊಸದೊಂದು ಟ್ರೆಂಡ್ ಫ್ಯಾಷನ್ ಪ್ರಿಯರ ಗಮನ ಸೆಳೆಯುತ್ತಿದೆ. ಇದೇ 'ಕೌ ಪ್ರಿಂಟ್(ಹಸುವಿನ ಮೈ ಬಣ್ಣದ)' ಡ್ರೆಸ್ ಟ್ರೆಂಡ್.

ಫ್ಯಾಂಟ್, ಟಾಪ್, ಶರ್ಟ್, ಆಭರಣಗಳು ಹೀಗೆ ಎಲ್ಲದರಲ್ಲೂ ಇದನ್ನು ಅಳವಡಿಸಲಾಗಿದೆ. ಸೆಲೆಬ್ರೆಟಿಗಳು ಈ ವಿನ್ಯಾಸವನ್ನು ಹೆಚ್ಚು ಮೆಚ್ಚಿ ಧರಿಸುತ್ತಿದ್ದಾರೆ. ಮೊದ ಮೊದಲು ಬಿಳಿ ಬಟ್ಟೆಯ ಮೇಲೆ ಕಂದು ಅಥವಾ ಕಪ್ಪು ಬಣ್ಣದ ಡಾಟ್‌ಗಳನ್ನು ಮೂಡಿಸುವುದು ಹೆಚ್ಚು ಪ್ರಚಲಿತವಾಗಿತ್ತು. ಆದರೆ ಇತ್ತೀಚೆಗೆ ಎಲ್ಲ ರೀತಿಯ ಗಾಢ ಬಣ್ಣದ ಮೇಲೆ ಡಾಟ್‌ಗಳನ್ನು ಮೂಡಿಸಲಾಗುತ್ತಿದೆ. ಕೌ ಪ್ರಿಂಟ್ ಡ್ರೆಸ್ ಜೊತೆಗೆ ಇಂತಹದ್ದೇ ಪ್ರಿಂಟ್ ಇರುವ ಶೂ, ಪರ್ಸ್, ಟೋಪಿ ಧರಿಸುವುದರಿಂದ ಭಿನ್ನವಾಗಿ ಕಾಣಬಹುದು ಎಂಬುದು ಫ್ಯಾಷನ್ ತಜ್ಞರ ಅಭಿಪ್ರಾಯ.



ನೆಕ್ ಟೈ ಶರ್ಟ್

ನೆಕ್ ಟೈ ಶರ್ಟ್ ಇತ್ತೀಚೆಗೆ ಹೆಚ್ಚು ಟ್ರೆಂಡ್‌ನಲ್ಲಿದೆ. ಇದರಲ್ಲಿ ಕೌ ಪ್ರಿಂಟ್ ವಿನ್ಯಾಸವನ್ನು ಮಿಲೇನಿಯಲ್ ಯುವತಿಯರು ಹೆಚ್ಚು ಮೆಚ್ಚುತ್ತಿದ್ದಾರೆ. ಶರ್ಟ್‌ಗೆ ಟೈಯನ್ನು ಅಳವಡಿಸಲಾಗಿದ್ದು ಇದೊಂದು ಹೊಸ ವಿನ್ಯಾಸದ ಡ್ರೆಸ್‌ನಂತೆ ಕಾಣಿಸುತ್ತದೆ. ಟೈ ಕೂಡ ಶರ್ಟ್‌ನಂತೆ ಕೌ ಪ್ರಿಂಟ್ ಚಿತ್ತಾರವನ್ನೇ ಹೊಂದಿದ್ದು ಇದನ್ನು ಸ್ಕರ್ಟ್, ಜೀನ್ಸ್, ಲೆಗ್ಗಿಂಗ್ಸ್, ಜಗ್ಗಿಂಗ್ಸ್ ಜೊತೆ ಧರಿಸಬಹುದು. ಶರ್ಟ್ ಬಣ್ಣದ್ದೇ ಬಾಟಮ್ ಉಡುಪು ಧರಿಸುವುದರಿಂದ ಅಂದವಾಗಿ ಕಾಣಬಹುದು.

ಹೈ ವೇಸ್ಟ್ ಪ್ಯಾಂಟ್

ಹಳೆಯ ಸಿನಿಮಾಗಳಲ್ಲಿ ಹೀರೊಗಳು ಧರಿಸುತ್ತಿದ್ದ ಹೈ ವೇಸ್ಟ್ ಪ್ಯಾಂಟ್ ಈಗಿನ ಜಮಾನದ ಹುಡುಗಿಯರ ಹಾಟ್ ಫೇವರಿಟ್ ಆಗಿದೆ. ಈಗ ಕೌ ಪ್ರಿಂಟ್‌ನಲ್ಲೂ ಹೈವೇಸ್ಟ್ ಪ್ಯಾಂಟ್ ಬಂದಿದ್ದು ಹೆಣ್ಣುಮಕ್ಕಳ ಮನ ಸೆಳೆದಿದೆ. ಈ ಪ್ಯಾಂಟ್ ಮೇಲೆ ಕ್ರಾಪ್ ಟಾಪ್, ಶರ್ಟ್, ಸ್ಲೀವ್ ಲೆಸ್ ಇಂತಹವನ್ನು ಧರಿಸುವುದರಿಂದ ಸುಂದರವಾಗಿ ಕಾಣಬಹುದು. ಡಾಟ್ ಇರುವ ಟಾಪ್ ಧರಿಸುವುದರಿಂದ ಈ ಪ್ಯಾಂಟ್‌ಗೆ ಇನ್ನಷ್ಟು ಲುಕ್ ಮೂಡಿಸಬಹುದು.

ಅರ್ರೈಡರ್ ಬೂಟ್ಸ್

ಅರ್ರೈಡರ್ ಬೂಟ್ಸ್ ಟ್ರೆಂಡ್‌ನಲ್ಲಿದೆ. ಹಾಫ್ ಜೀನ್ಸ್, ಸ್ಕರ್ಟ್, ಮಿನಿ ಸ್ಕರ್ಟ್ ಧರಿಸಿದಾಗ ಇದನ್ನು ಧರಿಸಿದರೆ ನೋಟವೇ ಬದಲಾಗುತ್ತದೆ. ಈಗ ಇದರ ಮೇಲೂ ಕೌ ಪ್ರಿಂಟ್ ಮೂಡಿಸಲಾಗಿದ್ದು ಇದನ್ನು ನೈಟ್‌ಔಟ್, ಡಿನ್ನರ್ ಪಾರ್ಟಿಯಂತಹ ಸಂದರ್ಭಗಳಲ್ಲಿ ಧರಿಸಲು ಹೆಚ್ಚು ಸೂಕ್ತ ಎನ್ನಿಸುತ್ತದೆ.



ಕೌ ಪ್ರಿಂಟ್ ಬಕೆಟ್ ಹ್ಯಾಟ್

ತಲೆ ಮೇಲೆ ಧರಿಸಿದರೆ ಪೂರ್ತಿ ತಲೆಯನ್ನು ಕವರ್ ಮಾಡುವ ಈ ಬಕೆಟ್ ಹ್ಯಾಟ್ ಬೇಸಿಗೆಯಲ್ಲಿ ಧರಿಸಲು ಸೂಕ್ತ. ಅಲ್ಲದೇ ನೀವು ಬೇಸಿಗೆಯಲ್ಲಿ ಯಾವುದೇ ಪ್ರವಾಸ್, ಪಿಕ್‌ನಿಕ್ ಅಂತ ಹೋದಾಗ ಅಲ್ಲಿ ಧರಿಸಲು ಚೆನ್ನಾಗಿರುತ್ತದೆ. ಇದು ಬಿಸಿಲು ನೇರವಾಗಿ ಮುಖಕ್ಕೆ ಬೀಳುವುದನ್ನು ತಡೆಯುವುದಲ್ಲದೇ ಟ್ರೆಂಡಿ ಆಗಿಯೂ ಕಾಣಿಸುತ್ತದೆ. ಈ ಹ್ಯಾಟ್ ಮೇಲೆ ಕೌ ಪ್ರಿಂಟ್ ಚಿತ್ತಾರ ಮೂಡಿಸುವುದು ಈಗಿನ ವಿಶೇಷ.

ಶಾಕೆಟ್

ಜಾಕೆಟ್‌ನಂತೆ ಉದ್ದಕ್ಕೆ ಇರುವ ಶಾಕೆಟ್‌ನಲ್ಲೂ ಕೌ ಪ್ರಿಂಟ್ ವಿನ್ಯಾಸವನ್ನು ಮೂಡಿಸಲಾಗಿದೆ. ಈ ಶಾಕೆಟ್ ನೈಟ್ ಪಾರ್ಟಿ, ಔಟಿಂಗ್‌ನಂತಹ ಸಂದರ್ಭದಲ್ಲಿ ಧರಿಸಲು ಹೆಚ್ಚು ಸೂಕ್ತ ಎನ್ನಿಸುತ್ತದೆ. ಇದನ್ನು ಮಿಕ್ಸ್ ಅಂಡ್ ಮ್ಯಾಚ್ ಪ್ಯಾಂಟ್, ಟಾಪ್ ಜೊತೆ ಧರಿಸಬಹುದು.

ಜಾಗರ್ ಪ್ಯಾಂಟ್

ಜಾಗಿಂಗ್ ಹೋಗುವಾಗ ಒಂದೇ ರೀತಿಯ ಪ್ಯಾಂಟ್ ಧರಿಸಿ ಬೇಸರ ಮೂಡಿದ್ದರೆ ಕೌ ಪ್ರಿಂಟ್ ಜಾಗರ್ ಪ್ಯಾಂಟ್ ಧರಿಸಬಹುದು. ಇದರೊಂದಿಗೆ ಟೀ ಶರ್ಟ್, ಸ್ಲೀವ್ ಲೆಸ್ ಟಾಪ್ ಮುಂತಾದುವನ್ನು ಧರಿಸಬಹುದು. ಜಾಗರ್ ಪ್ಯಾಂಟ್‌ನಲ್ಲಿ ಬಿಳಿದ ಬಣ್ಣದ ಮೇಲೆ ಕಪ್ಪು ಡಾಟ್ ಇರುವ ಶೈಲಿಯೇ ಹೆಚ್ಚು ಪ್ರಚಲಿತದಲ್ಲಿದೆ.

ಇಷ್ಟೇ ಅಲ್ಲದೇ ಕೌ ಪ್ರಿಂಟ್ ವಿನ್ಯಾಸದ ಡ್ರೆಸ್ ಡ್ರೆಸ್, ಪೈಜಾಮ ಪ್ಯಾಂಟ್ ಮತ್ತು ಶರ್ಟ್, ಹೈ ವೇಸ್ಟ್ ಮಿನಿ ಸ್ಕರ್ಟ್, ಚಪ್ಪಲಿ, ಫ್ಲೇರ್ ಪ್ಯಾಂಟ್, ಡೆನಿಮ್ ಸ್ಕರ್ಟ್, ಪುಲ್ಲೋವರ್, ಹೆಡ್‌ಬ್ಯಾಂಡ್, ಜಾಗಾರ್ ಪ್ಯಾಂಟ್, ಕ್ಲಾಗ್ಸ್ ಎಲ್ಲವೂ ಇವೆ. ಇದನ್ನು ಸಂದರ್ಭಕ್ಕೆ ತಕ್ಕಂತೆ ಧರಿಸಿ ಅಂದ ಹೆಚ್ಚಿಸಿಕೊಳ್ಳುವ ಜಾಣ್ಮೆ ನಿಮಗಿರಬೇಕಷ್ಟೆ.

ಒಳಉಡುಪುಗಳ ಆಕರ್ಷಣೆ ಕಾಯಿಲೆಯೇ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **25ರ ಅವಿವಾಹಿತ ಯುವಕ. ನಾನು ಮಹಿಳೆಯರ ಒಳ ಉಡುಪುಗಳನ್ನು ನೋಡಿದರೆ ಉದ್ವೇಗಕ್ಕೆ ಒಳಗಾಗುತ್ತೇನೆ. ಇದು ಸಲಿಂಗ ಕಾಮವೇ ಅಥವಾ ಸಹಜವೇ? ಇದರಿಂದ ಹೊರಬರುವುದು ಹೇಗೆ?**

ಹೆಸರು ಊರು ತಿಳಿಸಿಲ್ಲ

ಸ್ತ್ರೀಯರ ಒಳಉಡುಪುಗಳನ್ನು ನೋಡಿದಾಗ ನಿಮ್ಮೊಳಗೆ ಮೂಡುತ್ತಿರುವುದು ಉದ್ವೇಗವಲ್ಲ, ಉದ್ರೇಕ. ದೈಹಿಕವಾಗಿ ಇವೆರೆಡರಲ್ಲಿಯೂ ಒಂದೇ ಲಕ್ಷಣಗಳಿರುತ್ತವೆ. ನೀವೊಬ್ಬ ಯುವಕನಾಗಿರುವುದರಿಂದ ಮಹಿಳೆಯರ ಒಳಉಡುಪುಗಳಿಂದ ಆಕರ್ಷಿತರಾಗುವುದು ಸಲಿಂಗ ಕಾಮ ಹೇಗಾಗುತ್ತದೆ? ಪುರುಷರ ಬಗೆಗೆ ನಿಮಗೆ ಆಸಕ್ತಿ ಆಕರ್ಷಣೆಯಿದ್ದರೆ ಮಾತ್ರ ಸಲಿಂಗಕಾಮವಾಗುತ್ತದೆ. ಒಬ್ಬೊಬ್ಬರ ಲೈಂಗಿಕ ಆಕರ್ಷಣೆ ಒಂದೊಂದು ರೀತಿಯಾಗಿರಬಹುದು. ಕೆಲವರು ದೇಹದ ಬೇರೆಬೇರೆ ಅಂಗಾಂಗಗಳಿಂದ ಆಕರ್ಷಿತರಾದರೆ, ಇನ್ನು ಕೆಲವರು ಉಡುಪು, ಧ್ವನಿ, ಸುತ್ತಲಿನ ಪರಿಸರ ಮುಂತಾದವುಗಳಿಂದ ಉದ್ರೇಕಗೊಳ್ಳಬಹುದು. ಇದು ಕಾಯಿಲೆಯೇನಲ್ಲ. ಆದರೆ ಉದ್ರೇಕಕಾರಿಯಾಗುವುದನ್ನು ಎಲ್ಲಾ ಸಂದರ್ಭಗಳಲ್ಲಿಯೂ ಹುಡುಕಿಕೊಂಡು ಹೋಗುವ ಒತ್ತಡ ಉಂಟಾಗುತ್ತಿದ್ದರೆ ಮತ್ತು ಅದರ ಹೊರತಾಗಿ ಲೈಂಗಿಕ ಆಕರ್ಷಣೆಯೇ ಮೂಡದಿದ್ದರೆ ನಿಮಗೆ ಸಹಾಯದ ಅಗತ್ಯವಿರುತ್ತದೆ. ಆಕರ್ಷಣೆ ಸಾಮಾಜಿಕ ಮಿತಿಗಳಲ್ಲಿದೆ ಎಂದಾದರೆ ಸದ್ಯಕ್ಕೆ ಆನಂದಿಸಿ. ವಿವಾಹವಾದ ನಂತರ ಸಮಸ್ಯೆಗಳಿದ್ದರೆ ಮಾತ್ರ ಲೈಂಗಿಕ ಮನೋಚಿಕಿತ್ಸಕರನ್ನು ಸಂಪರ್ಕಿಸಿ.

- **ವಿವಾಹಿತ. ಮೂರು ಮಕ್ಕಳಿದ್ದಾರೆ. ದಾಂಪತ್ಯದಲ್ಲಿ ಸಮಸ್ಯೆಗಳಿವೆ. ಎಷ್ಟೇ ಮನವರಿಕೆ ಮಾಡಿಕೊಟ್ಟರೂ ಹೆಂಡತಿ ಬೇಸರದಲ್ಲಿರುತ್ತಾರೆ. ತಾಯಿಯ ಆರೋಗ್ಯ ಸರಿಯಿಲ್ಲದಿರುವುದರಿಂದ ರಾತ್ರಿಯೆಲ್ಲಾ ಅವರ ಬಳಿ ಮಲಗಿರಬೇಕಾಗುತ್ತದೆ. ಮಧ್ಯರಾತ್ರಿ ಸಿಗುವ ಒಂದೆರೆಡು ಗಂಟೆಗಳಲ್ಲಿ ಲೈಂಗಿಕ ಸಂಪರ್ಕಕ್ಕೆ ಪತ್ನಿ ಒಪ್ಪುತ್ತಿಲ್ಲ. ಇದರಿಂದ ನನಗೆ ಬೇಸರವಾಗಿದೆ. ಪರಿಹಾರವೇನು?**

ಹೆಸರು ಇಲ್ಲ, ಬೆಂಗಳೂರು

ನಿಮ್ಮ ಲೈಂಗಿಕ ಅಗತ್ಯಗಳು ಸಹಜವಾದದ್ದು. ಆದರೆ ನಿಮ್ಮ ಸಂಬಂಧದಲ್ಲಿ ಆತ್ಮೀಯತೆಯಿಲ್ಲದೆ ಪತ್ನಿಯ ಸಹಕಾರವನ್ನು ಹೇಗೆ ನಿರೀಕ್ಷಿಸುತ್ತೀರಿ? ಪತ್ನಿಗೆ ಮನವರಿಕೆ ಮಾಡಿಕೊಡುವುದು ಎಂದರೆ ನೀವು ಸರಿ ಎಂದು ತೀರ್ಮಾನಿಸಿಕೊಂಡಿದ್ದನ್ನು ಪತ್ನಿ ಒಪ್ಪಿಕೊಳ್ಳಬೇಕೆಂಬ ನಿರೀಕ್ಷೆಯಲ್ಲವೇ? ಕೇವಲ ಲೈಂಗಿಕ ಸಂಬಂಧದ ಕುರಿತಾಗಿ ಮಾತ್ರವಲ್ಲ, ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳಲ್ಲಿ ಪತ್ನಿಯ ಅಭಿಪ್ರಾಯ ಕೇಳುತ್ತೀರಾ? ಇಬ್ಬರೂ ಗೌರವದಿಂದ ವಿಷಯಗಳನ್ನು ಚರ್ಚೆಮಾಡಿ ಪರಿಹಾರ ಹುಡುಕುತ್ತೀರಾ? ಭಿನ್ನಾಭಿಪ್ರಾಯಗಳಿಂದ ಸಂಬಂಧಗಳು ಹಾಳಾಗುವುದಿಲ್ಲ. ಪರಸ್ಪರ ಮುಕ್ತತೆ, ನಂಬಿಕೆ ಮತ್ತು ಗೌರವವಿಲ್ಲದಿದ್ದಾಗ ಸಂಬಂಧಗಳು ಬಿರುಕು ಬಿಡುತ್ತವೆ. ಆಗ ಕೇವಲ ಲೈಂಗಿಕ ಸುಖಕ್ಕೆ ಮಾತ್ರ ಪತ್ನಿಯ ಸಹಕಾರವನ್ನು ಹೇಗೆ ನಿರೀಕ್ಷಿಸುತ್ತೀರಾ? ಸಂಬಂಧಗಳು ಆತ್ಮೀಯವಾಗಿದ್ದಾಗ ಪತ್ನಿಗೂ ನಿಮಗಿರುವಷ್ಟೇ ಲೈಂಗಿಕ ಸುಖದ ಬಯಕೆಯಿರುತ್ತದೆ. ಹಾಗಾಗಿ ಎಲ್ಲಾ ವಿಚಾರಗಳನ್ನು ಪತ್ನಿಯೊಡನೆ ಮುಕ್ತವಾಗಿ ನೇರವಾಗಿ ಚರ್ಚೆಮಾಡಿ. ಪರಿಹಾರಗಳು ನಿಮ್ಮ ಸಂಬಂಧದಲ್ಲಿಯೇ ಸಿಗುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ bhoomika@prajavani.co.in

'ಪಾನಿಪೂರಿ ಮಾರುವವರು ಹಿಂದಿ ಭಾಷಿಕರು'

ಚೆನ್ನೈ: 'ತಮಿಳುನಾಡಿನಲ್ಲಿ ಪಾನಿಪೂರಿ ಮಾರುತ್ತಿರುವವರು ಹಿಂದಿ ಭಾಷಿಕರು. ಹಾಗಿರುವಾಗ ಉದ್ಯೋಗದ ಅಗತ್ಯಕ್ಕಾಗಿ ಹಿಂದಿ ಕಲಿಯಬೇಕು ಎನ್ನುವುದರ ಹಿಂದಿನ ತರ್ಕ ಏನು' ಎಂದು ಉನ್ನತ ಶಿಕ್ಷಣ ಸಚಿವ ಕೆ. ಪೊನ್ಮುಡಿ ಪ್ರಶ್ನಿಸಿದ್ದಾರೆ.

ಕೊಯಮತ್ತೂರಿನ ಭಾರತಿಯಾರ್ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಆರ್.ಎನ್. ರವಿ ಅವರ ಸಮ್ಮುಖದಲ್ಲಿ ಮಾತನಾಡಿದ ಪೊನ್ಮುಡಿ, ರಾಜ್ಯದ ದ್ವಿಭಾಷಾ ನೀತಿಯನ್ನು ಸಮರ್ಥಿಸಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಮಾತನಾಡಿದ ರಾಜ್ಯಪಾಲ ರವಿ ಅವರು, 'ಕೇಂದ್ರ ಸರ್ಕಾರವು ಎಲ್ಲಾ ಪ್ರಾದೇಶಿಕ ಭಾಷೆಗಳನ್ನು ಉತ್ತೇಜಿಸುತ್ತಿದೆ' ಎಂದು ಪ್ರತಿಪಾದಿಸಿದರು.



ಮೂಲಕ ಕೇಂದ್ರವು ಭಾಷೆಯನ್ನು ಹೇರುತ್ತಿದೆ ಎಂಬ ಆರೋಪವನ್ನು ತಳ್ಳಿಹಾಕಿದ್ದಾರೆ.

ಸಚಿವ ಪೊನ್ಮುಡಿ ಅವರು ತಮ್ಮ ಭಾಷಣದಲ್ಲಿ, 'ತ್ರಿಭಾಷಾ ಸೂತ್ರ' ಆದರೂ ಹಿಂದಿ ಬೇಕೇ ಎಂದು ಪ್ರಶ್ನಿಸಿದರು. 'ಇಂಗ್ಲಿಷ್ ಮತ್ತು ತಮಿಳು ಎಂಬ ಎರಡು ಭಾಷೆಗಳಿವೆ. ಇಂಗ್ಲಿಷ್ ಅಂತರರಾಷ್ಟ್ರೀಯ ಭಾಷೆಯಾಗಿದ್ದರೆ, ತಮಿಳು ಸ್ಥಳೀಯ ಭಾಷೆಯಾಗಿದೆ. ಹಿಂದಿ ಕಲಿಯುವುದರಿಂದ ಉದ್ಯೋಗ ಸಿಗುತ್ತದೆ ಎಂದು ಹೇಳಲಾಗುತ್ತಿದೆ. ಆದರೆ, ನಮಗೆ ಉದ್ಯೋಗ ಸಿಕ್ಕಿದೆಯೇ? ನೀವು ಹೋಗಿ ನೋಡಿ ನಮ್ಮ ರಾಜ್ಯದ ಕೊಯಮತ್ತೂರಿನಲ್ಲಿ ಪಾನಿಪೂರಿ ಮಾರುವವರು ಯಾರು? ಅವರು ಹಿಂದಿ ಮಾತನಾಡುವವರು' ಎಂದರು.

ತಮ್ಮ ಭಾಷಣದಲ್ಲಿ ಡಿಎಂಕೆ ಸಂಸ್ಥಾಪಕ ಸಿ.ಎನ್. ಅಣ್ಣಾದೊರೈ ಅವರನ್ನು ನೆನಪಿಸಿಕೊಂಡ ಅವರು, 'ಅಣ್ಣಾ ಯಾವಾಗಲೂ ಒಂದು ಬೆಕ್ಕು ಮತ್ತು ಇಲಿಯ ಕಥೆಯನ್ನು ಹೇಳುತ್ತಿದ್ದರು' ಎಂದು ಹೇಳಿದರು.

ಎಲ್‌ಇಟಿಯ ಇಬ್ಬರು ನುಸುಳುಕೋರರ ಹತ್ಯೆ

ಶ್ರೀನಗರ: ಇತ್ತೀಚೆಗೆ ಕಾಶ್ಮೀರಕ್ಕೆ ನುಸುಳಿದ್ದ ಪಾಕಿಸ್ತಾನ ಮೂಲದ ಲಷ್ಕರ್-ಎ-ತಯಬಾ (ಎಲ್‌ಇಟಿ) ಸಂಘಟನೆಯ ಇಬ್ಬರು ಉಗ್ರರನ್ನು ಶುಕ್ರವಾರ ಉತ್ತರ ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಹತ್ಯೆಗೈದಿವೆ.

'ಭದ್ರತಾ ಪಡೆಗಳು ಬಂಡಿಪೋರಾ ಜಿಲ್ಲೆಯ ಬ್ರಾರ್ ಸಮೀಪದ ಅರಗಮ್ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಆರಂಭಿಸಿದ್ದವು. ಈ ವೇಳೆ ಭದ್ರತಾ ಪಡೆಗಳ ಮೇಲೆ ಉಗ್ರರು ಗುಂಡಿನ ದಾಳಿ ನಡೆಸಿದ್ದು, ಭದ್ರತಾಪಡೆಗಳ ಪ್ರತಿದಾಳಿಗೆ ಇಬ್ಬರು ಉಗ್ರರು ಹತರಾದರು' ಎಂದು ಪೊಲೀಸರು ತಿಳಿಸಿದರು.

ಕೇರಳ: 27ಕ್ಕೆ ಮುಂಗಾರು ಪ್ರವೇಶ

ನವದೆಹಲಿ (ಪಿಟಿಐ): ನೈಋತ್ಯ ಮುಂಗಾರು ಈ ಸಲ ವಾಡಿಕೆಗಿಂತ ಮುನ್ನವೇ ಕೇರಳವನ್ನು ಪ್ರವೇಶಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ತಿಳಿಸಿದೆ.

'ವಾಡಿಕೆಯಂತೆ ಜೂನ್ 1ಕ್ಕೆ ಮುಂಗಾರು ಕೇರಳ ಪ್ರವೇಶಿಸುತ್ತದೆ. ಪ್ರಸಕ್ತ ವರ್ಷ 5 ದಿನ ಮೊದಲೇ ಅಂದರೆ ಮೇ 27ರಂದೇ ಕೇರಳವನ್ನು ಪ್ರವೇಶಿಸುವ ಸಾಧ್ಯತೆ ಇದೆ. ಹಾಗೆಯೇ ನೈಋತ್ಯ ಮುಂಗಾರು ಮಾರುತವು ಮೇ 15ರಂದು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ಪ್ರವೇಶಿಸಿ, ಮುಂದುವರಿಯಲು ಪೂರಕ ವಾತಾವರಣ ಸೃಷ್ಟಿಯಾಗುವ ನಿರೀಕ್ಷೆ ಇದೆ' ಎಂದು ಐಎಂಡಿ ತಿಳಿಸಿದೆ.

ವಾಯುವ್ಯ ಭಾರತದ ಕೆಲ ಭಾಗಗಳಲ್ಲಿ ಬಿಸಿಲ ಧಗೆ ಹೆಚ್ಚುತ್ತಿರುವ ಸಮಯದಲ್ಲೇ ಅವಧಿಪೂರ್ವ ಮುಂಗಾರು ಆರಂಭದ ಸುದ್ದಿ ಲಭ್ಯವಾಗಿದೆ. 2009ರಲ್ಲಿ ನೈಋತ್ಯ ಮಾನ್ಸೂನ್ ಮೇ 23ರಂದು ಕೇರಳ ಪ್ರವೇಶಿಸಿತ್ತು.

ಹಾರ್ದಿಕ್ ಪಟೇಲ್ ಕಾಂಗ್ರೆಸ್‌ಗೆ ವಿದಾಯ?

ಅಹಮದಾಬಾದ್: ಮುಂಬರುವ ವಿಧಾನಸಭಾ ಚುನಾವಣೆಗೂ ಮೊದಲೇ ಗುಜರಾತ್ ಕಾಂಗ್ರೆಸ್‌ಗೆ ದೊಡ್ಡ ಹಿನ್ನಡೆಯಾಗುವ ಸಾಧ್ಯತೆ ಇದೆ. ಕಾರಣ, ಪಕ್ಷದ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಹಾರ್ದಿಕ್ ಪಟೇಲ್, ಪಾಟೀದಾರ್ ಮೀಸಲಾತಿ ಆಂದೋಲನದ ನಾಯಕ ಯಾವುದೇ ಕ್ಷಣದಲ್ಲಿ ಪಕ್ಷಕ್ಕೆ ರಾಜೀನಾಮೆ ನೀಡಲಿದ್ದಾರೆ ಎನ್ನಲಾಗಿದೆ.



ಪಾಟೀದಾರ್ ನಾಯಕ ಹಾರ್ದಿಕ್, 'ಸ್ವಪಕ್ಷದವರೇ ನನ್ನನ್ನು ನಿರ್ಲಕ್ಷಿಸಿ, ಮೂಲೆಗುಂಪು ಮಾಡುತ್ತಿದ್ದಾರೆ' ಎಂದು ಬಹಿರಂಗವಾಗಿ ಟೀಕಿಸಿದ್ದಾರೆ.

ಈ ವಾರದ ಆರಂಭದಲ್ಲಿ ಕೇಂದ್ರ ಗುಜರಾತ್‌ನ ದಾಹೋಡ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಹಾರ್ದಿಕ್ ಅವರನ್ನು ಭೇಟಿ ಮಾಡದೇ, ಅಂತರ ಕಾಯ್ದುಕೊಂಡರು. ರಾಹುಲ್ ರ್‍ಯಾಲಿಯಲ್ಲಿ ಶಾಸಕ ಜಿಗ್ನೇಶ್ ಮೇವಾನಿ ಅವರ ಹೆಸರು ಹೇಳಿದರೂ, ಹಾರ್ದಿಕ್ ಪಟೇಲ್ ಹೆಸರು ಎತ್ತಲಿಲ್ಲ. ರಾಹುಲ್ ಅವರಿಂದ ಮುಖಭಂಗಕ್ಕೆ ಒಳಗಾದ ನಂತರ ಹಾರ್ದಿಕ್ ಪಕ್ಷ ತೊರೆಯುವ ಮನಸು ಮಾಡಿದ್ದಾರೆ ಎನ್ನಲಾಗಿದೆ.

'ಹಾರ್ದಿಕ್ ಮತ್ತು ಕಾಂಗ್ರೆಸ್ ನಡುವಿನ ಬಿಕ್ಕಟ್ಟು ಶಮನವಾಗುವ ಲಕ್ಷಣ ಕಾಣಿಸುತ್ತಿಲ್ಲ. ರಾಜಸ್ಥಾನದ ಉದಯಪುರದಲ್ಲಿ ಆಯೋಜನೆಯಾಗಿರುವ ಪಕ್ಷದ ಮೂರು ದಿನಗಳ ಚಿಂತನ-ಮಂಥನ ಅಧಿವೇಶನದಿಂದ ಹಾರ್ದಿಕ್ ಹೊರಗುಳಿಯಲಿದ್ದಾರೆ' ಎಂದು ಹಾರ್ದಿಕ್ ಅವರ ನಿಕಟವರ್ತಿಗಳ ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಉಗ್ರರ ನಂಟು: ಪ್ರಾಧ್ಯಾಪಕ ಸೇರಿ ಮೂವರ ವಜಾ

ಶ್ರೀನಗರ: ಭಯೋತ್ಪಾದನಾ ಸಂಘಟನೆಗಳೊಂದಿಗೆ ನಂಟು ಹೊಂದಿದ ಆರೋಪದ ಮೇಲೆ ಕಾಶ್ಮೀರ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು ಸೇರಿದಂತೆ ಮೂವರು ಸರ್ಕಾರಿ ನೌಕರರನ್ನು ಶುಕ್ರವಾರ ಜಮ್ಮು–ಕಾಶ್ಮೀರ ಆಡಳಿತವು ವಜಾಗೊಳಿಸಿದೆ.

ಕಾಶ್ಮೀರ ವಿಶ್ವವಿದ್ಯಾಲಯದ ರಾಸಾಯನ ಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಅಲ್ತಾಫ್ ಹುಸೇನ್, ಶಾಲಾ ಶಿಕ್ಷಣ ಇಲಾಖೆಯ ಶಿಕ್ಷಕ ಮೊಹಮ್ಮದ್ ಮಕ್ಬೂಲ್ ಹಜಾಂ, ಜಮ್ಮು–ಕಾಶ್ಮೀರ ಪೊಲೀಸ್ ಇಲಾಖೆಯ ಕಾನ್‌ಸ್ಟೆಬಲ್ ಗುಲಾಂ ರಸೂಲ್ ವಜಾಗೊಂಡವರು.

ನೀಟ್ ಪರೀಕ್ಷೆ ಮುಂದೂಡಲು 'ಸುಪ್ರೀಂ' ನಕಾರ

ನವದೆಹಲಿ(ಪಿಟಿಐ): ಸ್ನಾತಕೋತ್ತರ ವೈದ್ಯಕೀಯ/ ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು(ಪಿ-ಜಿ-2022) ಮುಂದೂಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಪರೀಕ್ಷೆ ಮುಂದೂಡುವುದರಿಂದ ವೈದ್ಯರ ಕೊರತೆಯಾಗಲಿದ್ದು, ರೋಗಿಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ನ್ಯಾಯಾಲಯ ಹೇಳಿದೆ.

ಯಾತ್ರಾರ್ಥಿಗಳ ಸಜೀವ ದಹನ

ಶ್ರೀನಗರ: ಕತ್ರಾದ ಪ್ರಸಿದ್ಧ ಮಾತಾ ವೈಷ್ಣೋದೇವಿ ದೇಗುಲದಿಂದ ಜಮ್ಮುವಿನತ್ತ ತೆರಳುತ್ತಿದ್ದ ಬಸ್‌ಗೆ ದಿಢೀರ್ ಬೆಂಕಿ ಹೊತ್ತಿಕೊಂಡು ನಾಲ್ವರು ಯಾತ್ರಾರ್ಥಿಗಳು ಸಜೀವ ದಹನಗೊಂಡಿದ್ದು, 20 ಮಂದಿ ಗಾಯಗೊಂಡಿರುವ ಘಟನೆ ಶುಕ್ರವಾರ ನಡೆದಿದೆ.

'ಕತ್ರಾದಿಂದ ಸುಮಾರು 1.5 ಕಿ.ಮೀ ದೂರದಲ್ಲಿರುವ ಖರ್ಮಾಲ್ ಬಳಿ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಕ್ಷಣಾರ್ಧದಲ್ಲೇ ಇಡೀ ಬಸ್‌ಗೆ ಆವರಿಸಿದೆ ಎಂದು ಪ್ರಾಥಮಿಕ ವರದಿಯಿಂದ ತಿಳಿದು ಬಂದಿದೆ' ಎಂದು ಜಮ್ಮು ಎಡಿಜಿಪಿ ಮುಖೇಶ್ ಸಿಂಗ್ ತಿಳಿಸಿದ್ದಾರೆ.

ಕತ್ರಾದಿಂದ ಜಮ್ಮುವಿನತ್ತ ತೆರಳುತ್ತಿದ್ದ ಸ್ಥಳೀಯ ನೋಂದಣಿಯ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ತೀವ್ರ ಗಾಯಗೊಂಡಿದ್ದ ಮತ್ತಿಬ್ಬರು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. 20 ಮಂದಿ ಗಾಯಾಳುಗಳನ್ನು ಕತ್ರಾಗೆ ಸ್ಥಳಾಂತರಿಸಲಾಗಿದೆ.



❦ ಸುಭಾಷಿತ ❦
ನಿಮ್ಮ ಬಗ್ಗೆ ನೀವು ಹೆಮ್ಮೆಪಡುವ ರೀತಿಯಲ್ಲಿ ಮತ್ತು ರಾತ್ರಿ ಚೆನ್ನಾಗಿ ನಿದ್ದೆ ಮಾಡುವ ರೀತಿಯಲ್ಲಿ ಬಿಕ್ಕಟ್ಟುಗಳನ್ನು ನಿರ್ವಹಿಸಿ.
–ರತನ್ ಟಾಟಾ

ಅಂಗವಿಕಲ ಬಾಲಕನಿಗೆ ಅವಕಾಶ ನಿರಾಕರಣೆ: ತಪ್ಪಿಸಬಹುದಾಗಿದ್ದ ಪ್ರಸಂಗ

ಇಂಡಿಗೊ ಏರ್‌ಲೈನ್ಸ್ ವಿಮಾನಯಾನ ಕಂಪನಿಯ ಅಧಿಕಾರಿಗಳು ಅಂಗವಿಕಲ ಬಾಲಕನೊಬ್ಬನಿಗೆ ವಿಮಾನ ಏರಲು ಅವಕಾಶ ನಿರಾಕರಿಸಿದ್ದಾರೆ. ಬಾಲಕನ ಜೊತೆ ಅವನ ಅಪ್ಪ-ಅಮ್ಮ ಕೂಡ ಇದ್ದರು. ರಾಂಚಿ ವಿಮಾನ ನಿಲ್ದಾಣದಲ್ಲಿ ನಡೆದ ಈ ಪ್ರಕರಣವು ವಿಮಾನಯಾನ ಕಂಪನಿಯ ಸಿಬ್ಬಂದಿಯಲ್ಲಿ ಸಂವೇದನೆ ಕೊರತೆಯ, ಅನುಕಂಪ ಇಲ್ಲದಿರುವುದರ ನಿದರ್ಶನದಂತೆ ಕಾಣುತ್ತದೆ. ಗಾಲಿ ಕುರ್ಚಿ ಮೇಲೆ ಕುಳಿತಿದ್ದ ಆ ಬಾಲಕ, ವಿಮಾನ ನಿಲ್ದಾಣದಲ್ಲಿನ ವಾತಾವರಣ, ತನ್ನ ಸುತ್ತಲಿನ ಗಲಿಬಿಲಿಗಳನ್ನು ಕಂಡು ಆಘಾತಕ್ಕೆ ಒಳಗಾದಂತೆ ಇತ್ತು. ವಿಮಾನಯಾನ ಕಂಪನಿಯ ಸಿಬ್ಬಂದಿಯು ಆತ 'ಹೆಚ್ಚು ಸಹಜವಾಗುವವರೆಗೆ' ವಿಮಾನ ಏರಲು ಅವಕಾಶ ನೀಡಲಾಗದು ಎಂದರು. ವಿಮಾನವು ಟೇಕ್ ಆಫ್ ಆಗುವ ಸಮಯಕ್ಕೆ ಮೊದಲೇ ಆ ಬಾಲಕ ಆಘಾತದ ಸ್ಥಿತಿಯಿಂದ ಹೊರಬಂದಿದ್ದನಾದರೂ, ಸಿಬ್ಬಂದಿ ಮಾತ್ರ ತಮ್ಮ ನಿಲುವಿನಿಂದ ಹಿಂದೆ ಸರಿಯಲಿಲ್ಲ. ಆತನ ವರ್ತನೆಯು ಇತರ ಪ್ರಯಾಣಿಕರಿಗೆ ತೊಂದರೆ ಉಂಟುಮಾಡಬಹುದು ಎಂದರು. ವಿಮಾನಯಾನ ಕಂಪನಿಯ ಸಿಬ್ಬಂದಿಯು ಇತರ ಪ್ರಯಾಣಿಕರ ಹಿತವನ್ನು ಗಮನದಲ್ಲಿ ಇರಿಸಿಕೊಳ್ಳಬೇಕು, ನಿಗದಿತ ಸಮಯದೊಳಗೆ ಅವರು ಒಂದು ತೀರ್ಮಾನವನ್ನು ಕೈಗೊಳ್ಳಬೇಕು ಎಂಬುದು ನಿಜ. ಆದರೆ, ವಿಶೇಷ ಗಮನದ ಅಗತ್ಯವಿರುವ ವ್ಯಕ್ತಿಗಳನ್ನು ದೇಶದ ಸಾರ್ವಜನಿಕ ಸ್ಥಳಗಳಲ್ಲಿ ಅಸೂಕ್ಷ್ಮವಾಗಿ ಕಾಣುವ ಹಲವು ಪ್ರಸಂಗಗಳು ವರದಿಯಾಗಿವೆ. ವಿಮಾನ ನಿಲ್ದಾಣಗಳಲ್ಲಿಯೂ ಇಂತಹ ಪ್ರಸಂಗಗಳು ಆಗಿವೆ.



ವಿಶೇಷ ಆರೈಕೆಯ ಅಗತ್ಯವಿರುವ ವಿಮಾನ ಪ್ರಯಾಣಿಕರ ಹಕ್ಕುಗಳ ರಕ್ಷಣೆಗೆ ನ್ಯಾಯಾಲಯಗಳು ನೀಡಿರುವ ಆದೇಶ ಹಾಗೂ ಡಿಜಿಸಿಎ ನಿಯಮಗಳನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರಬೇಕು

ಈ ಬಾಲಕ ಎದುರಿಸಿದ ಸಂದರ್ಭವು ಸಾರ್ವಜನಿಕರ ಗಮನಕ್ಕೆ ಬಂದ ನಂತರದಲ್ಲಿ ಇಂಡಿಗೊ ಕಂಪನಿಯು ವಿಷಾದ ವ್ಯಕ್ತಪಡಿಸಿದೆ. 'ಕ್ಲಿಷ್ಟಕರ ಸನ್ನಿವೇಶವೊಂದರಲ್ಲಿ ಸಿಬ್ಬಂದಿಯು ತಮ್ಮಿಂದ ಸಾಧ್ಯವಿದ್ದ ಅತ್ಯುತ್ತಮ ತೀರ್ಮಾನವೊಂದನ್ನು ಕೈಗೊಂಡಿದ್ದಾರೆ' ಎಂದು ಹೇಳಿದೆ. ಆದರೆ, ಅಂಗವೈಕಲ್ಯ ಹೊತ್ತವರು, ಇತರ ವಿಶೇಷ ಗಮನದ ಅಗತ್ಯವಿರುವ ವ್ಯಕ್ತಿಗಳ ವಿಚಾರದಲ್ಲಿ ಎಲ್ಲರೂ ಹೆಚ್ಚು ಸೂಕ್ಷ್ಮವಾಗಿ ವರ್ತಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಗಮನಿಸಿದಾಗ, ವಿಮಾನಯಾನ ಕಂಪನಿಯ ಸಿಬ್ಬಂದಿಯ ವರ್ತನೆ ತೃಪ್ತಿಕರವಾಗಿ ಇರಲಿಲ್ಲ ಅನ್ನಿಸುತ್ತದೆ. ಬಾಲಕ ಹಾಗೂ ಆತನ ಪಾಲಕರ ಪಾಲಿಗೆ ಇಡೀ ಘಟನೆಯು ಅದೆಷ್ಟು ನೋವು ಕೊಡುವಂಥದ್ದಾಗಿರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಮಾನಯಾನ ಕಂಪನಿಯ ಸಿಬ್ಬಂದಿ ಸೋತಿದ್ದಾರೆ. ಕಂಪನಿಯು ಬಾಲಕನ ಕುಟುಂಬಕ್ಕೆ ಆ ದಿನದ ಮಟ್ಟಿಗೆ ಹೋಟೆಲ್‌ನಲ್ಲಿ ವಾಸ್ತವ್ಯದ ವ್ಯವಸ್ಥೆ ಮಾಡಿಕೊಟ್ಟಿತು ಎಂಬುದು ನಿಜ. ಇಡೀ ಘಟನೆಯ ಬಗ್ಗೆ ಸಾರ್ವಜನಿಕರಿಂದ ಟೀಕೆಗಳು ವ್ಯಕ್ತವಾದ ನಂತರದಲ್ಲಿ ಬಾಲಕನಿಗೆ ವಿದ್ಯುತ್ ಚಾಲಿತ ಗಾಲಿಕುರ್ಚಿ ನೀಡುವುದಾಗಿ ಹೇಳಿದೆ. ಆದರೆ ಆಗಿರುವ ನೋವನ್ನು ಇವು ಯಾವುವೂ ಕಡಿಮೆ ಮಾಡುವುದಿಲ್ಲ. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಈ ಘಟನೆಯ ಬಗ್ಗೆ ವಿಚಾರಣೆಗೆ ಆದೇಶಿಸಿದೆ. ವಿಶೇಷ ಕಾಳಜಿಯ ಅಗತ್ಯವಿದ್ದ ಬಾಲಕನೊಬ್ಬ ಆಘಾತಕ್ಕೆ ಒಳಗಾಗಿದ್ದ ಸಂದರ್ಭ ಅದು. ಆದರೆ, ಇತರ ಪ್ರಯಾಣಿಕರಿಗೆ ತೊಂದರೆ ಉಂಟುಮಾಡಬಹುದಾದ ಪ್ರಯಾಣಿಕರಿಗೆ ಅನ್ವಯವಾಗುವ ನಿಯಮವನ್ನು ವಿಮಾನಯಾನ ಸಿಬ್ಬಂದಿಯು ಈ ಬಾಲಕನಿಗೆ ಅನ್ವಯ ಮಾಡಿರಬಹುದು ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ.

ವಿಶೇಷ ಆರೈಕೆಯ ಅಗತ್ಯವಿರುವ ಪ್ರಯಾಣಿಕರನ್ನು ಸಮಾನವಾಗಿ ಕಾಣಲು, ಅವರ ಹಕ್ಕುಗಳ ಉಲ್ಲಂಘನೆ ಆಗದಂತೆ ನೋಡಿಕೊಳ್ಳಲು ನ್ಯಾಯಾಲಯಗಳು ಆದೇಶ ನೀಡಿವೆ. ಡಿಜಿಸಿಎ ಕೂಡ ಇಂತಹ ವ್ಯಕ್ತಿಗಳ ಹಿತ ಕಾಯುವ ಉದ್ದೇಶದಿಂದ ಹಲವು ನಿಯಮಗಳನ್ನು ರೂಪಿಸಿದೆ. ನ್ಯಾಯಾಲಯದ ಆದೇಶಗಳನ್ನು, ಡಿಜಿಸಿಎ ನಿಯಮಗಳನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರಬೇಕು. ಸಾರ್ವಜನಿಕರ ಜೊತೆ ಒಡನಾಡುವವರಿಗೆ, ಸಾರ್ವಜನಿಕ ಸೇವೆಯಲ್ಲಿ ಇರುವವರಿಗೆ ಇಂತಹ ಸಂಗತಿಗಳ ವಿಚಾರವಾಗಿ ಅರಿವು ಮೂಡಿಸಬೇಕು. ಅಂಗವಿಕಲರ ಜೊತೆ ಹೇಗೆ ವರ್ತಿಸಬೇಕು, ಅವರ ಜೊತೆ ಹೇಗೆ ಸಂವಹನ ನಡೆಸಬೇಕು ಎಂಬ ಮಾಹಿತಿ ನೀಡಬೇಕು. ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿರುವ ಪ್ರಯಾಣಿಕರು ವಿಮಾನದಲ್ಲಿ ಪ್ರಯಾಣ ಮಾಡಲು ತೊಂದರೆ ಇಲ್ಲವೇ ಎಂಬುದನ್ನು ಪ್ರಮಾಣೀಕರಿಸಲು ಡಿಜಿಸಿಎ ಮಾನ್ಯತೆ ಹೊಂದಿರುವ ವೈದ್ಯರು ವಿಮಾನ ನಿಲ್ದಾಣಗಳಲ್ಲಿ ಲಭ್ಯರಿದ್ದರೆ ಚೆನ್ನ. ಈ ಸೌಲಭ್ಯವು ಎಲ್ಲ ವಿಮಾನ ನಿಲ್ದಾಣಗಳಲ್ಲಿ ಲಭ್ಯವಿದ್ದರೆ, ಈಗ ಎದುರಾದಂತಹ ಸನ್ನಿವೇಶಗಳನ್ನು ಸೂಕ್ಷ್ಮವಾಗಿ ನಿಭಾಯಿಸಲು ಸಾಧ್ಯವಾಗಬಹುದು.

ದಿನದ ಟ್ವೀಟ್


ಏಕೈಕ ಕೊರತೆ...



110 ಗ್ರಾಮಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸಿ 10 ವರ್ಷಗಳು ಕಳೆದರೂ ಅವುಗಳಿಗೆ ನೀರು ಮತ್ತು ವಿದ್ಯುತ್ ಸೌಲಭ್ಯವನ್ನು ಸಮರ್ಪಕವಾಗಿ ಕಲ್ಪಿಸಲಾಗಿದೆಯೇ ಎಂಬುದು ಇನ್ನೂ ಖಚಿತವಾಗಿಲ್ಲ. ಬಿಬಿಎಂಪಿ ಬಳಿ ಹಣ, ಸಂಪನ್ಮೂಲಗಳು, ವಾಹನಗಳು, ಸಿಬ್ಬಂದಿ ಮತ್ತು ಸುಂದರವಾದ ಕಟ್ಟಡಗಳು ಎಲ್ಲವೂ ಇವೆ. ಆದರೆ ಅದಕ್ಕಿರುವ ಏಕೈಕ ಕೊರತೆ: ನಗರವನ್ನು ಪ್ರೀತಿಸುವ ಮತ್ತು ಅದಕ್ಕಾಗಿ ದುಡಿಯುವ ರಾಜಕೀಯ ಇಚ್ಛಾಶಕ್ತಿಯುಳ್ಳ ಒಳ್ಳೆಯ ಜನ.

ಮುಕುಂದ್ ಗೌಡ, ಎಎಪಿ ಕಾರ್ಯಕರ್ತ

ಕಿಡಿನುಡಿ



ವೈವಾಹಿಕ ಅತ್ಯಾಚಾರ ಕುರಿತು ದೆಹಲಿ ಹೈಕೋರ್ಟ್ ಭಿನ್ನಮತದ ತೀರ್ಪು ನೀಡಿರುವುದು ದುರದೃಷ್ಟಕರ. ಪತ್ನಿಯು ತನ್ನ ಮೇಲೆ ಅತ್ಯಾಚಾರ ಎಸಗಲು ಪತಿಗೆ ಅವಕಾಶ ಮಾಡಿಕೊಡುವ ವೈವಾಹಿಕ ದಾಸ್ಯದಿಂದ ಬಂಧಿತಳಾಗಿರುತ್ತಾಳೆ ಎಂದು ಪ್ರಸ್ತುತ ಕಾನೂನು ಭಾವಿಸುತ್ತದೆ. ಇದು ಮಧ್ಯಕಾಲೀನ ಯುಗದ ಕಾನೂನಾಗಿದ್ದು, ಮಹಿಳೆಯು ತನ್ನ ಗಂಡನ ಆಸ್ತಿ ಎಂದು ಪರಿಗಣಿಸಲಾಗಿದ್ದ ಕಾಲದಲ್ಲಿ ರಚಿತವಾದುದಾಗಿದೆ. 'ಇಲ್ಲ' ಎಂದು ಹೇಳುವ ಹಕ್ಕು ಪತ್ನಿಗೆ ಇರಲೇಬೇಕು.

ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್ ವಕೀಲ

25 ವರ್ಷಗಳ ಹಿಂದೆ

ಬುಧವಾರ, 14-5-1997

● **ಸಂಸತ್ತಿನಲ್ಲಿ ಆಂಧ್ರ ವಾದ ರಾಜ್ಯದ ಆಕ್ಷೇಪ**

ನವದೆಹಲಿ, ಮೇ 13– ಕರ್ನಾಟಕವು ತುಂಗಾ ಮೇಲ್ದಂಡೆ ಯೋಜನೆಯನ್ನು ಕೈಗೊಂಡರೆ ಆಂಧ್ರಪ್ರದೇಶಕ್ಕೆ ತೊಂದರೆ ಆಗುವುದರಿಂದ ಈ ಯೋಜನೆಯನ್ನು ಕೈಬಿಡುವಂತೆ ಆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಬೇಕೆಂದು ಆಂಧ್ರದ ಕಾಂಗ್ರೆಸ್ ಸದಸ್ಯರು ಇಂದು ಲೋಕಸಭೆಯಲ್ಲಿ ಒತ್ತಾಯಿಸಿದರು.

ಲೋಕಸಭೆಯಲ್ಲಿ ಕಾಂಗ್ರೆಸ್‌ನ ವೈ.ಎಸ್. ರಾಜಶೇಖರ ರೆಡ್ಡಿ ಅವರು ತುಂಗಾ ಮೇಲ್ದಂಡೆ ಯೋಜನೆಯನ್ನು ಪ್ರಸ್ತಾಪಿಸಿದಾಗ ಅವರ ಬೆಂಬಲಕ್ಕೆ ಆಂಧ್ರದ ಕಾಂಗ್ರೆಸ್ ಸದಸ್ಯರೆಲ್ಲರೂ ದನಿಗೂಡಿಸಿದರು. ಆಗ ಕರ್ನಾಟಕದ ಜನತಾದಳದ ಸದಸ್ಯರಿಂದ ತೀವ್ರ ಆಕ್ಷೇಪ ಮತ್ತು ಪ್ರತಿಭಟನೆ ಬಂದಿತು. ಈ ಹಂತದಲ್ಲಿ ಕೆಲ ನಿಮಿಷ ರಾಜ್ಯಗಳ ಸದಸ್ಯರ ನಡುವೆ ಸ್ವಲ್ಪ ಹೊತ್ತು ಮಾತಿನ ಚಕಮಕಿ ನಡೆಯಿತು.

● **ಬೃಹತ್ ಉದ್ಯಮ ಸ್ಥಾಪನೆಗೆ ಅಡ್ಡಿ ಬೇಡ: ಪಟೇಲ್**

ಮಂಗಳೂರು, ಮೇ 13– 'ದಕ್ಷಿಣ ಕನ್ನಡಕ್ಕೆ ಬೃಹತ್ ಕೈಗಾರಿಕೆಗಳು ಬರುವುದಕ್ಕೆ ಅಡ್ಡಿಪಡಿಸಬೇಡಿ, ರಾಜ್ಯದ ಅಭಿವೃದ್ಧಿಗೆ ಕೈಗಾರಿಕೆಗಳು ಅನಿವಾರ್ಯ' ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಪರಿಸರವಾದಿಗಳಿಗೆ ಇಂದು ವಿನಂತಿ ಮಾಡುವುದರೊಂದಿಗೆ ಬೃಹತ್ ಕೈಗಾರಿಕೆಗಳ ಸ್ಥಾಪನೆ ವಿಚಾರದಲ್ಲಿ ಸರ್ಕಾರಕ್ಕೆ ಇರುವ ಬದ್ಧತೆಯನ್ನು ಪುನರುಚ್ಚರಿಸಿದರು.

ಸುರತ್ಕಲ್‌ನ ಕರ್ನಾಟಕದ ರೀಜನಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬೋಧನಾ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ

ಭಾನುವಾರ, 14-5-1972

● **ಶಾಸಕರು ಶಿಸ್ತಿನಿಂದ ವರ್ತಿಸದಿದ್ದರೆ ಜನತಂತ್ರ ವ್ಯವಸ್ಥೆ ಕುಸಿದೀತು: ಧಿಲೋನ್**

ಬೆಂಗಳೂರು, ಮೇ 13– ಸಂಸತ್ತು ಮತ್ತು ವಿಧಾನ ಮಂಡಲಗಳು ಸುಸೂತ್ರವಾಗಿ ತಮ್ಮ ಹೊಣೆ ನಿರ್ವಹಿಸಲು ಶಾಸಕರು ಸ್ವಯಂ ನಿಯಂತ್ರಣ ಮತ್ತು ಶಿಸ್ತಿನಿಂದ ವರ್ತಿಸಬೇಕೆಂದು ಲೋಕಸಭಾ ಅಧ್ಯಕ್ಷ ಡಾ. ಜಿ.ಎಸ್. ಧಿಲೋನ್ ಅವರು ಇಂದು ಇಲ್ಲಿ ನುಡಿದು, 'ಇಲ್ಲದಿದ್ದಲ್ಲಿ ನಮ್ಮ ಜನತಂತ್ರ ವ್ಯವಸ್ಥೆಯ ಮೂಲವೇ ಕುಸಿದೀತು' ಎಂದು ಎಚ್ಚರಿಸಿದರು.

ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಸಂಘದ ರಾಜ್ಯ ಶಾಖೆ ಮತ್ತು ರಾಜ್ಯಾಂಗ ಹಾಗೂ ಸಂಸದೀಯ ಸಂಸ್ಥೆಯ ರಾಜ್ಯ ಶಾಖೆಯ ಆಶ್ರಯದಲ್ಲಿ ವಿಧಾನಸೌಧದಲ್ಲಿ ಶಾಸಕರ ವಿಚಾರಗೋಷ್ಠಿಯನ್ನು ಉದ್ಘಾಟಿಸಿದ ಡಾ. ಧಿಲೋನ್ ಅವರು, ಸಭೆಯ ಗೌರವ, ಘನತೆ ಎತ್ತಿ ಹಿಡಿಯುವುದು ಪ್ರತಿಯೊಬ್ಬ ಶಾಸಕನ ಕರ್ತವ್ಯವೆಂದು ಹೇಳಿ, ಚುನಾಯಿತ ಪ್ರತಿನಿಧಿ ಬೇರೆಯವರಿಗೆ ಮಾರ್ಗದರ್ಶಕನಾಗಿರಬೇಕೆಂಬ ಅಂಶವನ್ನು ಮರೆಯಬಾರದೆಂದರು.

ಮುಖ್ಯವಾಗಿ, ಹೊಸದಾಗಿ ಶಾಸಕರಾಗಿ ಬಂದಿರುವವರು ಕಲಾಪದ ಕ್ರಮ, ನಿಯಮ ಮೊದಲಾದವುಗಳನ್ನು ಆಳವಾಗಿ ಅಭ್ಯಾಸ ಮಾಡಬೇಕಾದ ಅಗತ್ಯವನ್ನು ಒತ್ತಿ ಹೇಳಿದ ಅವರು, ಅಧ್ಯಕ್ಷ ಪೀಠಕ್ಕೆ ಗೌರವ ಸೂಚಿಸುವುದು ಶಾಸಕರ ಕರ್ತವ್ಯವಾಗಿದೆ ಎಂದರು.

ಬಳಕೆದಾರರ ಹಿತರಕ್ಷಣೆಗೆ ಸಮರ್ಪಕ ನಿಯಮ ರೂಪಿಸಲು ಏಕೆ ಇಷ್ಟು ತಿಣುಕಾಟ?

ಆಹಾರದ ಪ್ಯಾಕೆಟ್: ಮಾಹಿತಿಗೇಕೆ ಹಿಂಜರಿತ?



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಐಪಿಎಲ್ ಕ್ರಿಕೆಟ್ ಪಂದ್ಯಗಳನ್ನು ವೀಕ್ಷಿಸುತ್ತಾ ಅಥವಾ ಮಲ್ಟಿಪ್ಲೆಕ್ಸ್‌ನಲ್ಲಿ ಸಿನಿಮಾ ನೋಡುತ್ತಾ ನೀವು ತಿನ್ನುವ ಚಿಪ್ಸ್, ಕೋಡುಬಳೆ, ಚಕ್ಕುಲಿ ಅಥವಾ ಕುಡಿಯುವ ಕೋಕಾ ಕೋಲಾ, ಪೆಪ್ಸಿ, ಫ್ರೂಟಿ ಮುಂತಾದ ತಂಪು ಪಾನೀಯದಲ್ಲಿರುವ ಸಕ್ಕರೆ, ಉಪ್ಪು ಮತ್ತು ಕೊಬ್ಬಿನಾಂಶದ ಪ್ರಮಾಣವನ್ನು ಬಲ್ಲಿರಾ? ಪ್ಯಾಕೆಟ್ ಮೇಲೆ ಮುದ್ರಿಸಿರುವ ಮಾಹಿತಿ ಎಂದಾದರೂ ಓದಿದ್ದೀರಾ? ಕೇವಲ ಎರಡು ಗಂಟೆಗಳ ಅವಧಿಯಲ್ಲಿ ಒಂದು ವಾರಕ್ಕೆ ಬೇಕಾದಷ್ಟು ಸಕ್ಕರೆ ನಿಮ್ಮ ಹೊಟ್ಟೆಯೊಳಕ್ಕೆ ಪ್ರವೇಶ ಮಾಡಿರುತ್ತದೆ. ಅತಿಯಾದ ಸಕ್ಕರೆ, ಉಪ್ಪು ಮತ್ತು ಕೊಬ್ಬಿನಾಂಶ ಸೇವಿಸುವುದರಿಂದ ಬೊಜ್ಜು, ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ ಎಂದು ವೈದ್ಯಕೀಯ ವರದಿಗಳು ಹೇಳುತ್ತವೆ.

ಬಳಕೆದಾರರ ಮೇಲೆ ಆಗುತ್ತಿರುವ ಈ ದುಷ್ಪರಿಣಾಮ ತಡೆಗಟ್ಟಲು ಇರುವ ಒಂದೇ ಮಾರ್ಗ, ಪ್ಯಾಕ್ ಮಾಡಿದ ಆಹಾರದಲ್ಲಿರುವ ಪೌಷ್ಟಿಕಾಂಶ, ಸಕ್ಕರೆ, ಉಪ್ಪು ಮತ್ತು ಇತರ ಅಂಶಗಳ ಬಗ್ಗೆ ಬಳಕೆದಾರರಿಗೆ ಅರ್ಥವಾಗುವ ರೀತಿಯಲ್ಲಿ ಮಾಹಿತಿ ನೀಡುವುದು. ಈ ಹಿನ್ನೆಲೆಯಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನಕ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ನಿಯಮ ರೂಪಿಸಲು ಮುಂದಾಗಿದೆ. ಆದರೆ ಪ್ರಾಧಿಕಾರದ ನಡೆ ವಿವಾದಕ್ಕೆ ಒಳಪಟ್ಟಿದೆ.

ಬಳಕೆದಾರರು ಸೇವಿಸುವ ಆಹಾರದ ಬಗ್ಗೆ ಮಾಹಿತಿ ನೀಡಲು ವಿಶ್ವದಾದ್ಯಂತ ವಿವಿಧ ಮಾದರಿಗಳನ್ನು ಅನುಸರಿಸಲಾಗಿದೆ. ಬ್ರಿಟನ್, ಇರಾನ್, ಶ್ರೀಲಂಕಾ, ಈಕ್ವೆಡಾರ್‌ನಲ್ಲಿ 'ಟ್ರಾಫಿಕ್ ಲೈಟ್ ಸಿಗ್ನಲ್' ಮಾದರಿಯನ್ನು ಅನುಸರಿಸಲಾಗಿದೆ. ಇದರ ಪ್ರಕಾರ, ಆಹಾರದ ಪ್ಯಾಕೆಟ್ ಮೇಲೆ ಮೂರು ಬಣ್ಣಗಳಲ್ಲಿ ಮಾಹಿತಿ ಮುದ್ರಿಸಲಾಗುತ್ತದೆ. ಹಸಿರು, ಕೇಸರಿ ಮತ್ತು ಕೆಂಪು ಬಣ್ಣಗಳ ಹಿನ್ನೆಲೆಯಲ್ಲಿ ಸಕ್ಕರೆ, ಉಪ್ಪು ಮತ್ತು ಕೊಬ್ಬಿನಾಂಶದ ಪ್ರಮಾಣವನ್ನು ಮುದ್ರಿಸಲಾಗುತ್ತದೆ. ಹಸಿರು ಬಣ್ಣ ಅತಿ ಕಡಿಮೆ ಎಂದು, ಕೆಂಪು ಬಣ್ಣವಾದರೆ ಹೆಚ್ಚಿನ ಅಂಶ ಎಂದು ಅರ್ಥ. ಆದರೆ ಒಂದೇ ಆಹಾರ ಪದಾರ್ಥದಲ್ಲಿ ಉಪ್ಪು ಮತ್ತು ಕೊಬ್ಬಿನಾಂಶ ಹೆಚ್ಚಾಗಿದ್ದಲ್ಲಿ ಬಳಕೆದಾರರಲ್ಲಿ ಗೊಂದಲ ಸೃಷ್ಟಿಯಾಗುವ ಸಾಧ್ಯತೆ ಇದೆ. ನ್ಯೂಜಿಲೆಂಡ್, ಬೆಲ್ಜಿಯಂ ಮತ್ತು ಆಸ್ಟ್ರೇಲಿಯಾ ದೇಶಗಳು ನಕ್ಷತ್ರ (ಸ್ಟಾರ್ ರೇಟಿಂಗ್) ನೀಡುವ ಮೂಲಕ ಆಹಾರದಲ್ಲಿರುವ ವಿವಿಧ ಅಂಶಗಳ ಬಗ್ಗೆ ಮಾಹಿತಿ ನೀಡುವ ಕಾನೂನು ಹೊರಡಿಸಿವೆ.

ನಮ್ಮ ದೇಶದಲ್ಲಿ ವಿದ್ಯುತ್ ಉಪಕರಣಗಳಿಗೆ ಸ್ಟಾರ್ ರೇಟಿಂಗ್ ಜಾರಿಯಲ್ಲಿದೆ. ಕಡಿಮೆ ವಿದ್ಯುತ್ ಬಳಸುವ ಉಪಕರಣಕ್ಕೆ ಐದು ಸ್ಟಾರ್, ಹೆಚ್ಚು ವಿದ್ಯುತ್ ಬಳಸುವ ಉಪಕರಣಕ್ಕೆ ಒಂದು ಸ್ಟಾರ್ ನೀಡಲಾಗುತ್ತದೆ. ಚಿಲಿ, ಉರುಗ್ವೆ, ಮೆಕ್ಸಿಕೊ ಮತ್ತು ಇಸ್ರೇಲ್ ದೇಶಗಳು ಅತ್ಯಂತ ಪರಿಣಾಮಕಾರಿ ಮಾದರಿಯನ್ನು ಅನುಸರಿಸುತ್ತಿವೆ. ಈ ದೇಶಗಳಲ್ಲಿ ಆಹಾರದ ಪ್ಯಾಕೆಟ್ ಮೇಲೆ ಎಚ್ಚರಿಕೆಯ ಲೇಬಲ್ ಇರುತ್ತದೆ. ಸಕ್ಕರೆ, ಉಪ್ಪು, ಕೊಬ್ಬಿನಾಂಶ ಮತ್ತು ಇತರ ಪೌಷ್ಟಿಕಾಂಶದ ಪ್ರಮಾಣದ ಮಾಹಿತಿಯನ್ನು ಬಣ್ಣ, ಗ್ರಾಫಿಕ್ಸ್‌ನಂತಹವುಗಳ ಮೂಲಕ ಒದಗಿಸಲಾಗುತ್ತದೆ. ಬಳಕೆದಾರರು ಸುಲಭವಾಗಿ ಇದನ್ನು ಅರ್ಥಮಾಡಿಕೊಳ್ಳಬಹುದು.

ಭಾರತದಲ್ಲಿರುವ ಅನಕ್ಷರತೆ, ಭಾಷಾ ಸಮಸ್ಯೆ, ಬಳಕೆದಾರರಲ್ಲಿ ಪ್ಯಾಕ್ ಮಾಡಿದ ಆಹಾರ ಪದಾರ್ಥಗಳ ಮೇಲಿನ ವ್ಯಾಮೋಹ ಇತ್ಯಾದಿ ಹಿನ್ನೆಲೆಯಲ್ಲಿ ಯಾವ ಮಾದರಿ ಲೇಬಲ್ ಅಳವಡಿಸಬೇಕೆಂಬ ಚರ್ಚೆ ಏಳೆಂಟು ವರ್ಷಗಳಿಂದ ನಡೆಯುತ್ತಿದೆ. ಎಫ್‌ಎಸ್‌ಎಸ್‌ಎಐ 2014ರ ಮಾರ್ಚ್‌ನಲ್ಲಿ ಆಹಾರ ತಜ್ಞರ ಸಮಿತಿಯನ್ನು ರಚಿಸಿದ್ದು ಮೊದಲನೇ ಪ್ರಯತ್ನ. ಈ ಸಮಿತಿಯು ಆಹಾರದಲ್ಲಿರುವ ವಿವಿಧ ಪೌಷ್ಟಿಕಾಂಶ, ಸಕ್ಕರೆ, ಉಪ್ಪು ಇತ್ಯಾದಿ ವಿವರವನ್ನು ಪ್ಯಾಕೆಟ್ ಮುಂಭಾಗದಲ್ಲಿ ಮುದ್ರಿಸಬೇಕೆಂದು ಸಲಹೆ ನೀಡಿತು. 2015ರ ಜೂನ್‌ನಲ್ಲಿ ಹನ್ನೊಂದು ಸದಸ್ಯರ ಮತ್ತೊಂದು ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು 2017ರ ಮೇ ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸಿತು.

ಲೇಬಲಿಂಗ್ ಬಗ್ಗೆ 2018ರ ಏಪ್ರಿಲ್‌ನಲ್ಲಿ ಎಫ್‌ಎಸ್‌ಎಸ್‌ಎಐ ಕರಡು ನಿಯಮ ಪ್ರಕಟಿಸಿತು. ಇದರ ಪ್ರಕಾರ, ಪ್ಯಾಕೆಟ್ ಮುಂಭಾಗದಲ್ಲಿ ಒಟ್ಟು ಕೊಬ್ಬಿನಾಂಶ, ಉಪ್ಪು, ಸಕ್ಕರೆ ಮತ್ತು ಅವುಗಳ ಗರಿಷ್ಠ ಪ್ರಮಾಣವನ್ನು ಮುದ್ರಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ನಂತರ ಅದೇ ವರ್ಷ ಆಗಸ್ಟ್‌ನಲ್ಲಿ ಬಿ. ಸಸಿಶೇಖರನ್ ಅವರ ಅಧ್ಯಕ್ಷತೆಯಲ್ಲಿ ಎಫ್‌ಎಸ್‌ಎಸ್‌ಎಐ ಮತ್ತೊಂದು ಸಮಿತಿ ರಚಿಸಿ, ಕರಡು ನಿಯಮದ ಬಗ್ಗೆ ಸಲಹೆ ನೀಡುವಂತೆ ಸೂಚಿಸಿತು. ಈ ಸಮಿತಿಯ ವರದಿ ಬಹಿರಂಗ ಆಗಲಿಲ್ಲ.

2019ರ ಜುಲೈನಲ್ಲಿ ಎಫ್‌ಎಸ್‌ಎಸ್‌ಎಐ ಪ್ರಕಟಿಸಿದ ಮತ್ತೊಂದು ಕರಡು ನಿಯಮದಲ್ಲಿ ಬಹಳಷ್ಟು ಬದಲಾವಣೆ ಮಾಡಿತ್ತು. ಉದಾಹರಣೆಗೆ 'ಉಪ್ಪು' ಎನ್ನುವ ಬದಲು 'ಸೋಡಿಯಂ', ಒಟ್ಟು ಸಕ್ಕರೆ ಬದಲು 'ಸೇರಿಸಿದ ಸಕ್ಕರೆ' ಎಂಬ ಪದಗಳನ್ನು ಬಳಸಲಾಗಿತ್ತು. ಇದರಿಂದ ಕರಡು ನಿಯಮ ಬಹಳಷ್ಟು ಸಡಿಲಗೊಂಡಿತು. ಮತ್ತೊಮ್ಮೆ 2020ರ ಜನವರಿಯಲ್ಲಿ ಎಫ್‌ಎಸ್‌ಎಸ್‌ಎಐ ಇನ್ನೊಂದು ಕಾರ್ಯಕಾರಿ ಸಮಿತಿಯನ್ನು ರಚಿಸಿ, ಪ್ಯಾಕೆಟ್ ಮುಂಭಾಗದಲ್ಲಿ ಮುದ್ರಿಸುವ ನಿಯಮವನ್ನು ಪುನರ್ ಪರಿಶೀಲಿಸುವಂತೆ ಸೂಚಿಸಿತು. 2020ರ ನವೆಂಬರ್‌ನಲ್ಲಿ ಎಫ್‌ಎಸ್‌ಎಸ್‌ಎಐ ಪ್ರಕಟಿಸಿದ ಆಹಾರ ಸುರಕ್ಷತೆ ಮತ್ತು ಮಾನಕ (ಲೇಬಲಿಂಗ್) ನಿಯಮದಲ್ಲಿ ಪ್ಯಾಕೆಟ್ ಮುಂಭಾಗದಲ್ಲಿ ಮಾಹಿತಿ ಮುದ್ರಿಸುವ ವಿಚಾರವೇ ನಾಪತ್ತೆ.

ಮೇಲೆ ಹೇಳಿದ ದಂಡಯಾತ್ರೆ ಸಾಲದು ಎಂಬಂತೆ ಎಫ್‌ಎಸ್‌ಎಸ್‌ಎಐ ಈ ವರ್ಷದ ಫೆಬ್ರುವರಿಯಲ್ಲಿ ಅಹಮದಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮೂಲಕ ದೇಶವ್ಯಾಪಿ ಸಮೀಕ್ಷೆ ನಡೆಸಿದ್ದು, ವರದಿಯನ್ನು ಬಿಡುಗಡೆ ಮಾಡಿ ಸಾರ್ವಜನಿಕರಿಂದ ಸಲಹೆ ಆಹ್ವಾನಿಸಿದೆ. ಈ ಸಮೀಕ್ಷೆಯು ಬಳಕೆದಾರರ ಹಿತಕ್ಕಿಂತ ಸಿದ್ಧಪಡಿಸಿದ ಆಹಾರ ಕಂಪನಿಗಳ ಪರ ಇದೆ ಎಂಬ ಟೀಕೆಗೆ ಗುರಿಯಾಗಿದೆ. ವರದಿಯು ಸ್ಟಾರ್ ರೇಟಿಂಗ್ ಪದ್ಧತಿ ಅನುಸರಿಸುವಂತೆ ಸಲಹೆ ನೀಡಿದೆ. ಆದರೆ ಸ್ಟಾರ್ ರೇಟಿಂಗ್ ಪದ್ಧತಿ ಜಾರಿಗೊಳಿಸಿರುವ ದೇಶಗಳಲ್ಲಿ ಅದು ವಿಫಲವಾಗಿರುವುದರಿಂದ ಅದನ್ನು ಭಾರತದಲ್ಲಿ ಅಳವಡಿಸುವುದು ಸರಿಯಲ್ಲ ಎಂದು ಆಹಾರ ತಜ್ಞರು ಮತ್ತು ಗ್ರಾಹಕ ಕಾಯಕರ್ತರು ಅಭಿಪ್ರಾಯಪಟ್ಟಿದ್ದಾರೆ.

ಐಐಎಂ ಸಮೀಕ್ಷೆ ನಡೆಸಿದ ಮಾದರಿ ಬಗ್ಗೆಯೂ ಅನುಮಾನ ವ್ಯಕ್ತವಾಗಿದೆ. ಸಮೀಕ್ಷೆಯು ಸುಮಾರು 20,000 ಬಳಕೆದಾರರನ್ನು ಒಳಗೊಂಡಿತ್ತು. ವರದಿಯಲ್ಲಿ ಸೂಚಿಸಿರುವಂತೆ ಅದರಲ್ಲಿ ಶೇಕಡ 13.8ರಷ್ಟು ಬಳಕೆದಾರರು ಅನಕ್ಷರಸ್ಥರು ಅಥವಾ ಶಾಲೆಗೆ ಹೋಗದವರು ಮತ್ತು ಶೇಕಡ 28ರಿಂದ 35ರಷ್ಟು ಜನರು ಆಹಾರದ ಪ್ಯಾಕೆಟ್ ಮೇಲಿನ ಲೇಬಲ್ ಓದದವರು. ಪ್ಯಾಕ್ ಮಾಡಿದ ಆಹಾರ ಪದಾರ್ಥ ಸೇವಿಸುವವರಲ್ಲಿ 10ರಿಂದ 18 ವರ್ಷದವರೇ ಹೆಚ್ಚು. ಆದರೆ ಸಮೀಕ್ಷೆಗೆ ಈ ವಯೋಮಾನದವರನ್ನು ಪರಿಗಣಿಸಿಲ್ಲ. ಇಂತಹ ವರದಿಯನ್ನು ಒಪ್ಪಿಕೊಳ್ಳಬೇಕೆ ಎಂಬ ಅನುಮಾನವನ್ನು ಆಹಾರ ತಜ್ಞರು ವ್ಯಕ್ತಪಡಿಸುತ್ತಿದ್ದಾರೆ.

ಎಫ್‌ಎಸ್‌ಎಸ್‌ಎಐ ಇರುವುದು ಬಳಕೆದಾರರ ಹಿತ ಕಾಯುವುದಕ್ಕೋ ಅಥವಾ ಆಹಾರ ಸಂಸ್ಕರಿಸುವ ಉದ್ಯಮದ ಹಿತ ಕಾಯುವುದಕ್ಕೋ? ಬಳಕೆದಾರರ ತೆರಿಗೆ ಹಣದಿಂದ ಸ್ಥಾಪನೆಗೊಂಡಿರುವ ಎಫ್‌ಎಸ್‌ಎಸ್‌ಎಐ ಇಷ್ಟೆಲ್ಲಾ ಸರ್ಕಸ್ ಮಾಡುವ ಬದಲು ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿರುವ ಮಾದರಿ, ಅನುಸರಿಸಬಹುದಿತ್ತು. ಸಂಸ್ಕರಿಸಿದ 100 ಗ್ರಾಂ ಆಹಾರ, 100 ಮಿಲಿ ಲೀಟರ್ ಪಾನೀಯದಲ್ಲಿ ಎಷ್ಟು ಪ್ರಮಾಣದಲ್ಲಿ ಸಕ್ಕರೆ, ಉಪ್ಪು, ಕೊಬ್ಬಿನಾಂಶ ಇರಬಹುದು ಎಂಬುದನ್ನು ಈ ಮಾದರಿಯು ಸೂಚಿಸಿದೆ. ಇದನ್ನು ಆಚರಣೆಗೆ ತರಲು ಇರುವ ಅಡಚಣೆಯಾದರೂ ಯಾವುದು?

ಭಾರತದ ಪರಿಸ್ಥಿತಿಗೆ ಅನುಗುಣವಾಗಿ ಬೇಕಾಗಿರುವ ಗರಿಷ್ಠ ಮಿತಿಯನ್ನು ನಿರ್ಧರಿಸುವವರೆಗೆ ವಿಶ್ವ ಆರೋಗ್ಯ ಸಂಸ್ಥೆಯ ನಿಯಮ ಪಾಲಿಸುವುದು ಸರಿಯಾದ ಮಾರ್ಗ.

ಲೇಖಕ: ಕೇಂದ್ರ ಗ್ರಾಹಕ ಸಂರಕ್ಷಣಾ ಪರಿಷತ್ತಿನ ಮಾಜಿ ಸದಸ್ಯ



ಚುರುಮುರಿ



ಸತ್ಯ ಪರೀಕ್ಷೆ

● ಸಿ.ಎನ್.ರಾಜು

'ಪಿಎಸ್‌ಐ ಪರೀಕ್ಷೆ ಹಗರಣದ ಕಿಂಗ್‌ಪಿನ್, ಕ್ವೀನ್‌ಪಿನ್‌ಗಳು ಅರೆಸ್ಟ್ ಆದ್ರೇನ್ರೀ?' ಅನು ಕೇಳಿದಳು.

'ಇನ್ನಷ್ಟು ಪಿನ್‌ಗಳ ಬಗ್ಗೆ ತನಿಖೆ ನಡೆಯುತ್ತಿದೆಯಂತೆ. ಒಂದು ಗುಂಡುಪಿನ್ನೂ ತಪ್ಪಿಸಿಕೊಳ್ಳಲು ಬಿಡುವುದಿಲ್ಲ ಅಂತ ಹೋಂ ಮಿನಿಸ್ಟರ್ ಹೇಳಿದ್ದಾರೆ' ಅಂದ ಗಿರಿ.

'ಪರೀಕ್ಷೆಯಲ್ಲಿ ಇಂಥಾ ಕಾಪಿ ಚೇಷ್ಟೆ ಬೇಕಿತ್ತಾ? ನಮ್ಮ ಕಾಲದಲ್ಲಿ ವಿದ್ಯಾರ್ಥಿಗಳು ಕಾಪಿ ಹೊಡೆಯುವಾಗ ಸಿಕ್ಕಿಬಿದ್ದು ಡಿಬಾರ್ ಆಗ್ತಿದ್ರು, ಈಗ ಕಾಪಿ ಮಾಡಿಸಲು ಹೋಗಿ ಪರೀಕ್ಷಾ ಹೊಣೆಗಾರರೇ ಡಿಬಾರ್ ಆಗುವಂತಾಗಿದೆ. ಬೇಲಿಯೇ ಎದ್ದು ಹೊಲ ಮೇಯ್ದರೆ ಹೇಗೆ?'

'ಆ ಬೇಲಿಯ ಕಾವಲಿಗೆ ಇನ್ನೊಂದು ಬೇಲಿ ಹಾಕಿ ಭದ್ರ ಮಾಡಬೇಕಷ್ಟೇ...'

'ಆ ಬೇಲಿಯೂ ಮೇಯ್ದರೆ, ಅದರ ಕಾವಲಿಗೆ ಮತ್ತೊಂದು ಬೇಲಿ ಹಾಕಬೇಕೇನ್ರೀ? ಪರೀಕ್ಷಾರ್ಥಿಗಳಿಗಿಂತ ಪರೀಕ್ಷೆ ನಡೆಸುವವರನ್ನು ಕಾಯುವ ದುಃಸ್ಥಿತಿ ಬರಬಾರದು'.

'ಪರೀಕ್ಷೆ ನಡೆಸುವವರಿಗೆ ಸತ್ಯಪರೀಕ್ಷೆ ನಡೆಸಿ, ಅದರಲ್ಲಿ ಪಾಸಾದವರನ್ನು ಪರೀಕ್ಷೆ ಕಾರ್ಯಕ್ಕೆ ನೇಮಿಸುವುದು ಸೂಕ್ತವೇನೋ'.

'ಇವರಿಗೆ ಪರೀಕ್ಷೆ ನಡೆಸುವವರು ಸತ್ಯವಂತರು ಅನ್ನೋದು ಏನು ಗ್ಯಾರಂಟಿ? ಇದು ಸತ್ಯ ಹರಿಶ್ಚಂದ್ರನ ಕಾಲ ಅಲ್ಲ'.

'ಪರೀಕ್ಷೆಯಲ್ಲಿ ಕಾಪಿ ತಡೆಯಲೊಂದು ಕಾವಲು, ಕಾವಲುಗಾರರನ್ನು ತಡೆಯಲು ಇನ್ನೊಂದು ಕಾವಲು, ಅಕ್ರಮ ಮಾಡಿ ತಪ್ಪಿಸಿಕೊಂಡವರನ್ನು ಪತ್ತೆ ಮಾಡಿ ಹಿಡಿಯಲು, ಹಿಡಿದ ಮೇಲೆ ಕೇಸು, ಕೋರ್ಟ್, ಶಿಕ್ಷೆ... ಒಂದು ಪರೀಕ್ಷೆಗೆ ಎಷ್ಟೊಂದು ಇಲಾಖೆಗಳು ಹೆಣಗಾಡಬೇಕು. ಕಾವಲುರಹಿತ ಪರೀಕ್ಷಾ ಪದ್ಧತಿ ಜಾರಿಯಾಗಬೇಕು'.

'ಕಾವಲು ಇಲ್ಲದಿದ್ದರೆ ಕಾಪಿ ಮಾಡಲು ಕಾಪಿರೈಟ್ಸ್ ಕೊಟ್ಟಂತಾಗುವುದಿಲ್ಲವೇ?'

'ಪರೀಕ್ಷಾರ್ಥಿಗಳಿಗೆ ಪುಸ್ತಕಗಳನ್ನು ಕೊಟ್ಟು ಕಾಪಿ ಮಾಡುವ ಕಾಪಿರೈಟ್ಸ್ ಕೊಡಬೇಕು. ಓದಿದ್ದವರು ನಿಗದಿತ ಸಮಯದಲ್ಲಿ ಉತ್ತರ ಬರೆದು ಪಾಸ್ ಆಗ್ತಾರೆ, ಓದದವರು ಪುಸ್ತಕದಲ್ಲಿ ಉತ್ತರ ಹುಡುಕಲು ಪರದಾಡಿ ಫೇಲ್ ಆಗ್ತಾರೆ...' ಎಂದು ಅಸಹನೆ ವ್ಯಕ್ತಪಡಿಸಿದಳು ಅನು.

ಸಂಗತ

ತೂಕ ಕಳೆಯುವ 'ಮ್ಯಾಜಿಕ್' ದಾರಿ!

ಶೀಘ್ರವಾಗಿ ತೂಕವನ್ನು ಇಳಿಸುವ ಪ್ರಕ್ರಿಯೆಯು ದೇಹ, ಮನಸ್ಸುಗಳ ಆರೋಗ್ಯಕ್ಕೆ ಸವಾಲೆಸೆಯುತ್ತದೆ

● ಡಾ. ಕೆ.ಎಸ್.ಪವಿತ್ರ

'ಒಂದು ತಿಂಗಳಲ್ಲಿ 10 ಕೆ.ಜಿ. ತೂಕ ಕಳೆದುಕೊಳ್ಳಿ', 'ಎಷ್ಟು ಬೇಕೋ, ಏನು ಬೇಕೋ ತಿನ್ನಿ, ಆದರೆ ದಪ್ಪ ಮಾತ್ರ ಆಗದಿರಲು ಈ ಹೆಲ್ತ್ ಟಾನಿಕ್ ತೆಗೆದುಕೊಳ್ಳಿ', 'ನಿಮ್ಮ ಡ್ರೆಸ್ ಸೈಜ್ ಒಂದು ದಿನಕ್ಕೆ ಚಿಕ್ಕದು ಮಾಡಿಕೊಳ್ಳಿ', ಇವೆಲ್ಲ ಸುಲಭ-ಶೀಘ್ರ ತೂಕ ಕಳೆದುಕೊಳ್ಳುವಿಕೆಯ ಆಕರ್ಷಕ ಜಾಹೀರಾತುಗಳು.

ಒಂದೆಡೆ, 'ತೆಳ್ಳಗಾಗಲು ಯಾವುದಾದರೂ ಮಾತ್ರೆ ಕೊಡಿ ಡಾಕ್ಟ್ರೇ' ಎಂದರೆ 'ಮಾತ್ರೆ ಗೀತ್ರೆ ಇಲ್ಲ, ನೀವು ಪ್ರತಿನಿತ್ಯ ಎದ್ದು ಬೆಳಿಗ್ಗೆ ಕನಿಷ್ಠ 3-4 ಕಿ.ಮೀ. ನಡೆಯಿರಿ, ಹಿತಮಿತವಾಗಿ ತಿನ್ನಿ' ಎನ್ನುವ ವೈದ್ಯರು; ಇನ್ನೊಂದೆಡೆ, ತೆಳ್ಳಗಾಗಲು ಪವಾಡದಂತಹ ಪರಿಹಾರ ನೀಡುವ 'ಪೂರಕ ಆಹಾರ'ಗಳು (ಸಪ್ಲಿಮೆಂಟ್) ಮತ್ತು ಸಾಧನಗಳು. ಜನ ಯಾವುದನ್ನು ಆಯ್ದುಕೊಂಡಾರು?! ಉತ್ತರ ಸುಲಭ. ಇದ್ದಕ್ಕಿದ್ದಂತೆ ತೆಳ್ಳಗಾಗಿ, ಒಮ್ಮೆಲೇ ತಮ್ಮ 'ಒರಿಜಿನಲ್' ರೂಪದ ಮಿನಿಯೇಚರ್‌ಗಳಂತೆ ವೈದ್ಯರ ಮುಂದೆ ಬರುವ ಜನರೀಗ ಹೆಚ್ಚಾಗಿದ್ದಾರೆ.


ತೂಕ ಹೆಚ್ಚುವುದರಿಂದ, ದೇಹದಲ್ಲಿನ ಕೊಲೆಸ್ಟರಾಲ್ ಅಂಶ ಜಾಸ್ತಿಯಾಗುವುದರಿಂದ, ಪ್ರಾಣಾಪಾಯ ತರಬಲ್ಲ, ದೀರ್ಘಕಾಲಿಕ ಅಸಮರ್ಥತೆಗೆ ಕಾರಣವಾಗಬಲ್ಲ ಕಾಯಿಲೆಗಳ ಸಾಧ್ಯತೆ ಹೆಚ್ಚುತ್ತದೆ. ಹಾಗಾಗಿ 'ಆರೋಗ್ಯಕ್ಕಾಗಿ ನಾವು ತೂಕ ಕಡಿಮೆ ಮಾಡಿಕೊಳ್ಳಬೇಕು' ಎಂಬ ಆತಂಕ ಜನರನ್ನು ಸಹಜವಾಗಿ ಕಾಡುತ್ತದೆ. ಆದರೆ ವ್ಯಾಯಾಮದ ಶಿಸ್ತು, ಹಿತಮಿತವಾದ ಆಹಾರ ಕ್ರಮಗಳನ್ನು ನಿಯಮಿತವಾಗಿ ರೂಢಿಸಿಕೊಳ್ಳುವುದು ಬಹುಜನರಿಗೆ ಸುಲಭವಲ್ಲ. ನೂರೊಂದು ಕೆಲಸ, ನಾಲಿಗೆ ಚಪಲ, ಬೆಳಗಿನ ಸವಿನಿದ್ರೆ ಇವುಗಳನ್ನು ಬದಿಗಿಟ್ಟು ವ್ಯಾಯಾಮ- ಆಹಾರದ ಶಿಸ್ತನ್ನು ಸದಾ ಪಾಲಿಸುವುದು ಕಷ್ಟವೇ.

ಹೀಗೆ ಅತ್ತ ತೂಕ ಕಳೆದುಕೊಳ್ಳಬೇಕು, ಇತ್ತ ಶಿಸ್ತೂ ಸಾಧ್ಯವಾಗದು ಎಂಬ ಗೊಂದಲದಿಂದ ಹೊಯ್ದಾಡುವ ಮನಸ್ಸುಗಳನ್ನು ಓಲೈಸಿ, ಲಾಭ ಪಡೆದುಕೊಳ್ಳುವ ವ್ಯಾಪಾರಿ ತಂತ್ರಗಳು ಹೆಚ್ಚುತ್ತಿವೆ. ಅಚ್ಚರಿಯ ಮಾತೆಂದರೆ, ಬಹುಜನ ಇಂತಹ ಉತ್ಪನ್ನಗಳಿಗೆ ಮೊರೆ ಹೋಗುವ ಪ್ರಾಥಮಿಕ ಉದ್ದೇಶ ಆರೋಗ್ಯದ ಸಮಸ್ಯೆಗಳಲ್ಲ. ಅದರ ಬದಲು, ತೆಳ್ಳಗಾಗಿ ತಮ್ಮ ದೇಹವನ್ನು 'ಸುಂದರ'ವಾಗಿಸಿಕೊಳ್ಳಬೇಕು ಎನ್ನುವ ಹಂಬಲ.

ಕೋವಿಡ್ ನಂತರದ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳ ಪೋಸ್ಟ್‌ಗಳ ಕುರಿತ ಅಧ್ಯಯನವೊಂದು 'ಆದರ್ಶ ದೇಹ' ಎಂದರೆ ಈಗ ಕೊಬ್ಬಿರದ ದೇಹವಷ್ಟೇ ಅಲ್ಲ, ಅದರೊಂದಿಗೆ 'ಮಸಲ್ಸ್' (ಬಲಿಷ್ಠ ಸ್ನಾಯು) ಇರುವ ದೇಹ ಎಂದು ದಾಖಲಿಸಿದೆ. ಕೊಬ್ಬಿನ ಕುರಿತು ಭಯ ಮತ್ತು ಕೊಬ್ಬಿನ ಅಂಶದ ಬಗ್ಗೆ ಪೂರ್ವಗ್ರಹಗಳನ್ನೂ ಈ ಅಧ್ಯಯನ ಗುರುತಿಸಿದೆ. ಇದು ವಿಶೇಷವಾಗಿ ಹದಿಹರೆಯದ ಮಕ್ಕಳಲ್ಲಿ ಹೆಚ್ಚು ಎಂಬುದನ್ನು ಗುರುತಿಸಿರುವುದು ನಮಗೆ ಯಾವ ಅಚ್ಚರಿಯನ್ನೂ ತರಲಾರದು.

ಶೀಘ್ರವಾಗಿ ತೂಕವನ್ನು ಇಳಿಸುವ ಪ್ರಕ್ರಿಯೆಯು ದೇಹ- ಮನಸ್ಸುಗಳ ಆರೋಗ್ಯಕ್ಕೆ ಸವಾಲೆಸೆಯುತ್ತದೆ. ಆಹಾರವನ್ನೇ ಬಿಡುವ, ಪಿಷ್ಟವಿರದ (no carbs diet– ಅನ್ನ-ಚಪಾತಿ-ಮುದ್ದೆಗಳಿರದ ಊಟ!) ಆಹಾರ ಸೇವಿಸುವ, ಅರ್ಧ ಚಮಚೆ ಎಣ್ಣೆಯನ್ನಷ್ಟೇ ಬಳಸುವ ಛಲವಾದಿಗಳು ಕೆಲವರಿರಬಹುದು. ಉಳಿದವರಿಗೆ ಈ ಹಟ ತಾತ್ಕಾಲಿಕ. ಹಿತಮಿತವಾಗಿ ತಿನ್ನುವ, ನಾಲಿಗೆಗೆ ಒಂದಷ್ಟು ಕಡಿವಾಣ ಹಾಕುವ ಶಿಸ್ತು ಬೆಳೆಯಬೇಕಾದ್ದು ಬಾಲ್ಯದಿಂದ. ಆಹಾರವನ್ನು ಆನಂದಿಸುವುದು, ಆಹಾರದೊಂದಿಗೆ ಸಂಬಂಧ-ಮಾತುಕತೆಗಳನ್ನು ಬೆಸೆಯುವ ಅಭ್ಯಾಸವು ಕೌಟುಂಬಿಕ ವಾತಾವರಣದಲ್ಲಿ ಬೆಳೆದು ಬರಬೇಕಾದ್ದು ಅತ್ಯವಶ್ಯ.

14 ವರ್ಷಗಳ ಕಾಲ ನಡೆದ ಸುದೀರ್ಘ ಅಧ್ಯಯನವೊಂದು ಮೂರು ಮುಖ್ಯ ಜೀವನಶೈಲಿಯ ಅಭ್ಯಾಸಗಳಿಗೂ ಸಾವಿನ ಸಾಧ್ಯತೆಗೂ ಇರುವ ಸಂಬಂಧವನ್ನು ಪರಿಶೀಲಿಸಿತು. ಹಣ್ಣು- ತರಕಾರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸೇವಿಸುವುದು, ಪ್ರತಿವಾರ 5 ದಿನಗಳ ಕಾಲ ವ್ಯಾಯಾಮ ಮಾಡುವುದು, ಧೂಮಪಾನ-ಮದ್ಯಪಾನ ಮಾಡದಿರುವುದು, ಇವು ಆ ಅಂಶಗಳು. ದಪ್ಪ ಇದ್ದವರೂ ಇವುಗಳನ್ನು ನಿಯಮಿತವಾಗಿ ರೂಢಿಸಿಕೊಂಡರೆ ಸಾವಿನ ಅಪಾಯದ ಸಾಧ್ಯತೆಯು ತೂಕ ಸಹಜವಾಗಿದ್ದವರಲ್ಲಿ ಇರುವಷ್ಟಕ್ಕೇ ಇಳಿದುಬಿಡುತ್ತದೆ ಎಂದು ಅಧ್ಯಯನ ಗುರುತಿಸಿದ್ದು ಗಮನಾರ್ಹ.



ಆತಂಕಕಾರಿಯಾದ ಇನ್ನೊಂದು ವಿಷಯವೆಂದರೆ, ಹಿತಮಿತ ಆಹಾರ-ವ್ಯಾಯಾಮಗಳ ಬದಲು ಶೀಘ್ರ ತೂಕ ಕಳೆದುಕೊಳ್ಳುವಿಕೆಗಾಗಿ ಪೂರಕ ಆಹಾರ ತೆಗೆದುಕೊಳ್ಳುವವರಲ್ಲಿ ಕಾಣಿಸುತ್ತಿರುವ ವಿವಿಧ ಆರೋಗ್ಯ ಸಮಸ್ಯೆಗಳು. 'ಪೂರಕ ಆಹಾರ'ಗಳನ್ನು ಅಮೆರಿಕದ ಎಫ್‌ಡಿಎ (ಫುಡ್ ಆ್ಯಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್) ಸೇರಿದಂತೆ ಗುಣಮಟ್ಟ ಪರಿಶೀಲಿಸುವ- ನಿಯಂತ್ರಿಸುವ ಯಾವ ಸಂಸ್ಥೆಯೂ ಔಷಧಿಗಳಂತೆ ಕಟ್ಟುನಿಟ್ಟಾದ ಟ್ರಯಲ್‌ಗಳನ್ನು ಹಾದುಹೋಗುವಂತೆ ಮಾಡುತ್ತಿಲ್ಲ. ಹಾಗಾಗಿ ಇವುಗಳನ್ನು ಸೇವಿಸಿದ ಜನರಲ್ಲಿ ಕಾಣುವ ಅತಿ ಶೀಘ್ರ ತೂಕ ಕಳೆದುಕೊಳ್ಳುವಿಕೆಯ ದೀರ್ಘ ಪರಿಣಾಮ, ಆರೋಗ್ಯ ಸಮಸ್ಯೆಗಳ ಬಗೆಗೆ ಅಧ್ಯಯನಗಳಾಗಲೀ ಮಾಹಿತಿಯಾಗಲೀ ಹೊರಬರುತ್ತಿಲ್ಲ.

ಆದ್ದರಿಂದಲೇ ನಾವು ಎಚ್ಚರದಿಂದಿದ್ದು, ಅನಾದಿ ಕಾಲದಿಂದ ನಮಗೆ ಗೊತ್ತಿರುವ 'ವ್ಯಾಯಾಮ-ಆಹಾರ'ಗಳ ಶಿಸ್ತನ್ನೇ ರೂಢಿಸಿಕೊಳ್ಳದೆ ಗತ್ಯಂತರವಿಲ್ಲ. ಬೆಳೆಯುವ ಮಕ್ಕಳಿಗೂ ಇದನ್ನೇ ಕಲಿಸುವುದು ಹಿರಿಯರ ಕರ್ತವ್ಯ. 'ಪೂರಕ ಆಹಾರ', ಶೀಘ್ರ ತೂಕ ಕಳೆದುಕೊಳ್ಳುವ ಸಾಧನಗಳಿಂದ ತೂಕಕ್ಕೆ ಮ್ಯಾಜಿಕ್ ಪರಿಹಾರ, ಅದರೊಂದಿಗೆ 'ಒಂದು ಕೊಂಡರೆ ಇನ್ನೊಂದು ಉಚಿತ' ಎಂಬಂತೆ ಅನಾರೋಗ್ಯವೂ ಜೊತೆಗೆ ಬಂದೀತು ಎಂಬ ಎಚ್ಚರ ಅತ್ಯಗತ್ಯ.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ಶುದ್ಧ ಭಕ್ತಿ, ನಿಷ್ಕಾಮ ಕರ್ಮ

ಅಹಮದಾಬಾದ್ ಸಮೀಪದ ಕೊಚ್ರಾಬ್ ಗ್ರಾಮದಲ್ಲಿ ದಲಿತ ಮಹಿಳೆಯೊಬ್ಬರು ತಾವು 15 ವರ್ಷಗಳಿಂದ ಉಳಿತಾಯ ಮಾಡಿದ ಹಣದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಮೇ 13). ಈ ಮಹಿಳೆಯು ಅಂಬೇಡ್ಕರ್ ಅವರಲ್ಲಿ ದೇವರನ್ನು ಕಾಣುತ್ತಾರೆ. ಅದಕ್ಕಾಗಿಯೇ ಹನುಮಾನ್ ದೇವಸ್ಥಾನದ ಪಕ್ಕದಲ್ಲಿಯೇ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿದ್ದಾರೆ. ಈ ಸ್ಥಾಪನೆಯ ಹಿಂದೆ ಬೇರೆ ಯಾವ ಉದ್ದೇಶವೂ ಇಲ್ಲ, ಪ್ರಚಾರದ ಹುಚ್ಚೂ ಇಲ್ಲ. ಬದಲು ಇಲ್ಲಿ ಕಾಣುವುದು ಕೇವಲ ಶುದ್ಧ ಭಕ್ತಿ, ನಿಷ್ಕಾಮ ಕರ್ಮ ಮಾತ್ರ.

ಪ್ರಚಾರಕ್ಕಾಗಿ ಹಪಹಪಿಸುವ ಸಮಾಜದಲ್ಲಿ ಈ ಮಹಿಳೆ ತನ್ನ ಇಂತಹ ಕಾರ್ಯದಿಂದ ವಿಶೇಷವಾಗಿ ಕಾಣಿಸುತ್ತಾರೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಧೈರ್ಯವಾಗಿ ಬದುಕು ಕಟ್ಟಿಕೊಳ್ಳುವಂತಾಗಲಿ

ಕಾಶ್ಮೀರದಲ್ಲಿ ಉಗ್ರನೊಬ್ಬ ತಹಶೀಲ್ ಕಚೇರಿಗೆ ನುಗ್ಗಿ ಕಾಶ್ಮೀರಿ ಪಂಡಿತ ಸಮುದಾಯದ ನೌಕರರೊಬ್ಬರನ್ನು ಗುಂಡಿಟ್ಟು ಹತ್ಯೆ ಮಾಡಿರುವ ವರದಿ (ಪ್ರ.ವಾ., ಮೇ 13) ಓದಿ ದುಃಖವಾಯಿತು. ಕಾಶ್ಮೀರದ ರಕ್ತಸಿಕ್ತ ಇತಿಹಾಸವನ್ನು ಯಾವ ಪ್ರಜ್ಞಾವಂತ ಸಮಾಜವೂ ಕ್ಷಮಿಸುವುದಿಲ್ಲ. ಇಸ್ಲಾಂ ಮೂಲಭೂತವಾದಿಗಳು ಇನ್ನಾದರೂ ಬದಲಾಗಬೇಕು. ಪಾಕ್ ಆಕ್ರಮಿತ ಕಾಶ್ಮೀರವನ್ನು ಹಿಂಪಡೆಯಲು ಭಾರತ ಸರ್ಕಾರವು ಅಂತರರಾಷ್ಟ್ರೀಯ ಮಟ್ಟದ ಪ್ರಯತ್ನವನ್ನು ತೀವ್ರಗೊಳಿಸಬೇಕು. ಜಮ್ಮು-ಕಾಶ್ಮೀರದಲ್ಲಿ ಉದ್ಯೋಗ, ಮೂಲ ಸೌಕರ್ಯಗಳನ್ನು ಒದಗಿಸಬೇಕು. ಉಗ್ರಗಾಮಿಗಳನ್ನು ನಿರ್ದಾಕ್ಷಿಣ್ಯವಾಗಿ ಸದೆಬಡಿಯಬೇಕು. ಭಾರತೀಯರಾದ ಎಲ್ಲ ಧರ್ಮದವರೂ ಅಲ್ಲಿ ಧೈರ್ಯವಾಗಿ ಬದುಕು ಕಟ್ಟಿಕೊಳ್ಳುವ ಸಹಜ, ಶಾಂತಿಯುತ ವಾತಾವರಣ ನಿರ್ಮಾಣವಾಗಬೇಕು.

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

ಸಂಭ್ರಮವಷ್ಟೇ ಸಾಲದು...

ಕೇಂದ್ರದಲ್ಲಿ ಎಂಟು ವರ್ಷಗಳ ಆಡಳಿತವನ್ನು ಸಾಧನೆ ಎಂಬಂತೆ ಸಂಭ್ರಮಿಸಲು ಬಿಜೆಪಿ ಎಲ್ಲ ಸಿದ್ಧತೆ ನಡೆಸಿದೆ ಎಂಬ ಸುದ್ದಿ (ಪ್ರ.ವಾ. ಮೇ 12) ಓದಿದಾಗ, ಇಂದಿನ ದಿನಗಳಲ್ಲಿ ಆತ್ಮಾವಲೋಕನ ಎಂಬುದು ಇಲ್ಲವೇ ಇಲ್ಲ ಎನಿಸುತ್ತದೆ. ಅಥವಾ ಹೇಗಾದರೂ ಅಧಿಕಾರದಲ್ಲಿರುವುದೇ ಅರ್ಹತೆ ಮತ್ತು ಸಾಧನೆ ಎಂದು ರಾಜಕೀಯ ಪಕ್ಷಗಳು ಭಾವಿಸುತ್ತಿರುವುದಕ್ಕೆ ಇದು ಮತ್ತೊಂದು ನಿದರ್ಶನ ಆಗಬಹುದು. ಜನತೆಗೆ ಒಳಿತನ್ನು ಮಾಡಲು ಮಾತ್ರ ಅಧಿಕಾರದ ಚುಕ್ಕಾಣಿ ಹಿಡಿದಿದ್ದೇವೆ ಎಂದು ಹೇಳಿಕೊಳ್ಳುವವರು ಆ ದಿಸೆಯಲ್ಲಿ ಏನೆಲ್ಲಾ ಆಗಿದೆ ಎಂದು ವಿಮರ್ಶೆಯನ್ನಾದರೂ ಗಂಭೀರವಾಗಿ ಮಾಡಿಕೊಳ್ಳಬೇಕು ಅಥವಾ ಉಳಿದವರು ಹೇಳುವುದನ್ನು ಸಾವಧಾನದಿಂದ ಕೇಳಿ ತಪ್ಪುಗಳನ್ನು ತಿದ್ದಿಕೊಳ್ಳುವ ವಿನಯವನ್ನು ಮೈಗೂಡಿಸಿಕೊಳ್ಳಬೇಕು. ಹೀಗಾದಲ್ಲಿ ಮಾತ್ರ ಅಧಿಕಾರಕ್ಕೆ ಮೌಲ್ಯ ಬರುತ್ತದೆ.

ಸಾಧನೆಗಳು ಒಂದೆಡೆ ಇರಲಿ, ಕೋಮು ಕೋಮುಗಳ ನಡುವೆ ವಿನಾಕಾರಣ ದ್ವೇಷ, ಅಸಹನೆ, ತಿರಸ್ಕಾರ ದಿನೇ ದಿನೇ ಹೆಚ್ಚಾಗುತ್ತ ಸಮಾಜದ ಆರೋಗ್ಯ ಹದಗೆಡುತ್ತಿರುವುದನ್ನು ಎಲ್ಲರೂ ಕಾಣುತ್ತಿದ್ದೇವೆ. ದಿನನಿತ್ಯದ ಜನಸಾಮಾನ್ಯರ ಬವಣೆಗಳಿಗೆ ತುರ್ತಾಗಿ ಸ್ಪಂದಿಸುವುದು ಜವಾಬ್ದಾರಿಯುತ ಸರ್ಕಾರದ ಆದ್ಯತೆ ಆಗದಿದ್ದರೆ ಅದೆಂಥ ಜನಪರ ಆಡಳಿತವಾದೀತು? ಅಥವಾ ಅಂತಹ ನಿರೀಕ್ಷೆ ಇಟ್ಟುಕೊಳ್ಳುವುದೇ ಮೂರ್ಖತನವೇ? ಸಂಭ್ರಮಪಡಲು ಅವರದ್ದೇ ಕಾರಣಗಳಿರಬಹುದು. ಆದರೆ ಆತ್ಮವಿಮರ್ಶೆಗೂ ಅವಕಾಶವಾಗಲಿ ಎಂದು ಆಶಿಸೋಣ.

ಎಚ್.ವಿ.ನಟರಾಜ, ಬೆಂಗಳೂರು

ಕಲಿಕಾ ಚೇತರಿಕೆ: ಆತ್ಮವಿಶ್ವಾಸಕ್ಕೆ ಪೂರಕ

ಕೋವಿಡ್–19 ಸೋಂಕು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಬಹುದೊಡ್ಡ ಪೆಟ್ಟು ನೀಡಿರುವುದನ್ನು ಗಂಭೀರವಾಗಿ ಅರಿತ ಶಿಕ್ಷಣ ಇಲಾಖೆಯು ಪ್ರಸಕ್ತ ಶೈಕ್ಷಣಿಕ ವರ್ಷವನ್ನು 'ಕಲಿಕಾ ಚೇತರಿಕೆ ವರ್ಷ' ಎಂದು ಘೋಷಿಸಿ, ಕಲಿಕೆಗೆ ಹೆಚ್ಚಿನ ಒತ್ತು ನೀಡಲು ಅಗತ್ಯ ಕಾರ್ಯಕ್ರಮ ರೂಪಿಸಿರುವುದು ಸ್ವಾಗತಾರ್ಹ. ರಾಜ್ಯ ಸರ್ಕಾರದ ಈ ಮಹತ್ವಾಕಾಂಕ್ಷೆಯ ಕಾರ್ಯಕ್ರಮದ ಕಲ್ಪನೆಯು ವೈಜ್ಞಾನಿಕ ಮತ್ತು ಪ್ರಸ್ತುತ ಪರಿಸ್ಥಿತಿಯಲ್ಲಿ ಅತ್ಯವಶ್ಯಕವಾದ ಮಾದರಿಯಾಗಿದೆ. ಇದು ಶೈಕ್ಷಣಿಕ ವರ್ಷಾಂತ್ಯದಲ್ಲಿ ಮಗುವು ಮುಂದಿನ ತರಗತಿಗೆ ಆತ್ಮವಿಶ್ವಾಸ, ನಿರ್ದಿಷ್ಟ ಗುರಿ, ಕೌಶಲ ಹಾಗೂ ಉತ್ತಮ ಕಲಿಕಾಫಲಗಳೊಂದಿಗೆ ಮುನ್ನಡೆಯಲು ಸಹಕಾರಿಯಾಗಲಿದೆ.

ಹರಳಹಳ್ಳಿಪುಟ್ಟರಾಜು, ಪಾಂಡವಪುರ

ಸಾಂವಿಧಾನಿಕ ಕರ್ತವ್ಯ ಇನ್ನಾದರೂ ಪಾಲಿಸಿ

ಯಾವುದೋ ಒಂದು ನೆಪ ಮುಂದಿಟ್ಟು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಯನ್ನು ಹಾಗೂ ವಾರ್ಡುಗಳ ಪುನರ್ ವಿಂಗಡಣೆಯಾಗದಿರುವುದನ್ನು ನೆಪವಾಗಿಟ್ಟುಕೊಂಡು ಬಿಬಿಎಂಪಿ ಚುನಾವಣೆಯನ್ನು ಮುಂದೂಡುತ್ತಾ ಬಂದಿರುವ ರಾಜ್ಯ ಸರ್ಕಾರದ ನಡೆ ಅನುಚಿತ ಮತ್ತು ಆಕ್ಷೇಪಾರ್ಹ. ಅಷ್ಟೇ ಅಲ್ಲ, ವಿಕೇಂದ್ರೀಕರಣದ ಮೂಲ ತತ್ವಕ್ಕೆ ಮಾರಕವಾದುದು. ಸ್ಥಳೀಯ ಮಟ್ಟದಲ್ಲಿಯೂ ತಮ್ಮದೇ ಕಾರುಬಾರು ನಡೆಯಬೇಕೆಂಬ ಶಾಸಕರಿಗೆ ನಿಗದಿತ ಅವಧಿಯೊಳಗೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುವುದು ಬೇಕಿಲ್ಲ. ಮೀಸಲಾತಿಗೆ ಸಂಬಂಧಿಸಿದ ತೊಡಕನ್ನು ನಿವಾರಿಸಲು ತ್ವರಿತ ಕ್ರಮ ಜರುಗಿಸಬೇಕು. ವಾರ್ಡ್ ಮರು ವಿಂಗಡಣೆ ಮಾಡುವುದು ಕಾಲಕಾಲಕ್ಕೆ ಜರುಗಲೇಬೇಕಾದ ಸಾಮಾನ್ಯ ಆಡಳಿತ ಪ್ರಕ್ರಿಯೆ ಮತ್ತು ಅದನ್ನೇ ನೆಪವಾಗಿಟ್ಟುಕೊಂಡು ಚುನಾವಣೆಗಳನ್ನು ಮುಂದೂಡುತ್ತಾ ಸಾಗುವುದು ಸರ್ವಥಾ ಸಾಧುವಲ್ಲ.

ಮೂರು ಹಂತದ ಪರಿಶೀಲನೆ ನಡೆಸಿ ಮೀಸಲಾತಿ ನಿಗದಿಪಡಿಸಬೇಕೆಂದು ಸುಪ್ರೀಂ ಕೋರ್ಟ್ ಹೇಳಿ ದಶಕವೇ ಸಂದಿದ್ದರೂ ಮೀಸಲಾತಿ ತೊಡಕು ನಿವಾರಣೆಗೆ ಈಗಷ್ಟೇ ನ್ಯಾಯಮೂರ್ತಿಯೊಬ್ಬರ ನೇತೃತ್ವದ ಆಯೋಗವೊಂದನ್ನು ರಚಿಸಿ, ವರದಿ ನೀಡಲು ಕಾಲಮಿತಿಯನ್ನೇ ವಿಧಿಸದಿರುವ ರಾಜ್ಯ ಸರ್ಕಾರದ ನಡೆ, ಸಾಧ್ಯವಾದಷ್ಟೂ ದಿನ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡುವ ಹುನ್ನಾರ. ಸಾಂವಿಧಾನಿಕ ಕರ್ತವ್ಯದಿಂದ ನುಣುಚಿಕೊಳ್ಳುವ ಯತ್ನವನ್ನು ಸರ್ಕಾರ ಇನ್ನಾದರೂ ಮುಂದುವರಿಸದಿರಲಿ.

ಶ್ರುತಿ ಪಿ. ಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸರ್ಕಾರಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಕಾಯಕಲ್ಪದ ಅಗತ್ಯ ಇದೆಯೇ?

ಪ್ರಾಮಾಣಿಕರು ನೇಮಕವಾಗಲಿ



• ಎ. ರವೀಂದ್ರ

> ಸರ್ಕಾರಿ ಅಧಿಕಾರಿಗಳ ವರ್ಗಾವಣೆಯಲ್ಲಿ ಇರುವಂತೆಯೇ ನೇಮಕಾತಿಗಳಲ್ಲಿಯೂ ರಾಜಕೀಯ ಹಸ್ತಕ್ಷೇಪ ಇರುವುದು ಈಗಿನ ವಿಷಾದನೀಯ ಪರಿಸ್ಥಿತಿಗೆ ಕಾರಣವಾಗಿರುವ ಅಂಶ. ಕಳೆದ ಕೆಲವು ದಶಕಗಳಲ್ಲಿ ರಾಜ್ಯದಲ್ಲಿ ಆಡಳಿತ ವ್ಯವಸ್ಥೆಯು ಕೆಟ್ಟು ಹೋಗಲು ಇದುವೇ ಮುಖ್ಯ ಕಾರಣ. ಒಂದೆಡೆ, ಇದು ಪ್ರಾಮಾಣಿಕ ಅಧಿಕಾರಿಗಳ ಸ್ಥೈರ್ಯಗೆಡಿಸುತ್ತದೆ. ಇನ್ನೊಂದೆಡೆ, ಅಪ್ರಾಮಾಣಿಕ ಮತ್ತು ಭ್ರಷ್ಟ ಅಧಿಕಾರಿಗಳಿಗೆ ಉತ್ತೇಜನ ನೀಡುತ್ತದೆ. ನೇಮಕಾತಿ ಮತ್ತು ವರ್ಗಾವಣೆಗಳಲ್ಲಿ ಅಧಿಕಾರಸ್ಥರ ನೆರವು ಪಡೆದುಕೊಳ್ಳುವ ಅಧಿಕಾರಿಗಳು, ನೆರವು ಕೊಟ್ಟವರಿಗೆ ವಿಧೇಯವಾಗಿ ಇರಬೇಕಾಗುತ್ತದೆ

ಉತ್ತಮ ಆಳ್ವಿಕೆಯನ್ನು ಖಾತರಿಪಡಿಸಲು ಆಡಳಿತ ವ್ಯವಸ್ಥೆಯಲ್ಲಿ ಉತ್ತಮ ಗುಣಮಟ್ಟದ ಸಿಬ್ಬಂದಿ ಇರುವುದು ಬಹಳ ಮುಖ್ಯ. ಸರಿಯಾದ ಕೆಲಸಕ್ಕೆ ಸರಿಯಾದ ವ್ಯಕ್ತಿಗಳನ್ನು ಆಯ್ದು ನೇಮಕ ಮಾಡುವುದರ ಮೇಲೆಯೇ ಇದು ಮುಖ್ಯವಾಗಿ ಅವಲಂಬಿತ. ಸರ್ಕಾರದ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮಗಳು ಮತ್ತು ಹಗರಣಗಳಿಗೆ ಕರ್ನಾಟಕವು ಇತ್ತೀಚಿನ ವರ್ಷಗಳಲ್ಲಿ ಸಾಕ್ಷಿಯಾಗಿದೆ. 1998 ಮತ್ತು 2004ರ ಕೆ.ಎ.ಎಸ್‌ನ ಗಜೆಟೆಡ್ ಪ್ರೊಬೇಷನರ್ ಮತ್ತು ಇತರ ಸೇವೆಗಳಿಗೆ ನೇಮಕವೇ ಇರಲಿ ಈಗ ಭಾರಿ ಸದ್ದು ಮಾಡುತ್ತಿರುವ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕವೇ ಇರಲಿ ಗಂಭೀರವಾದ ವಿವಾದಗಳು ಸೃಷ್ಟಿಯಾಗಿವೆ.

ಶಿಕ್ಷಣ ಕ್ಷೇತ್ರದಲ್ಲಿ, ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡಲು ಮತ್ತು ನಕಲಿ ಉತ್ತರ ಪತ್ರಿಕೆಗಳನ್ನು ಸೃಷ್ಟಿಸಲು ವಿನೂತನ ವಿಧಾನಗಳನ್ನು ಕಂಡುಕೊಳ್ಳಲಾಗಿದೆ. ಇಂತಹ ಘಟನೆಗಳು ಪದೇ ಪದೇ ನಡೆಯಲು ಕಾರಣಗಳೇನು? ಮೊದಲನೆಯದಾಗಿ, ನೇಮಕಾತಿಯ ಹೊಣೆ ಹೊತ್ತಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳು ಪ್ರಾಮಾಣಿಕವಾಗಿ ಇರಬೇಕು. ದುರದೃಷ್ಟವಶಾತ್, ಕರ್ನಾಟಕದ ಮುಖ್ಯ ನೇಮಕಾತಿ ಸಂಸ್ಥೆಯಾದ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಒಳ್ಳೆಯ ಹೆಸರು ಇಲ್ಲ.

ಬದ್ಧತೆಯು ಸಂಶಯಾಸ್ಪದವಾಗಿರುವ ಸದಸ್ಯರನ್ನು ಆಯೋಗಕ್ಕೆ ನೇಮಕ ಮಾಡಿರುವುದು ಇದಕ್ಕೆ ಒಂದು ಕಾರಣ. ನೇಮಕಗೊಂಡ ಸದಸ್ಯರಲ್ಲಿ ಹಲವರಿಗೆ ಈ ಕೆಲಸಕ್ಕೆ ಬೇಕಾದ ಸಾಮರ್ಥ್ಯವಾಗಲಿ ಅರ್ಹತೆಯಾಗಲಿ ಇಲ್ಲ. ಪ್ರತಿಭೆಯ ಬದಲು ಜಾತಿ ಮತ್ತು ರಾಜಕೀಯ ಪ್ರಭಾವದ ಆಧಾರದಲ್ಲಿಯೇ ಸದಸ್ಯರ ನೇಮಕ ಆಗುತ್ತಿದೆ. ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯಂತಹ ಹುದ್ದೆಗಳಲ್ಲಿದ್ದ ರಾಜಕೀಯಪ್ರೇರಿತವಾಗಿ ಕೆಲಸ ಮಾಡಿದ್ದ ಅಧಿಕಾರಿಗಳು ಕೂಡ ಸದಸ್ಯರಾಗಿ ನೇಮಕವಾದದ್ದು ಇದೆ.

ಎರಡನೆಯದಾಗಿ, ನೇಮಕಾತಿ ಪ್ರಕ್ರಿಯೆಯು ಭ್ರಷ್ಟಾಚಾರದ ಕಳಂಕಕ್ಕೆ ಒಳಗಾಗಿದೆ. ಸಹಾಯಕ ಜಿಲ್ಲಾಧಿಕಾರಿ, ಡಿವೈಎಸ್‌ಪಿ, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತ ಮುಂತಾದ ಮಹತ್ವದ್ದು ಎಂದು ಪರಿಗಣಿಸಲಾದ ಹುದ್ದೆಗಳಿಗೆ ನೇಮಕ ಖಾತರಿಪಡಿಸಿಕೊಳ್ಳಲು ಭಾರಿ ಮೊತ್ತದ ಹಣವನ್ನು



ಕೆಪಿಎಸ್‌ಸಿಯ ಕೆಲವು ಸದಸ್ಯರಿಗೆ ನೀಡಲಾಗಿತ್ತು ಎಂಬುದು ಮೂರು ವರ್ಷಗಳ ಹಿಂದೆ ಗಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ನಡೆದ ಪರೀಕ್ಷೆಗೆ ಸಂಬಂಧಿಸಿದ ಸಿಐಡಿ ತನಿಖೆಯಲ್ಲಿ ಬಯಲಾಗಿದೆ. ಈ ತನಿಖಾ ವರದಿಯ ಆಧಾರದಲ್ಲಿ ಪರೀಕ್ಷೆಯನ್ನೇ ರದ್ದುಪಡಿಸಲಾಯಿತು. ನಿರ್ದಿಷ್ಟ ಹುದ್ದೆಗಳನ್ನು ಕೊಡಿಸುವುದಕ್ಕಾಗಿ ಕೆಪಿಎಸ್‌ಸಿ ಸದಸ್ಯರ ಜತೆ ಸಂಪರ್ಕ ಇರುವ 'ಏಜೆಂಟರು' ಇದ್ದಾರೆ ಎಂಬ ವಿಚಾರ ತನಿಖೆಯಲ್ಲಿ ಬಯಲಾಯಿತು.

ಸರ್ಕಾರಿ ಅಧಿಕಾರಿಗಳ ವರ್ಗಾವಣೆಯಲ್ಲಿ ಇರುವಂತೆಯೇ ನೇಮಕಾತಿಗಳಲ್ಲಿಯೂ ರಾಜಕೀಯ ಹಸ್ತಕ್ಷೇಪ ಇರುವುದು ಈಗಿನ ವಿಷಾದನೀಯ ಪರಿಸ್ಥಿತಿಗೆ ಕಾರಣವಾಗಿರುವ ಮೂರನೇ ಅಂಶ. ಕಳೆದ ಕೆಲವು ದಶಕಗಳಲ್ಲಿ ರಾಜ್ಯದಲ್ಲಿ ಆಡಳಿತ ವ್ಯವಸ್ಥೆಯು ಕೆಟ್ಟು ಹೋಗಲು ಇದುವೇ ಮುಖ್ಯ ಕಾರಣ. ಒಂದೆಡೆ, ಇದು ಪ್ರಾಮಾಣಿಕ ಅಧಿಕಾರಿಗಳ ಸ್ಥೈರ್ಯಗೆಡಿಸುತ್ತದೆ. ಇನ್ನೊಂದೆಡೆ, ಅಪ್ರಾಮಾಣಿಕ ಮತ್ತು ಭ್ರಷ್ಟ ಅಧಿಕಾರಿಗಳಿಗೆ ಉತ್ತೇಜನ ನೀಡುತ್ತದೆ. ನೇಮಕಾತಿ ಮತ್ತು ವರ್ಗಾವಣೆಗಳಲ್ಲಿ ಅಧಿಕಾರಸ್ಥರ ನೆರವು ಪಡೆದುಕೊಳ್ಳುವ ಅಧಿಕಾರಿಗಳು, ನೆರವು ಕೊಟ್ಟವರಿಗೆ ವಿಧೇಯವಾಗಿ ಇರಬೇಕಾಗುತ್ತದೆ. ಇದು ರಾಜ್ಯದ ಆಡಳಿತದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಇದಕ್ಕೆ ಪರಿಹಾರ ಏನು? ಹಲವು ಆಯೋಗಗಳು ಮತ್ತು ಸಮಿತಿಗಳು ಕಾಲ ಕಾಲಕ್ಕೆ ಈ ವಿಚಾರದ ಬಗ್ಗೆ ಪರಿಶೀಲನೆ ನಡೆಸಿ ಶಿಫಾರಸುಗಳನ್ನು ಮಾಡಿವೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ ಮತ್ತು ವೀರಪ್ಪ ಮೊಯಿಲಿ ನೇತೃತ್ವದಲ್ಲಿ ಕೇಂದ್ರ ಆಡಳಿತ ಸುಧಾರಣಾ ಆಯೋಗಗಳು ಇದರಲ್ಲಿ ಸೇರಿವೆ. ಕರ್ನಾಟಕ ಸರ್ಕಾರವು ಮಾಜಿ ಕಾನೂನು ಸಚಿವ ಹಾರ್ನಹಳ್ಳಿ ರಾಮಸ್ವಾಮಿ ನೇತೃತ್ವದಲ್ಲಿ ಆಡಳಿತ ಸುಧಾರಣಾ ಆಯೋಗವನ್ನು ರಚಿಸಿತ್ತು.

ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇರುವುದು ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಾವುದೇ ಹುಳುಕುಗಳು ಇಲ್ಲದ ವ್ಯವಸ್ಥೆ ಬಹಳ ಮುಖ್ಯ ಎಂದು ಎಲ್ಲ ಆಯೋಗಗಳು ಹೇಳಿವೆ. ಕೇಂದ್ರ ಲೋಕಸೇವಾ ಆಯೋಗವು ಪ್ರತಿ ವರ್ಷವೂ ಯಾವುದೇ ದೂರು ಇಲ್ಲದ ರೀತಿಯಲ್ಲಿ ಐಎಎಸ್, ಐಪಿಎಸ್ ಮತ್ತು ಇತರ ಕೇಂದ್ರೀಯ ಸೇವೆಗಳಿಗೆ ಅಭ್ಯರ್ಥಿಗಳ ಆಯ್ಕೆಯನ್ನು ನ್ಯಾಯಯುತ ಮತ್ತು ನಿಷ್ಪಕ್ಷಪಾತವಾಗಿ ಮಾಡುತ್ತದೆ ಎಂಬುದನ್ನು ಇಲ್ಲಿ ಹೇಳಲೇಬೇಕು.

ಹೆಚ್ಚಿನ ರಾಜ್ಯಗಳ ಆಯೋಗಗಳು ಇಂತಹ ಖ್ಯಾತಿಯನ್ನು ಹೊಂದಿಲ್ಲ. ನೇಮಕಾತಿ ಸಂಸ್ಥೆಗಳು ಎಷ್ಟು ಕೆಳಮಟ್ಟಕ್ಕೆ ಕುಸಿದಿವೆ ಎಂಬುದಕ್ಕೆ ತಮಿಳುನಾಡಿನ ಒಂದು ಉದಾಹರಣೆ ಇದೆ. ತಮಿಳುನಾಡು ಲೋಕಸೇವಾ ಆಯೋಗದ ಸದಸ್ಯರಾಗಿ 11 ಮಂದಿಯ ನೇಮಕವನ್ನು ಯಾವುದೇ ಪ್ರಕ್ರಿಯೆ ಪಾಲಿಸಿಲ್ಲ ಎಂಬ ಕಾರಣಕ್ಕೆ ಮದ್ರಾಸ್ ಹೈಕೋರ್ಟ್ 2017ರಲ್ಲಿ ರದ್ದುಪಡಿಸಿತ್ತು. ರಾಜ್ಯ ಲೋಕಸೇವಾ ಆಯೋಗಗಳು ಮಾತ್ರವಲ್ಲ, ನೇಮಕಾತಿಗಾಗಿ ರಾಜ್ಯಗಳು ರಚಿಸಿದ ಇತರ ಸಂಸ್ಥೆಗಳು ಮತ್ತು ಸಮಿತಿಗಳು ಕೂಡ ಅಕ್ರಮ ಎಸಗಿವೆ ಎಂಬುದಕ್ಕೆ ಕರ್ನಾಟಕದ ಪಿಎಸ್‌ಐ ನೇಮಕ ಪ್ರಕರಣ ಮತ್ತು ಮಧ್ಯಪ್ರದೇಶದ ವ್ಯಾಪಂ ಹಗರಣಗಳು ಸಾಕ್ಷಿಯಾಗಿವೆ.

ಈಗಿನ ಸನ್ನಿವೇಶದಲ್ಲಿ, ಕರ್ನಾಟಕದ ನೇಮಕಾತಿ ಪ್ರಕ್ರಿಯೆಯನ್ನು ದಕ್ಷಗೊಳಿಸುವುದು ಆಡಳಿತ ಸುಧಾರಣೆಗೆ ಅಗತ್ಯವಾಗಿ ಬೇಕಿರುವ ಕ್ರಮವಾಗಿದೆ. ಲೋಕಸೇವಾ ಆಯೋಗವನ್ನು ಶುದ್ಧೀಕರಿಸುವ ದಿಸೆಯಲ್ಲಿ ರಾಜ್ಯ ಸರ್ಕಾರವು ದೃಢವಾದ ಇಚ್ಛಾಶಕ್ತಿಯನ್ನು ತೋರಿದರೆ ಮಾತ್ರ ಇದು ಸಾಧ್ಯ. ಆಯೋಗದ ಅಧ್ಯಕ್ಷ ಮತ್ತು ಸದಸ್ಯ ಸ್ಥಾನಗಳಿಗೆ ಹಾಗೂ ಪರೀಕ್ಷೆ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಕಾರ್ಯದರ್ಶಿ ಮತ್ತು ಸಿಬ್ಬಂದಿ ಹುದ್ದೆಗಳಿಗೆ ಸೂಕ್ತವಾದ ವ್ಯಕ್ತಿಗಳನ್ನು ನೇಮಿಸಬೇಕು.

ಎರಡನೆಯದಾಗಿ, ಲೋಕಸೇವಾ ಆಯೋಗದ ವ್ಯಾಪ್ತಿಯಲ್ಲಿ ಇಲ್ಲದ ಹುದ್ದೆಗಳಿಗೆ ನೇಮಕಾತಿ ಮಾಡುವುದಕ್ಕಾಗಿ ಇರುವ ಇಲಾಖಾ ಸಮಿತಿಗಳನ್ನು ಬರ್ಖಾಸ್ತು ಮಾಡಿ ವೃತ್ತಿಪರರನ್ನು ಒಳಗೊಂಡ ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಬೇಕು. ದೊಡ್ಡ ಖಾಸಗಿ ಕಂಪನಿಗಳ ರೀತಿಯಲ್ಲಿ ವೃತ್ತಿಪರ ನೇಮಕಾತಿ ಸಂಸ್ಥೆಗಳಿಗೆ ನೇಮಕಾತಿಯ ಹೊಣೆಯನ್ನು ವಹಿಸಬಹುದು. ನೇಮಕಾತಿ ಪ್ರಕ್ರಿಯೆಯನ್ನು ಖಾಸಗೀಕರಣ ಮಾಡಬೇಕು ಎಂಬುದು ಇಲ್ಲಿನ ಸಲಹೆ ಅಲ್ಲ. ಬದಲಿಗೆ, 'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಎಂಬ ಸರ್ಕಾರದ್ದೇ ಘೋಷಣೆಗೆ ಈ ಮೂಲಕ ಅರ್ಥ ತುಂಬಬಹುದು.

ಕೊನೆಯದಾಗಿ, 1854ರಲ್ಲಿ ಭಾರತದಲ್ಲಿ ನಾಗರಿಕ ಸೇವೆಯ ಆರಂಭದ ಸಂದರ್ಭದಲ್ಲಿ ಮೆಕಾಲೆ ಸಮಿತಿಯ ವರದಿಯಲ್ಲಿ ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಬಹುದು: 'ಇನ್ನು ಮುಂದೆ ಕಂಪನಿಯ ನಾಗರಿಕ ಸೇವೆಯ ನೇಮಕಾತಿಯು ಪಕ್ಷಪಾತದ್ದಾಗಿ ಇರುವುದಿಲ್ಲ, ಬದಲಿಗೆ ಹಕ್ಕಿನ ರೂಪದಲ್ಲಿ ಇರುತ್ತದೆ. ನೇಮಕಾತಿಯು ನೇಮಕಗೊಳ್ಳುವ ವ್ಯಕ್ತಿಯ ಸ್ವಂತ ಸಾಮರ್ಥ್ಯ ಮತ್ತು ಉದ್ಯೋಗಶೀಲತೆಯನ್ನು ಮಾತ್ರ ಅವಲಂಬಿಸಿರುತ್ತದೆ'.

ವೈಯಕ್ತಿಕ ಹಕ್ಕುಗಳ ಬಗ್ಗೆ ನಾವು ಇತ್ತೀಚಿನ ದಿನಗಳಲ್ಲಿ ಅಬ್ಬರಿಸಿ ಮಾತನಾಡುತ್ತಿದ್ದೇವೆ. ಶಿಕ್ಷಣದ ಹಕ್ಕು, ಮನೆ ಹೊಂದುವ ಹಕ್ಕು, ಮಾಹಿತಿ ಹಕ್ಕು ಮತ್ತು ಸ್ವಾತಂತ್ರ್ಯ ಹಾಗೂ ಸಮಾನತೆಯಂತಹ ಮೂಲಭೂತ ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದೇವೆ. ಹಾಗಿರುವಾಗ, ಪ್ರತಿಭೆ ಮತ್ತು ಮೀಸಲಾತಿಯಂತಹ ವಿಚಾರಗಳ ಆಧಾರದಲ್ಲಿ ವ್ಯಕ್ತಿಯೊಬ್ಬರು ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯುವ ಹಕ್ಕನ್ನು ಏಕೆ ನಿರಾಕರಿಸಬೇಕು?

ರಾಜಕೀಯ ನಿರ್ಧಾರ ಕೈಗೊಳ್ಳುವಿಕೆಯಲ್ಲಿ ಇದಕ್ಕೆ ಉತ್ತರ ಇದೆ. ಕರ್ನಾಟಕದ ಮುಖ್ಯಮಂತ್ರಿ ಇತ್ತ ಗಮನ ಹರಿಸಬೇಕು.

ಲೇಖಕ: ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 120

ಕೈಲಾಸವಾಸಿಯಾದ ಮಹಾಶಿವ

ಕುಬೇರನಿಗೆ ಕೊಟ್ಟ ವರದಂತೆ ಶಿವ ಅಲಕಾನಗರಿಗೆ ಸಮೀಪವಾದ ಕೈಲಾಸಪರ್ವತದಲ್ಲಿ ವಾಸಿಸಲು ಆಗಮಿಸುತ್ತಾನೆ. ಶಿವ ತನ್ನ ಪತ್ನಿ ಪರಮೇಶ್ವರಿಯೊಂದಿಗೆ ಗೃಹಪ್ರವೇಶ ಮಾಡಿದಾಗ ಕೋಟ್ಯಾಂತರ ಗಣಗಳೂ ಕೈಲಾಸಕ್ಕೆ ಬಂದು ಸಂಭ್ರಮದಲ್ಲಿ ಪಾಲ್ಗೊಳ್ಳುತ್ತವೆ. ಎಲ್ಲರೂ ತಮ್ಮ ಇಷ್ಟಾರ್ಥಗಳನ್ನು ಹೊಂದಿದವರಾಗಿ ಸಂತೋಷದಿಂದ ಶಿವನ ಅಪ್ಪಣೆಯನ್ನು ಪಡೆದು, ತಮ್ಮ ಮನೆಗಳಿಗೆ ತೆರಳಿದರು ಎಂದು ಬ್ರಹ್ಮ ನಾರದನಿಗೆ ಹೇಳುವಾಗ, ಮಹಾಶಿವ ತನಗೆ ಮತ್ತು ವಿಷ್ಣುವಿಗೆ ಕೈಲಾಸದಲ್ಲಿ ವಿಶೇಷವಾಗಿ ಆದರಿಸಿ ಸತ್ಕರಿಸಿದ್ದನ್ನು ತಿಳಿಸುತ್ತಾನೆ. ಕೈಲಾಸಕ್ಕೆ ಬಂದ ತಮ್ಮಿಬ್ಬರನ್ನು ಜಗದೀಶ್ವರನಾದ ಶಿವನು ಆದರದಿಂದ ಬರಮಾಡಿಕೊಂಡಿದ್ದನ್ನು, ತುಂಬು ಹೃದಯದ ಆತಿಥ್ಯ ನೀಡಿ ಗೌರವಿಸಿದ್ದನ್ನು ನಾರದನಿಗೆ ಹೇಳುತ್ತಾನೆ.

'ಎಲೈ ಹರಿಯೇ, ಬ್ರಹ್ಮ ಸುರೋತ್ತಮರೇ, ಮೂರು ಲೋಕವನ್ನೂ ಯಾವಾಗಲೂ ಪಾಲಿಸುತ್ತಲೂ, ಸೃಷ್ಟಿಸುತ್ತಲೂ ಇರುವ ನೀವಿಬ್ಬರೂ ನನಗೆ ಬಹಳ ಪ್ರೀತಿಪಾತ್ರರು. ನೀವು ನನ್ನ ಅಪ್ಪಣೆಯಂತೆ ನಿರ್ಭಯವಾಗಿ ನಿಮ್ಮ ಜಾಗಗಳಿಗೆ ತೆರಳಿರಿ. ನಾನು ಯಾವಾಗಲೂ ನಿಮ್ಮಿಬ್ಬರನ್ನೂ ವಿಶೇಷವಾಗಿ ನೋಡಿಕೊಳ್ಳುತ್ತಾ, ನಿಮಗೆ ಸುಖವನ್ನು ಉಂಟುಮಾಡುತ್ತಿರುತ್ತೇನೆ' ಎಂದು ಹರಸುತ್ತಾನೆ. ಶಿವನು ನುಡಿದ ಮಾತನ್ನು ಕೇಳಿ, ನಾವಿಬ್ಬರೂ ಅವನಿಗೆ ನಮಸ್ಕರಿಸಿ, ಅಪ್ಪಣೆಯನ್ನು ಪಡೆದು ಸಂತುಷ್ಟಾಂತರಂಗರಾಗಿ ನಮ್ಮ ನಿವಾಸಗಳಿಗೆ ಹಿಂದಿರುಗಿದೆವು. ನಂತರ ಸುಪ್ರೀತನಾದ ಶಂಕರನು ಸಂತೋಷದಿಂದ ಕುಬೇರನನ್ನು ಕರೆದು, ಬಳಿಯಲ್ಲಿ ಕೂರಿಸಿಕೊಂಡು ಆತನ ಕೈ ಹಿಡಿದುಕೊಂಡು ಶುಭಕರವಾದ ಮಾತನ್ನು ಹೇಳಿದ: 'ಎಲೈ ಸ್ನೇಹಿತನೇ, ನಿನ್ನ ಪ್ರೀತಿಗೆ ವಶನಾಗಿ ನಿನ್ನ ಸಖ್ಯವನ್ನು ಸಂಪಾದಿಸಿದೆ. ಯಾವ ಭಯವೂ ಇಲ್ಲದೆ ನಿನ್ನ ಜಾಗಕ್ಕೆ ಹಿಂದಿರುಗು. ಓ ಪಾಪರಹಿತನೇ, ನಾನು ಯಾವಾಗಲೂ ನಿನಗೆ ಸಹಾಯಕನಾಗಿರುವೆ' ಎಂದು ವಚನವನ್ನಿತ್ತ. ಶಿವನ ಮಾತನ್ನು ಕೇಳಿ ಕುಬೇರನು ಬಹಳ ಸಂತೋಷಪಟ್ಟು ಆತನ ಅಪ್ಪಣೆಯಂತೆ ತನ್ನ ವಾಸಸ್ಥಾನಕ್ಕೆ ಹಿಂದಿರುಗಿದ.

ಬಳಿಕ ಶಿವನು ತನ್ನ ಗಣಗಳೊಡನೆ, ಆ ಪರ್ವತಶ್ರೇಷ್ಠವಾದ ಕೈಲಾಸಗಿರಿಯಲ್ಲಿ ವಾಸಿಸುತ್ತಾ, ತನಗೆ ಇಷ್ಟಬಂದಂತೆ ಯೋಗಮಾರ್ಗ ನಿರತನಾಗಿ, ಧ್ಯಾನಮಗ್ನನಾಗಿಯೂ ಇರುತ್ತಿದ್ದ. ಒಮ್ಮೆ ಸ್ವಸ್ವರೂಪವನ್ನು ಧ್ಯಾನಿಸುತ್ತಿದ್ದ. ಇನ್ನೊಮ್ಮೆ ಯೋಗನಿರತನಾಗಿರುತ್ತಿದ್ದ. ಮತ್ತೊಮ್ಮೆ ಸ್ವೇಚ್ಛೆಯಾಗಿ ಗಣಗಳೆಲ್ಲರಿಗೆ ಇತಿಹಾಸಗಳನ್ನು ಹೇಳುತ್ತಿದ್ದ. ಮಹೇಶ್ವರನು ಒಂದೊಂದು ಸಲ ಕೈಲಾಸಪರ್ವತದ ವೈವಿಧ್ಯವೂ ಮನೋಹರವೂ ಆದ ನಾನಾ ಸ್ಥಳಗಳಲ್ಲಿ ತನ್ನ ಗಣಗಳೊಡನೆ ವಿಹಾರನಿರತನಾಗಿರುತ್ತಿದ್ದ. ಈ ರೀತಿ ಶಂಕರನು ಮಹಾಯೋಗಿಶ್ರೇಷ್ಠನಾಗಿದ್ದರೂ, ತನ್ನ ಕೈಲಾಸಪರ್ವತದಲ್ಲಿ ಸಾಮಾನ್ಯ ಜನರಂತೆ ನಾನಾ ರೀತಿಯಾದ ಲೀಲೆಗಳನ್ನು ತೋರ್ಪಡಿಸಿದ. ಪರಮೇಶ್ವರನು ಕೆಲವು ಕಾಲ ಅಪತ್ನೀಕನಾಗಿಯೇ ಇದ್ದು, ಆಮೇಲೆ ದಕ್ಷನಿಗೆ ಮಗಳಾಗಿ ಹುಟ್ಟಿದ ಸತಿಯನ್ನು ತನ್ನ ಪತ್ನಿಯನ್ನಾಗಿ ಪರಿಗ್ರಹಿಸಿದ. ದಕ್ಷಪುತ್ರಿಯಾದ ಸತೀದೇವಿಯೊಡಗೂಡಿ ಮಹೇಶ್ವರನು ಬಹುವಾಗಿ ವಿಹರಿಸಿದ.

ಓ ನಾರದ, ಆ ಪರಮಪುರುಷನು ಅಲ್ಲಿ ಸಾಮಾನ್ಯ ಜನರಂತೆ ಪ್ರಪಂಚ ವ್ಯವಹಾರಾಸಕ್ತನಾಗಿ ಸುಖವಾಗಿದ್ದ. ಈ ರೀತಿ ನಿನಗೆ ರುದ್ರನ ಆವಿರ್ಭಾವವನ್ನೂ, ಆತನು ಕೈಲಾಸಪರ್ವತಕ್ಕೆ ಬಂದ ಬಗೆಯನ್ನೂ, ಕುಬೇರನೊಡನೆ ಸಖ್ಯವನ್ನು ಬೆಳೆಸಿದುದನ್ನೂ ವಿವರಿಸಿದುದಾಯಿತು. ಇಹದಲ್ಲಿ, ಪರದಲ್ಲಿಯೂ ಶಾಶ್ವತವಾಗಿ ಸಕಲ ಇಷ್ಟಾರ್ಥಗಳನ್ನು ನೀಡುವಂಥ ಜ್ಞಾನದಾಯಕವಾದ ಅದರೊಳಗಿನ ಲೀಲೆಗಳನ್ನು ವರ್ಣಿಸಿರುವೆ. ಯಾರು ಸಮಾಧಾನಚಿತ್ತದಿಂದ ಈ ಕಥೆಯನ್ನು ಓದುವರೋ, ಅಥವಾ ಕೇಳುವರೋ, ಅವರು ಈ ಲೋಕದಲ್ಲಿ ಸಕಲ ಭೋಗಭಾಗ್ಯಗಳನ್ನೂ ಅನುಭವಿಸಿ ಪರಲೋಕದಲ್ಲಿ ಮೋಕ್ಷವನ್ನೂ ಪಡೆಯುವರು ಎಂದು ಬ್ರಹ್ಮ ಹೇಳುವುದರೊಂದಿಗೆ ವೇದವ್ಯಾಸರ ವಿರಚಿತ ಶ್ರೀ ಶಿವಮಹಾಪುರಾಣದಲ್ಲಿ ಎರಡನೆ ಸಂಹಿತೆಯಾದ ರುದ್ರಸಂಹಿತೆಯ ಮೊದಲನೆಯ ಖಂಡವಾದ ಸೃಷ್ಟಿಖಂಡದಲ್ಲಿ ಕೈಲಾಸೋಪಾಖ್ಯಾನದಲ್ಲಿ ಶಿವಕೈಲಾಸ ಆಗಮನ ಎಂಬ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

ಇಲ್ಲಿಗೆ ವೇದವ್ಯಾಸರು ರಚಿಸಿದ್ದನ್ನು ಶಿಷ್ಯ ಸೂತಮುನಿಯು ಪ್ರಯಾಗದ ಋಷಿಮುನಿಗಳಿಗೆ ಹೇಳುವ ಮೂಲಕ ಜಗತ್ತಿಗೆ ಪರಿಚಯವಾದ ಶ್ರೀ ಶಿವಮಹಾಪುರಾಣದ ಎರಡನೇ ಸಂಹಿತೆಯಾದ ರುದ್ರಸಂಹಿತೆಯ ಐದು ಖಂಡಗಳಲ್ಲಿ ಮೊದಲ ಖಂಡವಾದ ಸೃಷ್ಟಿಖಂಡವು ಸಂಪೂರ್ಣವಾಯಿತು. •

ರಾಜಕೀಯ ಸಂಸ್ಕೃತಿ ಬದಲಾಗದೆ ನೇಮಕಾತಿ ಅಕ್ರಮ ನಿಲ್ಲದು

• ನಾರಾಯಣ ಎ.



> ನೇಮಕಾತಿ ಅಕ್ರಮಗಳನ್ನು ತಂತ್ರಜ್ಞಾನವನ್ನು ಬಳಸುವ ಮೂಲಕವಾಗಲಿ ಪರೀಕ್ಷಾ ಕ್ರಮಗಳ ಸುಧಾರಣೆಗಳಿಂದಾಗಲಿ ತಡೆಗಟ್ಟಲು ಸಾಧ್ಯವಿಲ್ಲ. ಅಕ್ರಮಗಳು ಇಲ್ಲದೆ ನೇಮಕಾತಿ ನಡೆಯಬೇಕು ಎಂದಾದರೆ ಅಂತಹದ್ದೊಂದು ಸಂದೇಶ ಉನ್ನತ ರಾಜಕೀಯ ನಾಯಕತ್ವದ ಕಡೆಯಿಂದ ಬರಬೇಕು

ಶಾಸಕರನ್ನು ಖರೀದಿಸಿ ಅಧಿಕಾರ ಪಡೆದಿರುವ ಸರ್ಕಾರವೊಂದರಲ್ಲಿ ಆಯಕಟ್ಟಿನ ಹುದ್ದೆಗಳು ದೊಡ್ಡ ಪ್ರಮಾಣದಲ್ಲಿ ಮಾರಾಟವಾಗುತ್ತಿರುವುದು ತೀರಾ ಸಹಜ ವಿದ್ಯಮಾನ. ದೊಡ್ಡ ಪ್ರಮಾಣದಲ್ಲಿ ಅಂತ ಹೇಳಿದ್ದು ಯಾಕೆ ಅಂದರೆ, ಒಂದಷ್ಟು ಪ್ರಮಾಣದಲ್ಲಿ ಬಹುತೇಕ ಎಲ್ಲಾ ಹಂತದ ಹುದ್ದೆಗಳು ಎಲ್ಲಾ ಕಾಲದಲ್ಲೂ ಬಿಕರಿಯಾಗಿವೆ. ಅದನ್ನು ಸಹಿಸಿಕೊಂಡದ್ದಕ್ಕೆ ಈಗ ಆ ಪ್ರಮಾಣ ಮೇರೆ ಮೀರಿ ಅಕ್ರಮಗಳು ಒಂದಾದ ನಂತರ ಒಂದರಂತೆ ಬೆಳಕಿಗೆ ಬರುತ್ತಿವೆ. ನೇಮಕಾತಿ ಎನ್ನುವುದು ಪ್ರಹಸನದಂತೆ ಕಾಣುತ್ತಿದೆ. ಗುತ್ತಿಗೆದಾರರಿಂದ ಪ್ರತಿಶತ ಐದು ಹತ್ತರ ಪ್ರಮಾಣದಲ್ಲಿ ಸುಲಿಗೆ ನಡೆಯುತ್ತಿದ್ದದ್ದು ಪ್ರತಿಶತ ನಲುವತ್ತು ತಲುಪಿದಾಗ ಹಾಹಾಕಾರವೆದ್ದಂತೆ ಈ ನೇಮಕಾತಿ ಅಕ್ರಮದ ಕತೆ ಕೂಡಾ.

ನಿಜವಾಗಿ ನೋಡಿದರೆ ಈ ವಿಚಾರದಲ್ಲಿ ಧ್ವನಿ ಎತ್ತುವ ನೈತಿಕ ಅಧಿಕಾರ ಕರ್ನಾಟಕದಲ್ಲಿ ಈ ತನಕ ಅಧಿಕಾರ ನಡೆಸಿದ ಯಾವುದೇ ರಾಜಕೀಯ ಪಕ್ಷಕ್ಕೂ ಇಲ್ಲ. ಕೆಪಿಎಸ್‌ಸಿಯ ಮೂಲಕ 2011ರಲ್ಲಿ ಉನ್ನತ ಹುದ್ದೆಗಳಿಗೆ ನಡೆದ ಹಗರಣಗ್ರಸ್ತ ನೇಮಕಾತಿಯನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ಆದೇಶಗಳನ್ನೇ ಉಲ್ಲಂಘಿಸಿ ಆಳುವ ಬಿಜೆಪಿ ಸಕ್ರಮಗೊಳಿಸಿದ ಪಾಪದಲ್ಲಿ ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜನತಾದಳ ಪಕ್ಷಗಳೆರಡೂ ಮನಸಾ ಭಾಗಿಯಾಗಿದ್ದವಲ್ಲ. ಈಗ ಅವರು ಯಾವ ಮುಖ ಹೊತ್ತು ದೊಡ್ಡ ಮಟ್ಟಿಗೆ ಸುದ್ದಿ ಮಾಡುತ್ತಿರುವ ಸಬ್-ಇನ್ಸ್‌ಪೆಕ್ಟರ್, ಸಹಾಯಕ ಪ್ರಾಧ್ಯಾಪಕ ಮುಂತಾದ ಹುದ್ದೆಗಳ ನೇಮಕಾತಿಯಲ್ಲಿ ನಡೆದ ಅಕ್ರಮಗಳನ್ನು ಪ್ರಶ್ನಿಸಲು ಸಾಧ್ಯ?

ನೇಮಕಾತಿ ದಂಧೆ ಎನ್ನುವುದು ಸರ್ವಪಕ್ಷಗಳ ಸಹಯೋಗದ ಅದ್ಭುತ ಕೂಡಾಟ. ಈ ಲೇಖನವನ್ನು ರಾಜಕೀಯ ಪಕ್ಷಗಳನ್ನು ಪ್ರಸ್ತಾಪಿಸುವುದರ ಮೂಲಕ ಪ್ರಾರಂಭಿಸುವುದಕ್ಕೆ ಕಾರಣವಿದೆ. ಕೆಲವು ವರ್ಷಗಳ ಹಿಂದೆ ಹೀಗೆ ನೇಮಕಾತಿ ಅಕ್ರಮಗಳು ಪಂಜಾಬಿನಲ್ಲಿ ಎಗ್ಗಿಲ್ಲದೆ ನಡೆಯುತ್ತಿದ್ದಾಗ ಸುಪ್ರೀಂ ಕೋರ್ಟ್, ಪಂಜಾಬ್ ಸರಕಾರವನ್ನು ಹಿಗ್ಗಾಮುಗ್ಗಾ ಜಾಡಿಸಿತು. ಆಗ ಇನ್ನೂ ಸುಪ್ರೀಂ ಕೋರ್ಟ್ ಹೇಳಿದರೆ ಸ್ವಲ್ಪ ಮಟ್ಟಿಗೆ ಕೇಳುವಷ್ಟು ಮಾನ ಮರ್ಯಾದೆ ಇತ್ಯಾದಿಗಳನ್ನು ಆಳುವ ಸರ್ಕಾರಗಳು ಇರಿಸಿಕೊಂಡಿದ್ದ ಕಾರಣ ಅಂದಿನ ಪಂಜಾಬ್ ಸರ್ಕಾರವು ಮಿಲಿಟರಿ ಅಧಿಕಾರಿಯೊಬ್ಬರನ್ನು ರಾಜ್ಯದ ಲೋಕಸೇವಾ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿ ಹೇಗಾದರೂ ಮಾಡಿ ಈ ದಂಧೆಯನ್ನು ನಿಯಂತ್ರಿಸಿ ಅಂತ ಸ್ವಾತಂತ್ರ್ಯ ನೀಡಿತು. ಅವರ ಅವಧಿಯಲ್ಲಿ ನೇಮಕಾತಿ ಅಕ್ರಮಗಳು ನಿಯಂತ್ರಣಕ್ಕೆ ಬಂದವು ಕೂಡ.

ಇದೆಲ್ಲಾ ಆಗಿ ಬಹಳ ಸಮಯದ ನಂತರ ಆ ಅಧಿಕಾರಿ ಒಂದು ಅಧಿಕೃತ ಸಭೆಯಲ್ಲಿ ಮಾತಿಗೆ ಸಿಕ್ಕಿದರು. ಆ ಮಾತುಕತೆಯಲ್ಲಿ ನೇಮಕಾತಿ ಅಕ್ರಮಗಳನ್ನು ನಿಯಂತ್ರಿಸುವ ಕುರಿತು ತಾವು ಮಾಡಿದ ಪ್ರಯೋಗಗಳನ್ನು ವಿವರಿಸುತ್ತಾ ಅವರು ಒಂದು ವಿಷಯ ಹೇಳಿದರು: 'ನನ್ನ ಅವಧಿಯಲ್ಲಿ ಒಂದು ಕಡೆ ತಂತ್ರಜ್ಞಾನವನ್ನು ಬಳಸಿ, ಇನ್ನೊಂದು ಕಡೆ ಪರೀಕ್ಷಾ ವಿಧಾನಗಳನ್ನು ಬಿಗಿಗೊಳಿಸಿ ಅಕ್ರಮಗಳು ನಡೆಯದಂತೆ ನೋಡಿಕೊಂಡೆ. ಆದರೆ ಅವೆಲ್ಲವೂ ತಾತ್ಕಾಲಿಕ. ವಾಸ್ತವದಲ್ಲಿ ಬದಲಾಗಬೇಕಾಗಿರುವುದು ರಾಜಕೀಯ ನಾಯಕತ್ವ ಮತ್ತು ಅದು ಸರ್ಕಾರಿ ನೇಮಕಾತಿಗಳನ್ನು ನೋಡುವ ದೃಷ್ಟಿಕೋನ. ಸರ್ಕಾರಿ ನೇಮಕಾತಿಗಳು ಸಕ್ರಮವಾಗಿ ನಡೆಯಬೇಕು ಎನ್ನುವುದು ಯಾವುದೇ ಸನ್ನಿವೇಶದಲ್ಲೂ ರಾಜಿ ಮಾಡಿಕೊಳ್ಳಬಾರದ ಒಂದು ಮೌಲ್ಯ ಅಂತ ರಾಜಕೀಯ ನಾಯಕತ್ವ ಒಪ್ಪಿ ಅನುಸರಿಸುವ ತನಕ ಈ ದೇಶದಲ್ಲಿ ನೇಮಕಾತಿ ಅಕ್ರಮಗಳನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವೇ ಇಲ್ಲ'. ಈ ಮಾತು ಅಕ್ಷರಶ ನಿಜ.

ಸರ್ಕಾರಿ ನೇಮಕಾತಿಗಳು ಮೂರು ರೀತಿಯಲ್ಲಿ ದಾರಿತಪ್ಪುತ್ತವೆ. ಮೊದಲನೆಯದಾಗಿ ಹಣಕ್ಕಾಗಿ ಹುದ್ದೆಗಳನ್ನು ಮಾರುವುದು. ಇದು ಭ್ರಷ್ಟಾಚಾರ. ಎರಡನೆಯದಾಗಿ ಸರ್ಕಾರಿ ಹುದ್ದೆಗಳು ತಮ್ಮ ಜಾತಿಯವರಿಗೆ, ತಮ್ಮ ಕುಟುಂಬದವರಿಗೆ, ತಮ್ಮ ಸ್ನೇಹಿತ ವರ್ಗದವರಿಗೆ ಮತ್ತು ತಮ್ಮ ಸಿದ್ಧಾಂತಗಳಿಗೆ ಬದ್ಧರಾದವರಿಗೆ ಸಿಗುವಂತೆ ಮಾಡಲು ಪರೀಕ್ಷಾ ಅಕ್ರಮಗಳನ್ನು ನಡೆಸುವುದು. ಇದು ಸ್ವಜನ ಪಕ್ಷಪಾತ. ನೇಮಕಾತಿಗಳು ದಾರಿ ತಪ್ಪುವ ಮೂರನೆಯ ಸಾಧ್ಯತೆಯಲ್ಲಿ ಭ್ರಷ್ಟಾಚಾರ-ಸ್ವಜನಪಕ್ಷಪಾತ ಇತ್ಯಾದಿ ಏನೂ ಇರುವುದಿಲ್ಲ. ಆದರೆ ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತೆಯನ್ನು ಸರಿಯಾಗಿ ಪರಿಶೀಲಿಸದೆ, ಪರಿಶೀಲಿಸಲು ಬೇಕಾದ ಪರೀಕ್ಷಕರು ಮತ್ತು ಪರೀಕ್ಷಾ ವ್ಯವಸ್ಥೆ ಇಲ್ಲದೆ ಅನರ್ಹರ ನೇಮಕಾತಿ ನಡೆಯುತ್ತದೆ. ಇಲ್ಲಿ ಎಲ್ಲಾ ನಿಯಮಗಳನ್ನೂ ಪಾಲಿಸಲಾಗುತ್ತದೆ. ಆದರೆ ಕಳಪೆ ಪ್ರಶ್ನೆ ಪತ್ರಿಕೆ, ಕಳಪೆ ಪರೀಕ್ಷಕರು ಮತ್ತು ಕಳಪೆ ಪರೀಕ್ಷಾ ವಿಧಾನ ಇತ್ಯಾದಿಗಳಿಂದಾಗಿ ಕಳಪೆ ಗುಣಮಟ್ಟದ ಮಂದಿ ಆಯಕಟ್ಟಿನ ಜಾಗ ಸೇರಿಕೊಳ್ಳುತ್ತಾರೆ.

ಪರೀಕ್ಷಾ ವಿಧಾನಗಳನ್ನು ಬಿಗಿಗೊಳಿಸುವುದರಿಂದ, ತಂತ್ರಜ್ಞಾನ ಅಳವಡಿಸುವುದರಿಂದ ಮಾತ್ರ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತವನ್ನು ತಡೆಗಟ್ಟಲು ಸಾಧ್ಯವಿಲ್ಲ. ಎಲ್ಲಾ ತಂತ್ರಜ್ಞಾನ ಅಳವಡಿಕೆಯ ಹಿಂದೆಯೂ ಒಂದು ಹಂತದ ಮಾನವ ಪಾತ್ರ ಇದ್ದೇ ಇರುತ್ತದೆ. ಮಾತ್ರವಲ್ಲ, ತಂತ್ರಜ್ಞಾನ ಅಳವಡಿಸಿ ಪರೀಕ್ಷಾ ಕ್ರಮ ಬಿಗಿಗೊಳಿಸಿದ ಹಾಗೆಯೇ, ಅದೇ ತಂತ್ರಜ್ಞಾನವನ್ನು ಬಳಸಿ ಬಿಗಿಯಾದ ಕ್ರಮಗಳನ್ನು ಸೋಲಿಸುವುದಕ್ಕೂ ಸಾಧ್ಯವಿದೆ. ಮೌಖಿಕ ಪರೀಕ್ಷೆಯಲ್ಲಿಯೇ ಹೆಚ್ಚು ಅಕ್ರಮಗಳಿಗೆ ಅವಕಾಶ ಇರುವುದು ಅಂತ ಇತ್ತೀಚಿಗೆ ಕೆಲವು ರಾಜ್ಯಗಳು ಮೌಖಿಕ ಪರೀಕ್ಷೆಯನ್ನೇ ರದ್ದುಗೊಳಿಸಿವೆ ಅಥವಾ ಮೌಖಿಕ ಪರೀಕ್ಷೆಗೆ ನಿಗದಿಗೊಳಿಸಿದ ಅಂಕಗಳನ್ನು ಕಡಿಮೆ ಮಾಡಿವೆ. ಸಂದರ್ಶನದಲ್ಲಿ ಅಕ್ರಮ ನಡೆಯುತ್ತದೆ ಎಂದಾದರೆ ಪ್ರಾಮಾಣಿಕ ಪರೀಕ್ಷಕರನ್ನು ನೇಮಿಸಬೇಕೇ ಹೊರತು ಹೊರತು ಮೌಖಿಕ ಪರೀಕ್ಷೆಯನ್ನೇ ತೆಗೆದು ಹಾಕಿದರೆ ಹೇಗೆ? ಎಷ್ಟೋ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಿಂತಲೂ ಸಂದರ್ಶನದ ಅಂಕಗಳು ಮುಖ್ಯವಾಗುತ್ತವೆ. ಅಕ್ರಮ ನಡೆಯುತ್ತಿದೆ ಎನ್ನುವ ಕಾರಣಕ್ಕೆ ಅದನ್ನು ರದ್ದುಗೊಳಿಸುವುದು ಅಥವಾ ಅದರ ಅಂಕಗಳನ್ನೂ ಕಡಿತಗೊಳಿಸುವುದು ಎಂದರೆ ಅಕ್ರಮಗಳನ್ನು ನಿಲ್ಲಿಸುವುದು ಸಾಧ್ಯವೇ ಇಲ್ಲ ಎಂದು ಪರ್ಯಾಯವಾಗಿ ಒಪ್ಪಿಕೊಂಡಂತೆ.

ನೇಮಕಾತಿಗೆ ಬೇಕಾದ ಪ್ರಶ್ನೆ ಪತ್ರಿಕೆಗಳು ಬರುವುದು ನಮ್ಮ ಉನ್ನತ ಶಿಕ್ಷಣ ವ್ಯವಸ್ಥೆಯಿಂದ. ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದು ಕೂಡ ಸರ್ಕಾರಿ ಸ್ವಾಮ್ಯದ ಉನ್ನತ ಶಿಕ್ಷಣ ಸಂಸ್ಥೆಯಿಂದ ಬರುವ ಪ್ರಾಧ್ಯಾಪಕರು. ಉನ್ನತ ಶಿಕ್ಷಣದ ಗುಣಮಟ್ಟ ತೀರಾ ಹದಗೆಟ್ಟಿರುದರಿಂದ ಈಗ ಸರಿಯಾದ ಪ್ರಶ್ನೆ ಪತ್ರಿಕೆಗಳನ್ನು ರೂಪಿಸುವವರು ಸಿಗುತ್ತಿಲ್ಲ. ಮೌಲ್ಯಮಾಪನದ ಸ್ಥಿತಿ ಹೇಗಿರುತ್ತದೆ ಎಂದರೆ ಅಕಸ್ಮಾತ್ ಒಬ್ಬ ಅಭ್ಯರ್ಥಿ ಒಳ್ಳೆಯ ಉತ್ತರ ಬರೆದರೆ ಅದು ಬಹುತೇಕ ಮೌಲ್ಯಮಾಪಕರಿಗೆ ಅರ್ಥವಾಗದೆ ಇರುವ ಸಾಧ್ಯತೆಯೇ ಹೆಚ್ಚು. ಹಾಗಾಗಿ ಕಳಪೆ ಮಟ್ಟದ ಉತ್ತರಗಳಿಗೆ ಅಧಿಕ ಅಂಕಗಳು ಸಿಕ್ಕಿ ಉತ್ತಮ ಅಭ್ಯರ್ಥಿಗಳು ಅವಕಾಶ ಕಳೆದುಕೊಳ್ಳುತ್ತಿರುವುದು ನಡೆಯುತ್ತಿದೆ. ಇದನ್ನು ಸರಿಪಡಿಸಬೇಕಾದರೆ ಉನ್ನತ ಶಿಕ್ಷಣ ವ್ಯವಸ್ಥೆ ಸರಿ ಆಗಬೇಕು. ಉನ್ನತ ಶಿಕ್ಷಣ ವ್ಯವಸ್ಥೆ ಸರಿ ಆಗಬೇಕಾದರೆ ಮೊದಲಿಗೆ ಉನ್ನತ ಶಿಕ್ಷಣ ರಂಗದಲ್ಲಿ ನೇಮಕಾತಿ ಸರಿ ಆಗಬೇಕು.

ಈ ಎಲ್ಲಾ ಕಾರಣಗಳಿಂದಾಗಿ ನೇಮಕಾತಿ ಅಕ್ರಮಗಳನ್ನು ತಂತ್ರಜ್ಞಾನವನ್ನು ಬಳಸುವ ಮೂಲಕವಾಗಲಿ ಪರೀಕ್ಷಾ ಕ್ರಮಗಳ ಸುಧಾರಣೆಗಳಿಂದಾಗಲಿ ತಡೆಗಟ್ಟಲು ಸಾಧ್ಯವಿಲ್ಲ. ಅಕ್ರಮಗಳು ಇಲ್ಲದೆ ನೇಮಕಾತಿ ನಡೆಯಬೇಕು ಎಂದಾದರೆ ಅಂತಹದ್ದೊಂದು ಸಂದೇಶ ಉನ್ನತ ರಾಜಕೀಯ ನಾಯಕತ್ವದ ಕಡೆಯಿಂದ ಬರಬೇಕು. ನೇಮಕಾತಿ ನಡೆಸುವ ಆಯೋಗಗಳಿಗೆ, ಪ್ರಾಧಿಕಾರಗಳಿಗೆ ಮತ್ತು ಸಮಿತಿಗಳಿಗೆ ನಂಬಿಕೆಗೆ ಅರ್ಹರಾದ, ಪ್ರಾಮಾಣಿಕತೆ, ಅರ್ಹತೆ, ದಿಟ್ಟತನಕ್ಕೆ ಹೆಸರಾದ, ಸಾಮಾಜಿಕ ನ್ಯಾಯದ ಬಗ್ಗೆ ಕಳಕಳಿಯುಳ್ಳ ಸದಸ್ಯರನ್ನು ಮತ್ತು ಅಧಿಕಾರಿ ವರ್ಗದವರನ್ನೇ ನೇಮಿಸಬೇಕು. ಇಷ್ಟಾದರೆ ಕೆಳಗಿನ ಹಂತದಲ್ಲಿ ಅಕ್ರಮ ನಡೆಸುವ ಧೈರ್ಯ ಯಾರಿಗೂ ಬರುವುದಿಲ್ಲ. ಆಗ ಕಳಪೆ ಪರೀಕ್ಷಕರನ್ನು ಸಾಧ್ಯವಾದಷ್ಟು ಹೊರಗಿಡುವ ಕೆಲಸವೂ ಆಗುತ್ತದೆ. ಮೊದಲ ಎರಡು ಹಂತಗಳಲ್ಲಿ, ಅಂದರೆ ರಾಜಕೀಯ ನಾಯಕತ್ವದಲ್ಲಿ ಮತ್ತು ನೇಮಕಾತಿ ಪ್ರಾಧಿಕಾರ/ ಆಯೋಗದ ಹಂತದಲ್ಲೇ ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತವನ್ನು ಸಹಿಸಿಕೊಳ್ಳುವ ಮನೋಭಾವ ಇದ್ದು ಬಿಟ್ಟರೆ, ಈ ಎರಡು ಹಂತಗಳಲ್ಲಿ ಅರ್ಹತೆಯ ಬಗ್ಗೆ ಗಂಭೀರ ಕಾಳಜಿ ಹೊಂದಿದವರು ಇಲ್ಲದೆ ಹೋದರೆ ನೇಮಕಾತಿ ಸುಧಾರಣೆ ಎನ್ನುವುದು ಸಾಧ್ಯವೇ ಇಲ್ಲ.

ವಾಸ್ತವದಲ್ಲಿ ಇಂದಿನ ರಾಜಕೀಯ ಪಕ್ಷಗಳು ಮತ್ತು ರಾಜಕೀಯ ನಾಯಕತ್ವ ಬೆಳೆಯುವುದೇ ಇಂತಹ ಅಕ್ರಮಗಳನ್ನು ಪೋಷಿಸುವ ಮೂಲಕ. ಆದ ಕಾರಣ ನಿಜಕ್ಕೂ ನೇಮಕಾತಿಗಳು ಸರಿಯಾಗಿ ನಡೆಯಬೇಕು ಎಂದಾದರೆ ಹೊಸ ರಾಜಕೀಯ ಸಂಸ್ಕೃತಿಯನ್ನು ರೂಢಿಸಿಕೊಂಡ ಪಕ್ಷಗಳು ಅಧಿಕಾರಕ್ಕೆ ಬರಬೇಕು, ಹೊಸ ರೀತಿಯ ರಾಜಕೀಯ ನಾಯಕತ್ವ ಬೆಳೆಯಬೇಕು. ಅಲ್ಲಿಯ ವರೆಗೆ ಹೆಚ್ಚೆಂದರೆ ತೇಪೆ ಹಚ್ಚುವ ಕೆಲಸ ನಡೆಯಬಹುದು.

ಲೇಖಕ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಹಪ್ರಾಧ್ಯಾಪಕ

ಪದಬಂಧ 4957


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಕ್ಷಿಸಲು ಆಧಾರವನ್ನು ಒದಗಿಸುತ್ತಿರುವವನು! (4)
3.ದೃಷ್ಟಿಗೆ ದೂರವಾದುದು ಪಕ್ಷದೊಳಗಿದೆಯಲ್ಲಾ! (3)
4.ವಿಶದ ಪಡಿಸುತ್ತಿರುವವ ಪಂಡಿತ (4)
6.ಪಥದಲ್ಲಿ ಸಾಗುತ್ತಿರುವ ತೇರು (2)
7.ಸುಮ್ಮನೆ ಅಡ್ಡಾಡಲು ಈ ಆತುರವೇ? (4)
8.ಸಹಭೋಜನದಲ್ಲಿ ಸ್ವಭಾವ ಸಿದ್ಧವಾದುದು ಅಡಗಿದೆ (3)
9.ಬುದ್ಧಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
12.ಮಾಸಿರುವುದು ಕೆಂಪು ಮಿಶ್ರಿತ ಕಪ್ಪು ಬಣ್ಣ! (2)
13.ಕನ್ನಡಿಗ ಧರಿಸಿರುವ ಚಾಳೀಸು (4)
15.ಇದೊಂದು ಬಗೆಯ ಅಲೋಹ ಮೂಲಧಾತು (3)
16.ಶಿವನ ಬಳಿಯಿರುವ ಚರ್ಮವಾದ್ಯ (4)

ಮೇಲಿಂದ ಕೆಳಕ್ಕೆ

1.ಓದು ಬರಹಗಳನ್ನು ತಿಳಿದಿರುವಿಕೆ (4)
2.ವಿಹಾರದಲ್ಲಿದ್ದಾಗ ಕಾಣಿಸಿದ ಸೂರ್ಯ (2)
3.ಪರೀಕ್ಷೆ ಸಮಯದಲ್ಲಿ ಬಂದಿರುವ ಜಾತ್ರೆ (3)
5.ದಡಿಯನ ಹಿಡಿದಿರುವ ಬಿಡಿಗಾಸು (3)
7.ಅನುಜನ ಆಡು (2)
8.ವಸತಿ ಹತ್ತಿರವಿರುವ ಹೆಂಡತಿ (2)
9.ಕಡ ತಂದಿರುವ ಅಡಕೆಯು ಒಳಸೇರಿದೆ! (3)
10.ರಾಜ ಕಾಲಾಳು ಮುಂತಾದವುಗಳಿಂದ ಆಡುವ ಒಳಾಂಗಣ ಆಟ (4)
11.ಪಂಚಭೂತಗಳಿಗೆ ಸಂಬಂಧಿಸಿರುವುದು (3)
14.ಕಡಲ ಹತ್ತಿರ ಪಡೆದುಕೊಂಡ ಸಾಲ (2)



4956ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಣಾಳಿಕೆ 2.ಪ್ರವೇಶ
4.ಪಲ್ಲವಿ 6.ಉತ್ತರ
7.ಸಮೂಹಗಾನ
10.ಬವಣೆ 11.ಬಣ್ಣನೆ
13.ಪಗಾರ 14.ರತ್ನಪಡಿ

ಮೇಲಿಂದ ಕೆಳಕ್ಕೆ:
1.ಪ್ರತಾಪ 2.ಪ್ರಖರ
3.ಶಸ್ತ್ರಾಗಾರ 5.ವಿಲಾಸ
6.ಉದಾಹರಣೆ
8.ನವಾಬ
9.ಪಶ್ಚಾತ್ತಾಪ
10.ಬರ್ಬರ 12.ನೆಗಡಿ

ಸುಡೊಕು 5343

				9		7		
			4		7		5	2
	3	9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1				


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5342 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಮೇ 14, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ತ್ರಯೋದಶಿ ಗಂ. 15-23 ನಕ್ಷತ್ರ: ಚಿತ್ತಾ ಗಂ. 17-28 ಯೋಗ: ಸಿದ್ಧಿ(ಆಸ್ರಿಕ್) ಗಂ. 12-58, ಕರಣ: ತೈತಿಲ ಗಂ. 15-23, ಮೇಷ ಮಾಸದ 30 ನೇ ದಿನ.
ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-08 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 12 ಶವ್ವಾಲ್
ದಿನ ವಿಶೇಷ : ನೃಸಿಂಹ ಜಯಂತಿ
ಅದೃಷ್ಟ ಸಂಖ್ಯೆ : 7, 10

ಮೇಷ: ಇಂದು ನೀವು ನಿಮ್ಮ ನಿಶ್ಚಿತ ಗುರಿ ಸಾಧಿಸಲು ಬಹಳ ಶ್ರಮಪಡಬೇಕಾಗಿಲ್ಲ. ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ನಿಮ್ಮ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ವೃಷಭ: ಯಂತ್ರೋಪಕರಣಗಳ ಮಾರಾಟ ಮತ್ತು ಪಶುಸಂಗೋಪನೆಯಿಂದ ಹೆಚ್ಚಿನ ಲಾಭ. ನಿಮ್ಮ ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿದೆ. ಅವಿವಾಹಿತರಿಗೆ ಶುಭಫಲ.

ಮಿಥುನ: ಈ ದಿನದ ಉತ್ತರಾರ್ಧ ಉತ್ತಮ ಫಲದಾಯಕವಾಗಿ ಶುಭವಿದೆ. ಲೋಹ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆ ಹೆಚ್ಚಳ. ಮಕ್ಕಳಿಂದ ಅಹಿತ ಕಾರ್ಯಗಳು ಸಂಭವಿಸಬಹುದು. ಕೆಲಸ ಕಾರ್ಯಗಳಲ್ಲಿ ಮಂದಗತಿ.

ಕರ್ಕಾಟಕ: ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸೂಚನೆ. ಉದ್ವೇಗಕ್ಕೆ ಒಳಗಾಗದೆ ತಾಳ್ಮೆಯಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ದುರ್ಗಾಪರಮೇಶ್ವರಿಯ ಆರಾಧನೆ ಮಾಡಿ.

ಸಿಂಹ: ಆರ್ಥಿಕತೆ ಮತ್ತು ಆರೋಗ್ಯದ ವಿಷಯದಲ್ಲಿ ಹೆಚ್ಚಿನ ನೆಮ್ಮದಿಯನ್ನು ಅಪೇಕ್ಷಿಸಬಹುದು. ಶನಿಯು ಪ್ರವಾಸದಿಂದ ಪ್ರಯಾಸ ಪಡಿಸುತ್ತಾನೆ. ಧಾರ್ಮಿಕ ಚಿಂತನೆಯನ್ನು ಮುಂದುವರಿಸಿ.

ಕನ್ಯಾ: ಗುರು-ಹಿರಿಯರ ಅನುಗ್ರಹ ಹಾಗೂ ನಿಮ್ಮ ಶಾಂತಿ ಸ್ವಭಾವದಿಂದ ಹೆಚ್ಚಿನ ನೆಮ್ಮದಿ. ವ್ಯವಹಾರದಲ್ಲಿ ಹೊರರಾಜ್ಯದ ವ್ಯಕ್ತಿಯೊಬ್ಬರ ಪರಿಚಯ ನಿಮ್ಮ ವ್ಯಾಪಾರ ಅಭಿವೃದ್ಧಿಯ ದಾರಿ ಹಿಡಿಯಲು ಕಾರಣವಾಗುವುದು.

ತುಲಾ: ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯವಾಗುವುದು. ಹೂವು-ಹಣ್ಣು ಮಾರಾಟಗಾರರಿಗೆ ಲಾಭ ದುಪ್ಪಟ್ಟಾಗಲಿದೆ. ಈ ದಿನ ನಿಮ್ಮ ಬಾಳಲ್ಲಿ ಹೊಸ ಪರಿವರ್ತನೆಯನ್ನು ತರಲಿದೆ. ಶನೈಶ್ಚರನ ಸ್ತೋತ್ರ ಪಠಿಸುವುದರಿಂದ ಒಳಿತಾಗುತ್ತದೆ.

ವೃಶ್ಚಿಕ: ಸಮಸ್ಯೆಯ ಗೋಪುರವನ್ನು ಹೊತ್ತಿರುವ ನಿಮಗೆ ಹಂತಹಂತವಾಗಿ ಪರಿಹಾರ ದೊರಕಲಿದೆ. ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ.

ಧನು: ಸರ್ಕಾರಿ ನೌಕರರಿಗೆ ವರ್ಗಾವಣೆ ಯೋಗ. ಲೋಹದ ಕಾರ್ಖಾನೆ, ಚಿನ್ನಾಭರಣ ವ್ಯಾಪಾರಿಗಳಿಗೆ ಉದ್ಯೋಗದಲ್ಲಿ ಅಧಿಕ ಲಾಭ. ಬದುಕಿನ ಕವಲು-ದಾರಿಯಲ್ಲಿರುವ ನಿಮಗೆ ಸರಿಯಾದ ಮಾರ್ಗದರ್ಶನ ದೊರೆಯಲಿದೆ.

ಮಕರ: ಗ್ರಹದ ಫಲಗಳು ಅನುಕೂಲಕರವಾಗಿ ತೋರುವುದರಿಂದ ವ್ಯಾಪಾರೋದ್ಯಮಗಳು ಮನಸ್ಸಿನಂತೆ ನಡೆದು ನಿರೀಕ್ಷೆಗೂ ಮಿಕ್ಕಿ ಲಾಭ. ನಿಮ್ಮನ್ನು ಕಾಡುವ ಸಮಸ್ಯಾ ಸರಪಳಿ ಹೆಚ್ಚಿನ ಶ್ರಮವಿಲ್ಲದೆ ಪರಿಹಾರವಾಗುವುದು.

ಕುಂಭ: ಹೈನುಗಾರಿಕೆಯವರಿಗೆ ವೃತ್ತಿಯಲ್ಲಿ ಆಸಕ್ತಿ ಮೂಡಲಿದೆ. ತಾತ್ಕಾಲಿಕ ಹುದ್ದೆಯವರಿಗೆ ಕಾಯಂ ಆಗುವ ಸಾಧ್ಯತೆ ಇರುತ್ತದೆ. ಪದವಿಧರರಿಗೆ ಸನ್ಮಾನದಂತಹ ಗೌರವ ದೊರಕಲಿದೆ.

ಮೀನ: ಸಮಯೋಚಿತ ಕಾರ್ಯ ನಡೆಸುವಲ್ಲಿ ಆಲಸ್ಯ. ವಾದ-ವಿವಾದಗಳಲ್ಲಿ ಪರಕೀಯರೊಡನೆ ನಿಷ್ಕಾರಣ ವೈಶಮ್ಯ. ಸ್ವಕೀಯ ಪರಿವಾರದಲ್ಲಿ ಅಭಿಪ್ರಾಯ ಭೇದಗಳಿಂದ ತಾಪತ್ರಯಗಳಿಗೆ ಗುರಿಯಾಗುವಿರಿ. ಸತ್ಕಾರ್ಯಗಳಲ್ಲಿ ಆಸಕ್ತಿ.



ಪಟ್ಟಾಭಿಷೇಕ

ಶ್ರೀಕಾಶಿ ಪೀಠದ ಜಂಗಮವಾಡಿ ಮಠದಲ್ಲಿ ನೂತನ ಜಗದ್ಗುರುಗಳ ಪಟ್ಟಾಭಿಷೇಕ ಸಮಾರಂಭದಲ್ಲಿ ಶುಕ್ರವಾರ ಕಾಶಿ ಪೀಠಾಧಿಪತಿಯಾದ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಕಿರೀಟ ತೊಡಿಸುವ ಮೂಲಕ ಪಟ್ಟಾಧಿಕಾರ ಹಸ್ತಾಂತರಿಸಿದರು. ಶ್ರೀಶೈಲ ಪೀಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉಜ್ಜಿನಿ ಮಠದ ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಇದ್ದರು

ಮದರಸಾದಲ್ಲೂ ರಾಷ್ಟ್ರಗೀತೆ ಕಡ್ಡಾಯ?

ಭೋಪಾಲ್, ಮಧ್ಯಪ್ರದೇಶ (ಪಿಟಿಐ): 'ಉತ್ತರ ಪ್ರದೇಶ ಸರ್ಕಾರವು ಮದರಸಾಗಳಲ್ಲಿ ರಾಷ್ಟ್ರಗೀತೆ ಹಾಡುವುದನ್ನು ಕಡ್ಡಾಯಗೊಳಿಸಿದ ಬೆನ್ನಲ್ಲೇ, ಅದೇ ರೀತಿಯ ಕ್ರಮವನ್ನು ಮಧ್ಯಪ್ರದೇಶದಲ್ಲೂ ಜಾರಿಗೊಳಿಸಲು ಸರ್ಕಾರ ಚಿಂತನೆ ನಡೆಸಿದೆ' ಎಂದು ಗೃಹ ಸಚಿವ ನರೋತ್ತಮ್ ಮಿಶ್ರಾ ಹೇಳಿದ್ದಾರೆ.

ವಿದೇಶ ಪ್ರಯಾಣ: 3 ತಿಂಗಳ ಬಳಿಕ ಮುನ್ನೆಚ್ಚರಿಕೆ ಡೋಸ್

ನವದೆಹಲಿ(ಪಿಟಿಐ): ಉದ್ಯೋಗ, ಶಿಕ್ಷಣ, ಮತ್ತಿತರ ಕಾರಣಗಳಿಗಾಗಿ ವಿದೇಶ ಪ್ರಯಾಣ ಮಾಡುವವರು ಕೋವಿಡ್‌ನ 2ನೇ ಡೋಸ್ ಪಡೆದ ಮೂರು ತಿಂಗಳ ಬಳಿಕ ಮುನ್ನೆಚ್ಚರಿಕೆ ಡೋಸ್ ಪಡೆಯಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಕೋವಿನ್ ಪೋರ್ಟಲ್‌ನಲ್ಲಿ ಮುನ್ನೆಚ್ಚರಿಕೆ ಡೋಸ್ ಪಡೆದಿರುವುದನ್ನು ನಮೂದಿಸಲಾಗುತ್ತದೆ. ಈ ಸಂಬಂಧ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಶುಕ್ರವಾರ ಪತ್ರ ಬರೆದಿದೆ.

ನವಾಬ್ ಮಲಿಕ್‌ಗೆ ತಾತ್ಕಾಲಿಕ ಜಾಮೀನು ನೀಡಲು ನಕಾರ

ಮುಂಬೈ (ಪಿಟಿಐ): ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮಹಾರಾಷ್ಟ್ರದ ಮಾಜಿ ಸಚಿವ ನವಾಬ್ ಮಲಿಕ್ ಅವರಿಗೆ, ವೈದ್ಯಕೀಯ ಕಾರಣಗಳಿಗಾಗಿ ತಾತ್ಕಾಲಿಕವಾಗಿ ಜಾಮೀನು ನೀಡಲು ಇಲ್ಲಿನ ವಿಶೇಷ ಕೋರ್ಟ್ ನಿರಾಕರಿಸಿದೆ. ಆದರೆ, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಲು ಅನುಮತಿ ನೀಡಿದೆ.

ತೆರವು ಕಾರ್ಯಾಚರಣೆ: ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಆರೋಪ

'63 ಲಕ್ಷ ಮನೆ ಒಡೆಯಲು ಬಿಜೆಪಿ ಸಿದ್ಧತೆ'

ನವದೆಹಲಿ (ಪಿಟಿಐ): 'ದೆಹಲಿಯಲ್ಲಿ ಒಟ್ಟು 63 ಲಕ್ಷ ಮನೆಗಳನ್ನು ಒಡೆದುಹಾಕಲು ಬಿಜೆಪಿ ನೇತೃತ್ವದ ನಗರಪಾಲಿಕೆ ಸಿದ್ಧತೆ ನಡೆಸಿದೆ. ಈ ಸಂಬಂಧ 63 ಲಕ್ಷ ನೋಟಿಸ್‌ಗಳನ್ನು ನೀಡಿದೆ' ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಆರೋಪಿಸಿದ್ದಾರೆ.

ಶುಕ್ರವಾರ ನಡೆಸಿದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೆಹಲಿಯಲ್ಲಿರುವ ಅನಧಿಕೃತ ಕಾಲೊನಿಗಳಲ್ಲಿನ 60 ಲಕ್ಷ ಕಟ್ಟಡಗಳನ್ನು ತೆರವು ಮಾಡಲು ಪಾಲಿಕೆಗಳು ನೋಟಿಸ್ ನೀಡಿವೆ. ಜತೆಗೆ ಕಟ್ಟಡದ ನಿರ್ಮಾಣ ಯೋಜನೆಯಲ್ಲಿ ಬದಲಾವಣೆ ಮಾಡಿಕೊಂಡಿರುವ 3 ಲಕ್ಷದಷ್ಟು ಮನೆಗಳ ತೆರವಿಗೆ ನೋಟಿಸ್ ನೀಡಲಾಗಿದೆ' ಎಂದು ಅವರು ಹೇಳಿದ್ದಾರೆ.

ದೆಹಲಿಯಲ್ಲಿ ಎಎಪಿ ಸರ್ಕಾರವಿದೆ. ಆದರೆ, ದೆಹಲಿಯ ಮೂರು ನಗರಪಾಲಿಕೆಗಳಲ್ಲಿ ಬಿಜೆಪಿ ಆಡಳಿತವಿದೆ.

'ಮನೆಯ ಬಾಲ್ಕನಿಯನ್ನು ವಿಸ್ತರಿಸಿಕೊಂಡಿರುವವರು, ಬಾಲ್ಕನಿಗೆ ಗಾಜು ಅಳವಡಿಸಿರುವವರಿಗೂ ನೋಟಿಸ್ ನೀಡಲಾಗಿದೆ. ಬಿಜೆಪಿ ನೇತೃತ್ವದ ಪಾಲಿಕೆಗಳು ನಡೆಸಲು ಹೊರಟಿರುವ ಈ ಕಾರ್ಯಾಚರಣೆಯಿಂದ ದೆಹಲಿಯ ಶೇ 70ರಷ್ಟು ಜನರು ನಿರ್ವಸಿತರಾಗಲಿದ್ದಾರೆ. ಕೋಟ್ಯಂತರ ಜನರು ಬೀದಿಗೆ ಬೀಳಲಿದ್ದಾರೆ' ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

'ಈ ಒತ್ತುವರಿ ಮತ್ತು ಅಕ್ರಮ ತೆರವು ಕಾರ್ಯಾಚರಣೆಯನ್ನು ಎಎಪಿ ವಿರೋಧಿಸುತ್ತದೆ. ಈ ವಿಚಾರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಧ್ಯಪ್ರವೇಶಿಸಬೇಕು. ಈ ಬಗ್ಗೆ ಅವರಿಗೆ ಪತ್ರ ಬರೆದಿದ್ದೇನೆ. ಅವರು ಈ ಕಾರ್ಯಾಚರಣೆಯನ್ನು ನಿಲ್ಲಿಸಲು ಸೂಚಿಸಬೇಕು' ಎಂದು ಸಿಸೋಡಿಯಾ ಅವರು ಆಗ್ರಹಿಸಿದ್ದಾರೆ.

'17 ವರ್ಷಗಳಲ್ಲಿ ಲಕ್ಷಾಂತರ ಮನೆಗಳನ್ನು ಅಕ್ರಮವಾಗಿ ನಿರ್ಮಾಣ ಮಾಡಲು ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಅವಕಾಶ ಮಾಡಿಕೊಟ್ಟಿದ್ದಾರೆ. ಲಂಚ ಪಡೆದು ಇಂಥದ್ದಕ್ಕೆಲ್ಲಾ ಅವಕಾಶ ನೀಡಿದ್ದಾರೆ. ಆದರೆ ಈಗ ಜನರ ಮನೆಯನ್ನು ಮಾತ್ರ ಒಡೆಯಲಾಗುತ್ತಿದೆ. ಲಂಚ ಪಡೆದುಕೊಂಡವರ ವಿರುದ್ಧ ಯಾವುದೇ ಕ್ರಮ ಇಲ್ಲ. ಮೊದಲು ತಪ್ಪಿತಸ್ಥರನ್ನು ಗುರುತಿಸಿ, ಶಿಕ್ಷೆ ವಿಧಿಸಬೇಕು. ಅಲ್ಲಿಯವರೆಗೆ ತೆರವು ಕಾರ್ಯಾಚರಣೆಯನ್ನು ನಿಲ್ಲಿಸಿ' ಎಂದು ಅವರು ಆಗ್ರಹಿಸಿದ್ದಾರೆ.

ಬಂದ್: ಒತ್ತುವರಿ ತೆರವು ಕಾರ್ಯಾಚರಣೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ್ದ ಎಎಪಿ ಶಾಸಕ ಅಮಾನತ್‌ಉಲ್ಲಾ ಖಾನ್ ಅವರ ಬಂಧನವನ್ನು ಖಂಡಿಸಿ, ಶಾಹೀನ್‌ಬಾಗ್ ಸುತ್ತಮುತ್ತಲಿನ ಪ್ರದೇಶದಲ್ಲಿ ಶುಕ್ರವಾರ ಬಂದ್ ಆಚರಿಸಲಾಗಿದೆ. ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ಮುಚ್ಚಿ, ಬಂದ್‌ಗೆ ಬೆಂಬಲ ಸೂಚಿಸಿದ್ದಾರೆ.

ಮುಖ್ಯಾಂಶಗಳು

- ತೆರವು ಕಾರ್ಯಾಚರಣೆ ಸಂಬಂಧ ಚರ್ಚೆ ನಡೆಸಲು ದೆಹಲಿ ಸಿಎಂ ಸಭೆ
- ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿ ಶನಿವಾರ ಬೆಳಿಗ್ಗೆ ಸಭೆ
- ಎಎಪಿ ನಾಯಕರ ಜತೆ ಚರ್ಚಿಸಲಿರುವ ಅರವಿಂದ ಕೇಜ್ರಿವಾಲ್

'ಕೆಟ್ಟ ವ್ಯಕ್ತಿತ್ವ'

ಎಎಪಿ ಶಾಸಕ ಅಮಾನತ್‌ಉಲ್ಲಾ ಖಾನ್ ಅವರನ್ನು ದೆಹಲಿ ಪೊಲೀಸರು ಅಪರಾಧ ಹಿನ್ನೆಲೆಯ ವ್ಯಕ್ತಿಗಳ ಪಟ್ಟಿಗೆ ಸೇರಿಸಿದ್ದಾರೆ. ಜತೆಗೆ, ಅವರದ್ದು 'ಕೆಟ್ಟ ವ್ಯಕ್ತಿತ್ವ' ಎಂದು ಘೋಷಿಸಿದ್ದಾರೆ.

'ಅಮಾನತ್‌ಉಲ್ಲಾ ಖಾನ್ ವಿರುದ್ಧ 18 ಎಫ್‌ಐಆರ್‌ಗಳು ದಾಖಲಾಗಿವೆ. ಕೊಲೆ, ಕೊಲೆಯತ್ನ, ಗಲಭೆ ನಡೆಸಿದ ಆರೋಪಗಳಿವೆ. ಅವರದ್ದು 'ಕೆಟ್ಟ ವ್ಯಕ್ತಿತ್ವ' ಎಂದು ಘೋಷಿಸಬೇಕು' ಎಂದು ಜಾಮಿಯಾನಗರ ಪೊಲೀಸ್ ಠಾಣೆಯು ಇದೇ ಮಾರ್ಚ್ 28ರಂದು ಶಿಫಾರಸು ಮಾಡಿದೆ. ಅದನ್ನು ದೆಹಲಿ ಪೊಲೀಸ್ ಇಲಾಖೆಯು ಮಾರ್ಚ್ 30ರಂದೇ ಅನುಮೋದಿಸಿದೆ. ಇದಕ್ಕೆ ಸಂಬಂಧಿಸಿದ ದಾಖಲೆಗಳು ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಸೋರಿಕೆಯಾಗಿವೆ.

ದೆಹಲಿ ನಗರ ಪಾಲಿಕೆಗಳ ಒತ್ತುವರಿ ತೆರವು ಕಾರ್ಯಾಚರಣೆ ವಿರುದ್ಧ ಪ್ರತಿಭಟನೆ ನಡೆಸಿದ ಕಾರಣಕ್ಕೆ ಅಮಾನತ್ ಅವರನ್ನು ಪೊಲೀಸರು, ಗುರುವಾರ ಬಂಧಿಸಿದ್ದರು. ಮರುದಿನ ಈ ದಾಖಲೆಗಳು ಸೋರಿಕೆಯಾಗಿವೆ. ಅಮಾನತ್ ಅವರನ್ನು ಜಾಮೀನಿನ ಮೇಲೆ ಶುಕ್ರವಾರ ಬಿಡುಗಡೆ ಮಾಡಲಾಗಿದೆ.



ದೆಹಲಿಯ ಶ್ಯಾಮನಗರದಲ್ಲಿ ಶುಕ್ರವಾರ ತೆರವು ಕಾರ್ಯಾಚರಣೆ ನಡೆಸಲಾಯಿತು —ಪಿಟಿಐ ಚಿತ್ರ

> ಪಾಲಿಕೆಗಳಲ್ಲಿ ಬಿಜೆಪಿ ಅಧಿಕಾರದ ಅವಧಿ ಇನ್ನೇನು ಮುಗಿಯಲಿದೆ. ಹೀಗಾಗಿ ಬಿಜೆಪಿ ಬುಲ್ಡೋಜರ್ ಹೆಸರಿನಲ್ಲಿ ರಾಜಕಾರಣ ಆರಂಭಿಸಿದೆ
>
> **ಮನೀಷ್ ಸಿಸೋಡಿಯಾ,** ದೆಹಲಿ ಉಪಮುಖ್ಯಮಂತ್ರಿ

> ರೋಹಿಂಗ್ಯಾ ಮುಸ್ಲಿಮರು ಮತ್ತು ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ರಕ್ಷಿಸುವ ಉದ್ದೇಶದಿಂದ ಎಎಪಿ ಈ ಕಾರ್ಯಾಚರಣೆಯನ್ನು ವಿರೋಧಿಸುತ್ತಿದೆ
>
> **ಆದೇಶ್ ಗುಪ್ತಾ,** ದೆಹಲಿ ಬಿಜೆಪಿ ಅಧ್ಯಕ್ಷ

'ದೆಹಲಿ ಬಿಜೆಪಿ ಅಧ್ಯಕ್ಷ ತೆರವು ಮಾಡಲಿ'

'ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಅವರ ಮನೆ ಮತ್ತು ಕಚೇರಿ ನಿರ್ಮಾಣದ ವೇಳೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಲಾಗಿದೆ. ಶನಿವಾರ ಬೆಳಿಗ್ಗೆ 11 ಗಂಟೆಯ ಒಳಗೆ ಆ ಒತ್ತುವರಿಯನ್ನು ತೆರವು ಮಾಡಬೇಕು' ಎಂದು ಎಎಪಿಯು ದೆಹಲಿ ನಗರ ಪಾಲಿಕೆಗಳಿಗೆ ಗಡುವು ನೀಡಿದೆ.

'ಅಕ್ರಮ ನಿರ್ಮಾಣ ಮತ್ತು ಒತ್ತುವರಿಗಳನ್ನು ತೆರವು ಮಾಡುತ್ತಿದ್ದೇವೆ ಎಂದು ಆದೇಶ್ ಗುಪ್ತಾ ಅವರು ಹೇಳುತ್ತಿರುತ್ತಾರೆ. ಅವರ ಮನೆಯಿಂದಾಗಿರುವ ಒತ್ತುವರಿಯನ್ನು ಮೊದಲು ತೆರವು ಮಾಡಲಿ. ಈ ಬಗ್ಗೆ ನಗರ ಪಾಲಿಕೆಗೆ ದೂರು ನೀಡಿದ್ದೇವೆ. ಆದರೆ, ಬಿಜೆಪಿ ಆಡಳಿತವಿರುವ ಪಾಲಿಕೆಯು ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಆರೋಪಿಸಿದ್ದಾರೆ. ಆನ್‌ಲೈನ್ ಮಾಧ್ಯಮಗೋಷ್ಠಿಯಲ್ಲಿ ಅವರು ಶುಕ್ರವಾರ ಈ ಆರೋಪ ಮಾಡಿದ್ದಾರೆ. 'ಶನಿವಾರ ಬೆಳಿಗ್ಗೆ 11 ಗಂಟೆಯ ಒಳಗೆ ಆದೇಶ್ ಅವರ ಒತ್ತುವರಿಯನ್ನು ಪಾಲಿಕೆ ತೆರವು ಮಾಡಬೇಕು. ಇಲ್ಲದಿದ್ದಲ್ಲಿ, ಒತ್ತುವರಿ ತೆರವು ಮಾಡಲು ನಾವು ಬುಲ್ಡೋಜರ್ ತೆಗೆದುಕೊಂಡು ಹೋಗುತ್ತೇವೆ' ಎಂದು ಸಿಸೋಡಿಯಾ ಎಚ್ಚರಿಕೆ ನೀಡಿದ್ದಾರೆ.

ಅನಧಿಕೃತ ಮಾಂಸದಂಗಡಿ ತೆರವಿಗೆ ಸಿದ್ಧತೆ

ದೆಹಲಿಯಲ್ಲಿರುವ ಅನಧಿಕೃತ ಮಾಂಸದ ಅಂಗಡಿಗಳನ್ನು ತೆರವು ಮಾಡಲು ಪಾಲಿಕೆ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. 'ಬವಾನಾ ಪ್ರದೇಶದಲ್ಲಿ ಅನಧಿಕೃತ ಮಾಂಸದಂಗಡಿಗಳು ಮತ್ತು ಅಕ್ರಮ ನಿರ್ಮಾಣಗಳ ತೆರವು ಕಾರ್ಯ ಕೈಗೊಳ್ಳಲು ಶುಕ್ರವಾರ ಪೊಲೀಸ್ ಭದ್ರತೆ ನೀಡಿ' ಎಂದು ಪಾಲಿಕೆ ಅಧಿಕಾರಿಗಳು ಸ್ಥಳೀಯ ಪೊಲೀಸ್ ಠಾಣೆಗೆ ಪತ್ರ ಬರೆದಿದ್ದರು. ಆದರೆ, ಮಾಂಸದಂಗಡಿಗಳನ್ನು ತೆರವು ಮಾಡಿದ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ.

ಉಳಿದಂತೆ ಹಲವೆಡೆ ಅಕ್ರಮ ನಿರ್ಮಾಣ ತೆರವು ಕಾರ್ಯಾಚರಣೆ ಶುಕ್ರವಾರವೂ ಮುಂದುವರಿದಿದೆ. ಮಂಗೋಲ್‌ಪುರಿ, ಸಮಯಪುರ ಬದ್ಲಿ, ಕರೋಲ್ ಬಾಗ್, ಖೈಲಾ ಪ್ರದೇಶಗಳಲ್ಲಿ ತೆರವು ಕಾರ್ಯಾಚರಣೆ ನಡೆಸಲಾಗಿದೆ. ಮುಂದಿನ ದಿನಗಳಲ್ಲೂ ತೆರವು ಕಾರ್ಯಾಚರಣೆ ನಡೆಯಲಿದೆ.

ದೆಹಲಿಯಲ್ಲಿ ಅಕ್ರಮ ನಿರ್ಮಾಣ ಮತ್ತು ಒತ್ತುವರಿ ತೆರವು ಕಾರ್ಯಾಚರಣೆ ರಾಜಕೀಯ ಬಣ್ಣ ಪಡೆದುಕೊಂಡಿದೆ. 'ಗಲಭೆ ನಡೆಸಿದವರ ಸ್ವತ್ತುಗಳನ್ನು ತೆರವು ಮಾಡಿ' ಎಂದು ದೆಹಲಿ ಬಿಜೆಪಿ ಘಟಕದ ಅಧ್ಯಕ್ಷ ಆದೇಶ್ ಗುಪ್ತಾ ಅವರು ದೆಹಲಿ ಪಾಲಿಕೆಗಳ ಮೇಯರ್‌ಗಳಿಗೆ ಈಚೆಗೆ ಪತ್ರ ಬರೆದಿದ್ದರು. ಆನಂತರ ತೆರವು ಕಾರ್ಯಾಚರಣೆಯನ್ನು ಚುರುಕುಗೊಳಿಸಲಾಗಿತ್ತು. 'ಬಿಜೆಪಿಯು ಒಂದು ಸಮುದಾಯವನ್ನು ಗುರಿ ಮಾಡಿಕೊಂಡು ತೆರವು ಕಾರ್ಯಾಚರಣೆ ನಡೆಸುತ್ತಿದೆ' ಎಂದು ಎಎಪಿ ಮತ್ತು ಕಾಂಗ್ರೆಸ್ ಆರೋಪಿಸುತ್ತಿವೆ.

ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ಹಲವು ಪ್ರಸ್ತಾವಗಳ ಮಂಡನೆ

'ಒಂದು ಕುಟುಂಬಕ್ಕೆ ಒಂದೇ ಟಿಕೆಟ್'

ಪ್ರಜಾವಾಣಿ ವಾರ್ತೆ

ಉದಯಪುರ: 'ಒಂದು ಕುಟುಂಬಕ್ಕೆ ಒಂದೇ ಟಿಕೆಟ್' ಎಂಬ ನಿಯಮವನ್ನು ಕಾಂಗ್ರೆಸ್ ಪಕ್ಷವು ಅಳವಡಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ, ಒಂದೇ ಕುಟುಂಬದ ಎರಡನೇ ವ್ಯಕ್ತಿಯು ಕನಿಷ್ಠ ಐದು ವರ್ಷ ಪಕ್ಷ ಸಂಘಟನೆಯಲ್ಲಿ 'ಅಸಾಧಾರಣ ರೀತಿ'ಯಲ್ಲಿ ಕೆಲಸ ಮಾಡಿದ್ದರೆ ಅಂಥವರಿಗೆ ಈ ನಿಯಮದಿಂದ ವಿನಾಯಿತಿ ಇದೆ. ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ಈ ಪ್ರಸ್ತಾವವನ್ನು ಶುಕ್ರವಾರ ಮುಂದಿಡಲಾಗಿದೆ.

ಮುಖಂಡರು ಯಾವುದೇ ಹುದ್ದೆಗೆ ದೀರ್ಘ ಕಾಲ ಅಂಟಿಕೊಳ್ಳುವುದಕ್ಕೂ ತಡೆ ಒಡ್ಡುವ ಪ್ರಸ್ತಾವ ಇದೆ. ಗರಿಷ್ಠ ಐದು ವರ್ಷ ಒಂದು ಹುದ್ದೆಯಲ್ಲಿ ಇರಬಹುದು. ನಂತರ ಮೂರು ವರ್ಷ ಅವರು ಯಾವುದೇ ಹುದ್ದೆ ಹೊಂದುವಂತಿಲ್ಲ. ಕಾರ್ಯದಕ್ಷತೆಯ ಮೇಲೆ ನಿಗಾ ಇರಿಸುವುದಕ್ಕಾಗಿ ಮೌಲ್ಯಮಾಪನ ವಿಭಾಗ ಮತ್ತು ಕಾಲ ಕಾಲಕ್ಕೆ ಸಮೀಕ್ಷೆ ನಡೆಸುವುದು ಹಾಗೂ ಇತರ ಮಹತ್ವ ವಿಚಾರಗಳಿಗೆ ಗಮನ ಹರಿಸಲು ಸಾರ್ವಜನಿಕ ಒಳನೋಟ ಗುಂಪು ರಚನೆಯ ಸಲಹೆಯೂ ಶಿಬಿರದಲ್ಲಿ ಮಂಡನೆ ಆಗಿದೆ.

ಚಿಂತನ ಶಿಬಿರವು ಕಾಂಗ್ರೆಸ್ ಪಕ್ಷದಲ್ಲಿ ಹೊಸ ಯುಗವೊಂದನ್ನು ಆರಂಭಿಸಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಯ ಮಾಕನ್ ಹೇಳಿದ್ದಾರೆ.

'ಸಮಯ ಬದಲಾಗುತ್ತಿದೆ. ಆದರೆ, ಕಾಲದ ಜತೆಗೆ ಬದಲಾಗಲು ನಮಗೆ ಸಾಧ್ಯವಾಗಿಲ್ಲ' ಎಂದು ಅವರು ಹೇಳಿದ್ದಾರೆ.



ಚಿಂತನ ಶಿಬಿರದಲ್ಲಿ ಸೋನಿಯಾ ಗಾಂಧಿ ಮಾತು —ಪಿಟಿಐ ಚಿತ್ರ

'ಒಂದು ಕುಟುಂಬ ಒಂದು ಟಿಕೆಟ್' ಪ್ರಸ್ತಾವದ ವಿಚಾರದಲ್ಲಿ ಬಹುತೇಕ ಸಹಮತ ಏರ್ಪಟ್ಟಿದೆ. ಪಕ್ಷದ ಹಿರಿಯ ಮುಖಂಡರ ಮಕ್ಕಳು ಅಥವಾ ಸಂಬಂಧಿಕರು ನೇರವಾಗಿ ಬಂದು ಚುನಾವಣೆಗೆ ಸ್ಪರ್ಧಿಸಲು ಅವಕಾಶ ಇಲ್ಲ. ಈ ನಿಯಮವು ಗಾಂಧಿ–ನೆಹರೂ ಕುಟುಂಬಕ್ಕೂ ಅನ್ವಯ ಆಗುತ್ತದೆ' ಎಂದು ಮಾಕನ್ ತಿಳಿಸಿದ್ದಾರೆ.

ಪಕ್ಷದ ಮುಖಂಡರ ಕುಟುಂಬದ ಸದಸ್ಯರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ನೀಡಲಾಗುತ್ತಿದೆ ಎಂಬ ಆರೋಪದ ಕಾರಣಕ್ಕೆ ಈ ನಿಯಮ ರೂಪಿಸಲಾಗಿದೆ. ಹಾಗಾಗಿ, ಈ ನಿಯಮವು ಅನುಮೋದನೆಗೊಳ್ಳುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ತಿಳಿಸಿವೆ.

ಶೇ 50ರಷ್ಟು ಟಿಕೆಟ್‌ಗಳನ್ನು 50 ವರ್ಷದ ಒಳಗಿನವರಿಗೆ ಮೀಸಲು ಇರಿಸುವ ಪ್ರಸ್ತಾವವೂ ಇದೆ. ತಾಲ್ಲೂಕು ಮತ್ತು ಮತಗಟ್ಟೆ ಮಟ್ಟದ ಸಮಿತಿಗಳ ನಡುವೆ ಮಂಡಲ ಸಮಿತಿಗಳನ್ನು ರಚಿಸುವ ಸಲಹೆಯೂ ಪರಿಶೀಲನೆಯಲ್ಲಿದೆ.

ಕಾರ್ಯಕರ್ತರಿಂದ ದೇಣಿಗೆ: ಪ್ರತಿ ತಿಂಗಳೂ ಪಕ್ಷಕ್ಕೆ ನಿಶ್ಚಿತ ಮೊತ್ತವನ್ನು ದೇಣಿಗೆ ನೀಡುವ ಕಾರ್ಯಕರ್ತರನ್ನು ಗುರುತಿಸಬೇಕು ಎಂಬ ಸಲಹೆಯನ್ನು ಕಾಂಗ್ರೆಸ್‌ನ ಕೇರಳ ಘಟಕವು ಮುಂದಿಟ್ಟಿದೆ. ಸಿಪಿಎಂನಲ್ಲಿ ಇಂತಹ ವ್ಯವಸ್ಥೆ ಇದ್ದು, ಕೇರಳ ಘಟಕವು ಅದರಿಂದಲೇ ಪ್ರಭಾವಿತವಾದಂತೆ ಕಾಣಿಸುತ್ತಿದೆ. 15–20 ಕುಟುಂಬಗಳನ್ನು ಸೇರಿಸಿ ಘಟಕ ಸಮಿತಿಗಳನ್ನು ರಚಿಸುವ ಪ್ರಸ್ತಾವವೂ ಇದೆ. ಇದು ಕೂಡ ಸಿಪಿಎಂನಿಂದ ಪ್ರೇರಿತವಾದ ಚಿಂತನೆ.

ನಿರ್ದಿಷ್ಟ ಪಠ್ಯಕ್ರಮವನ್ನು ಹೊಂದಿರುವ ರಾಜಕೀಯ ಶಾಲೆ ಸ್ಥಾಪನೆಯ ಸಲಹೆಯೂ ಬಂದಿದೆ. ಕಾಂಗ್ರೆಸ್‌ನ ಸಿದ್ಧಾಂತ, ಶಿಸ್ತು, ಕಾರ್ಯತಂತ್ರ, ಭಾರತದ ಸಂವಿಧಾನ ಮುಂತಾದ ವಿಷಯಗಳ ಬಗ್ಗೆ ಪಕ್ಷದ ಕಾರ್ಯಕರ್ತರು ಮತ್ತು ನಾಯಕರಿಗೆ ಇದು ತರಬೇತಿ ನೀಡಲಿದೆ. ಪಕ್ಷದ ಎಲ್ಲ ಕಾರ್ಯಕರ್ತರಿಗೆ ಈ ತರಬೇತಿಯು ಕಡ್ಡಾಯ ಎಂದು ಹೇಳಲಾಗಿದೆ. ಚಿಂತನ ಶಿಬಿರವು ಶನಿವಾರ ಮತ್ತು ಭಾನುವಾರವೂ ನಡೆಯಲಿದೆ.

'ಅನಿವಾರ್ಯವಿದ್ದಾಗ ಮೋದಿ ಮೌನ'

'ನಮ್ಮ ಪ್ರಧಾನಿ ಬೇರೆಲ್ಲಾ ಸಮಯದಲ್ಲಿ ಬಹಳ ನಿರರ್ಗಳವಾಗಿ ಮಾತನಾಡುತ್ತಾರೆ. ಆದರೆ, ದೇಶಕ್ಕೆ ಅವರ ಉಪಶಮನಕಾರಿ ಸ್ಪರ್ಶದ ಅನಿವಾರ್ಯ ಇರುವಾಗ ಮೌನವಾಗಿದ್ದಾರೆ' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ್ದಾರೆ.

'ಪ್ರಧಾನಿ ಮೋದಿ ಮತ್ತು ಬಿಜೆಪಿ ನಾಯಕರು ಸದಾ, 'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಎಂದು ಹೇಳುತ್ತಿರುತ್ತಾರೆ. ಅವರ ಪ್ರಕಾರ ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ ಎಂದರೆ ದೇಶವನ್ನು ಶಾಶ್ವತವಾಗಿ ಧ್ರುವೀಕರಣ ಮಾಡುವುದು, ಅಲ್ಪಸಂಖ್ಯಾತರನ್ನು ತುಳಿಯುವುದು ಮತ್ತು ರಾಜಕೀಯ ವಿರೋಧಿಗಳನ್ನು ಬೆದರಿಸುವುದು ಎಂಬುದು ಈಗ ನಿಚ್ಚಳವಾಗಿಹೋಗಿದೆ' ಎಂದು ಸೋನಿಯಾ ಟೀಕಿಸಿದ್ದಾರೆ.

ಪಕ್ಷ ವಿರೋಧಿ ನಡೆ: ಥಾಮಸ್ ಉಚ್ಚಾಟನೆ

ಕೊಚ್ಚಿ (ಪಿಟಿಐ): ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ ಕೇಂದ್ರದ ಮಾಜಿ ಸಚಿವ ಕೆ.ವಿ.ಥಾಮಸ್ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟಿಸಲಾಗಿದೆ. ಆದರೆ, ಈ ಬಗ್ಗೆ ಪ್ರತಿಕ್ರಿಯಿಸಿರುವ ಥಾಮಸ್, 'ಪಕ್ಷದಿಂದ ಉಚ್ಚಾಟಿಸಿರುವ ಕುರಿತ ಅಧಿಕೃತ ಮಾಹಿತಿ ನನಗೆ ಬಂದಿಲ್ಲ. ನಾನು ಈಗಲೂ ಎಐಸಿಸಿ ಮತ್ತು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯನಾಗಿದ್ದೇನೆ' ಎಂದು ಹೇಳಿದ್ದಾರೆ. 'ನನ್ನ ಮಟ್ಟಿಗೆ ಕಾಂಗ್ರೆಸ್ ಎಂಬುದು ಚಿಂತನಾಕ್ರಮ, ಸಂಸ್ಕೃತಿ, ಭಾವನೆ. ಅದನ್ನು ಬದಲಿಸಲು ಹೇಗೆ ಸಾಧ್ಯ. ಹೆಚ್ಚೆಂದರೆ, ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ತೆಗೆಯಬಹುದು ಅಷ್ಟೇ' ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಛೋಟಾ ಶಕೀಲ್ ಸಹಚರರ ಬಂಧನ

ಮುಂಬೈ(ಪಿಟಿಐ): ಕಾನೂನು ಬಾಹಿರ ಚಟುವಟಿಕೆಗಳು ಮತ್ತು ಭಯೋತ್ಪಾದನೆಗೆ ಆರ್ಥಿಕ ನೆರವು ನೀಡುವ ವ್ಯವಹಾರ ನಡೆಸುತ್ತಿದ್ದು ದೇಶದಿಂದ ಪರಾರಿಯಾಗಿರುವ ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಬಲಗೈ ಬಂಟ ಛೋಟಾ ಶಕೀಲ್‌ನ ಇಬ್ಬರು ಆಪ್ತ ಸಹಚರರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ.

ಸಹೋದರರಾದ ಆರೀಫ್ ಅಬುಬಕರ್ ಶೇಖ್ (59) ಮತ್ತು ಶಬ್ಬೀರ್ ಅಬುಬಕರ್ ಶೇಖ್ (51) ಬಂಧಿತ ಆರೋಪಿಗಳು. ದಾವೂದ್ ಇಬ್ರಾಹಿಂ ನಿಯಂತ್ರಣದ 'ಡಿ-ಕಂಪನಿ' ಕೂಟದ ವಿರುದ್ಧದ ಪ್ರಕರಣಗಳನ್ನು ತನಿಖೆ ನಡೆಸುತ್ತಿರುವ ಎನ್‌ಐಎ, ಆರೀಫ್‌ನನ್ನು ಮುಂಬೈನ ಉಪನಗರದ ಪಶ್ಚಿಮದ ಗೋರೆಗಾಂವ್‌ನಲ್ಲಿ ಬಂಧಿಸಿದರೆ, ಶಬ್ಬೀರ್‌ನನ್ನು ನೆರೆಯ ಠಾಣೆ ಜಿಲ್ಲೆಯ ಪೂರ್ವದ ಮೀರಾ ರೋಡ್‌ನಲ್ಲಿ ಗುರುವಾರ ಬಂಧಿಸಿದೆ. ಆರೋಪಿಗಳನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಗ್ರರ ದಾಳಿ: ಕಾನ್‌ಸ್ಟೆಬಲ್ ಹುತಾತ್ಮ

ಶ್ರೀನಗರ: ಕಾಶ್ಮೀರಿ ಪಂಡಿತ ಸಮುದಾಯದ ಸರ್ಕಾರಿ ನೌಕರನೊಬ್ಬರು ಹತ್ಯೆಯಾದ ಬೆನ್ನಲ್ಲೇ ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಉಗ್ರರು ರಜೆಯಲ್ಲಿದ್ದ ಪೊಲೀಸರೊಬ್ಬರನ್ನು ಗುಂಡಿಕ್ಕಿ ಕೊಂದಿದ್ದಾರೆ.

ಪುಲ್ವಾಮಾ ಜಿಲ್ಲೆಯ ಗುಡೂರಾ ಪ್ರದೇಶದಲ್ಲಿ ಶುಕ್ರವಾರ ಪೊಲೀಸ್ ಕಾನ್‌ಸ್ಟೆಬಲ್ ರಿಯಾಜ್ ಅಹ್ಮದ್ ಥೋಕರ್ ಅವರ ಮೇಲೆ ಗುಂಡಿನ ದಾಳಿ ನಡೆಸಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಅವರು ಮೃತಪಟ್ಟರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪೋರ್ಟ್‌ಬ್ಲೇರ್: ಸೇನಾಧಿಕಾರಿ ವಿರುದ್ಧ ಲಂಚ ಪ್ರಕರಣ

ನವದೆಹಲಿ: ಸೇನೆಯ ಕ್ಯಾಂಟೀನ್ ಮತ್ತು ಮಳಿಗೆಗಳಿಗೆ ಪಡಿತರ ಹಾಗೂ ಇತರ ಸಾಮಗ್ರಿಗಳ ಖರೀದಿಯಲ್ಲಿ ಕ್ಷೇತ್ರಾಧಿಕಾರಿಗಳು ಮತ್ತು ಪೂರೈಕೆದಾರರೊಂದಿಗೆ ಷಾಮೀಲಾಗಿ ಭ್ರಷ್ಟಾಚಾರ ನಡೆಸಿದ ಆರೋಪದಲ್ಲಿ ನಿಯೋಜಿತರಾಗಿರುವ ಸೇನಾಧಿಕಾರಿಯೊಬ್ಬರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೆಫ್ಟಿನೆಂಟ್ ಕರ್ನಲ್ ಅಭಿಷೇಕ್ ಚಂದ್ರ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, 2018ರಲ್ಲಿ ವಿವಿಧ ಪೂರೈಕೆದಾರರಿಂದ ಅವರು ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎಂದು ಆರೋಪಿಸಲಾಗಿದೆ.


ಕೊಲೆ: ವಾಯುಪಡೆ ಅಧಿಕಾರಿಗಳಿಗೆ ಜೀವಾವಧಿ ಸಜೆ

ಅಹಮದಾಬಾದ್: ತನಿಖಾ ಸಂಸ್ಥೆಗಳ ಸಿಬ್ಬಂದಿ ತನ್ನ ವಶದಲ್ಲಿರುವ ಆರೋಪಿಗೆ ಕಿರುಕುಳವನ್ನು ನೀಡುವುದು 'ಅತಿ ಕೆಟ್ಟ ಅಪರಾಧ' ಎಂದು ಸಿಬಿಐ ವಿಶೇಷ ನ್ಯಾಯಾಲಯವು ಹೇಳಿದೆ.

ದೆಹಲಿ ಜಾಮ್‌ನಗರದ ವಾಯುಪಡೆ–1ರಲ್ಲಿ ಅಡುಗೆ ಕೆಲಸಕ್ಕಿದ್ದ ಗಿರ್ಜಾ ರಾವತ್, ವಾಯುಪಡೆಯ ಕ್ಯಾಂಟಿನ್‌ನಿಂದ ಮದ್ಯದ ಬಾಟಲಿ ಕಳವು ಮಾಡಿದ್ದಾನೆ ಎಂಬ ಶಂಕೆಯ ಮೇಲೆ ಮೂವರು ಅಧಿಕಾರಿಗಳು ಕಿರುಕುಳ ನೀಡಿ ಆತನ ಸಾವಿಗೆ ಕಾರಣರಾಗಿದ್ದರು.

ಈ ಪ್ರಕರಣದಲ್ಲಿ ಮೂವರು ಅಧಿಕಾರಿಗಳಿಗೆ ಜೀವಾವಧಿ ಶಿಕ್ಷೆಯನ್ನು ಕೋರ್ಟ್ ವಿಧಿಸಿತು. ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ನಿಖಿಲ್ ಡಿ.ದೋಶಿ ಈ ಕುರಿತ ತೀರ್ಪು ಪ್ರಕಟಿಸಿದರು

ಷೇರುಪೇಟೆ ವಹಿವಾಟು ▼ 136



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,808
ಇಂದಿನ ಅಂತ್ಯ	15,782
▼	26
ದಿನದ ಕನಿಷ್ಠ	15,740

ವಿನಿಮಯ ದರ

$ ಡಾಲರ್	77.55
£ ಪೌಂಡ್	94.28
€ ಯುರೊ	80.32
¥ ಯೆನ್ (100ಕ್ಕೆ)	60

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹420

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1605)
ಸೋಯಾ (ರಿಫೈನ್ಡ್)	₹1575 (1575)
ಸೂರ್ಯಕಾಂತಿ (ರಿಫೈನ್ಡ್)	₹1900 (1890)
ಪಾಮೋಲಿನ್	₹1565 (1565)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹238-459
ದ್ವಿತಳಿ (ಬಿ.ವಿ)	₹243-678

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹167
ಆರ್‌ಎಸ್‌ಎಸ್-5	₹167.50
ಗುಡ್ ಲಾಟ್	₹161.50

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹600-800
ಸಣ್ಣ	₹300-500

ಕೊಕೊ ಬೆಳೆಯಲು ಸುಕೊ ಬ್ಯಾಂಕ್ ಅಭಿಯಾನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಭತ್ತ ಬೆಳೆಯುವ ಪ್ರದೇಶಗಳಲ್ಲಿ ಪರ್ಯಾಯವಾಗಿ ಕೊಕೊ ಬೆಳೆ ಜನಪ್ರಿಯಗೊಳಿಸಲು ಸುಕೊ ಬ್ಯಾಂಕ್ ಅಭಿಯಾನ ಆರಂಭಿಸಿದೆ. ಮಲೆನಾಡಿನಲ್ಲಿ ಅಂತರ ಬೆಳೆಯಾಗಿ ಬೆಳೆಯುವ ಕೊಕೊವನ್ನು ಬಿಸಿಲ ನಾಡಿನಲ್ಲಿ ಪ್ರಮುಖ ಬೆಳೆಯಾಗಿಸಲು ರೈತರನ್ನು ಪ್ರೇರೇಪಿಸುವ ಕೆಲಸ ನಡೆದಿದೆ ಎಂದು ಬ್ಯಾಂಕ್ ಅಧ್ಯಕ್ಷ ಮೋಹಿತ ಮಸ್ಕಿ ತಿಳಿಸಿದ್ದಾರೆ.

ಕೊಕೊ ಬೆಳೆಯುವ ಆಸಕ್ತ ರೈತರಿಗೆ ಕ್ಷೇತ್ರಗಳ ಭೇಟಿ, ತಾಂತ್ರಿಕ ನೆರವು, ಮಾರುಕಟ್ಟೆ ಮಾಹಿತಿ ಒದಗಿಸಲು ಯೋಜನೆ ರೂಪಿಸಲಾಗಿದೆ. ಇದಕ್ಕಾಗಿ ಮೇ 19ರಂದು ರೈತರ ಮೊದಲ ಸಭೆ ಆನ್‌ಲೈನ್ ಮೂಲಕ ನಡೆಯಲಿದೆ. 23ರಂದು ಆಂಧ್ರದಲ್ಲಿ ಕೊಕೊ ಬೆಳೆದ ರೈತರ ಕ್ಷೇತ್ರಗಳಿಗೆ ಭೇಟಿ ನಿಗದಿಪಡಿಸಲಾಗಿದೆ. ಆಸಕ್ತರು ಮೇ 18ರ ಒಳಗೆ ತಮ್ಮ ಮೊಬೈಲ್ ಸಂಖ್ಯೆ ಹಾಗೂ ಹೆಸರು ನೋಂದಾಯಿಸಬೇಕು. ಬ್ಯಾಂಕ್‌ನ ಕಾಲ್ ಸೆಂಟರ್‌ನ ಸಂಖ್ಯೆ 18001215560 ಸಂಪರ್ಕಿಸಲು ಕೋರಿದ್ದಾರೆ.

6ನೇ ದಿನವೂ ನಕಾರಾತ್ಮಕ ಚಲನೆ

ಮುಂಬೈ (ಪಿಟಿಐ): ಹಣದುಬ್ಬರ ಏರಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವಿನ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರವೂ ವಹಿವಾಟು ಇಳಿಕೆ ಕಾಣುವಂತಾಯಿತು. ಈ ಮೂಲಕ ಸತತ ಆರನೇ ವಹಿವಾಟು ಅವಧಿಯಲ್ಲಿಯೂ ನಕಾರಾತ್ಮಕ ಚಲನೆ ಮುಂದುವರಿಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 136 ಅಂಶ ಇಳಿಕೆ ಕಂಡು 52,794 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 26 ಅಂಶ ಇಳಿಕೆ ಆಗಿ 15,782 ಅಂಶಗಳಿಗೆ ತಲುಪಿತು.



ವಿದೇಶಿ ಬಂಡವಾಳ ಹೊರಹರಿವು ಮುಂದುವರಿದಿರುವುದು ವಹಿವಾಟಿನ ಮೇಲೆ ಪರಿಣಾಮ ಬೀರಿತು. ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರ ಶೇ 7.79ಕ್ಕೆ ಏರಿಕೆ ಕಂಡಿರುವುದರಿಂದ ಆರ್‌ಬಿಐಗೆ ಬಡ್ಡಿದರ ಏರಿಕೆ ಮಾಡದ ಹೊರತು ಬೇರೆ ಆಯ್ಕೆ ಉಳಿದಿಲ್ಲ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ರೂಪಾಯಿ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 5 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 77.55 ಡಾಲರ್‌ಗಳಂತೆ ವಿನಿಮಯಗೊಂಡಿತು. ಈ ಮೂಲಕ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 1.09ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 108.6 ಡಾಲರ್‌ಗಳಿಗೆ ಏರಿಕೆ ಕಂಡಿದೆ.

ಎಸ್‌ಬಿಐ ಲಾಭ ಶೇ 41 ಹೆಚ್ಚಳ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 9,114 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 6,451 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 41ರಷ್ಟು ಹೆಚ್ಚಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಒಟ್ಟು ವರಮಾನವು ₹ 81,327 ಕೋಟಿಯಿಂದ ₹ 82,613 ಕೋಟಿಗೆ ಏರಿಕೆ ಆಗಿದೆ. ವಸೂಲಾಗದ ಸಾಲದ ಸರಾಸರಿ (ಎನ್‌ಪಿಎ) ಪ್ರಮಾಣವು ಶೇ 4.98ರಿಂದ ಶೇ 3.97ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಶೇ 1.50ರಿಂದ ಶೇ 1.02ಕ್ಕೆ ಇಳಿಕೆ ಆಗಿದೆ.

2021-22ನೇ ಹಣಕಾಸು ವರ್ಷಕ್ಕೆ ಬ್ಯಾಂಕ್‌ನ ಒಟ್ಟಾರೆ ಲಾಭವು ₹ 31,676 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 55ರಷ್ಟು ಏರಿಕೆ ಆಗಿದೆ.

ಲಾಭಾಂಶ: 2022ರ ಮಾರ್ಚ್‌ಗೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹ 7.10ರಷ್ಟು ಲಾಭಾಂಶ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿ ಶಿಫಾರಸು ಮಾಡಿದೆ.

ಮುಂಬೈ ಧಾರಣೆ

ಶೇಂಗಾ

13-5-2022

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9600-9650
ದಪ್ಪ ಮಧ್ಯಪ್ರದೇಶ(ಹೊಸ)	10950-11000
ದಪ್ಪ ಗುಜರಾತ್(ಹೊಸ)	10050-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1615)
ಒಂದು ವಾರದ ಡೆಲಿವರಿ	1635 (1610)
ಸೋಯಾ ಕಚ್ಚಾ	1550 (1555)
ಪಾಮ್ ವಾರದ ಡೆಲಿವರಿ	1563 (1563)
ಸೂರ್ಯಕಾಂತಿ ಎಣ್ಣೆ ಕಚ್ಚಾ	1840 (1830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,150 (50,900)

ಬೆಳ್ಳಿ ಕೆ.ಜಿ 59,150 (59,850)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕುಮಟ	
ಚಿಪ್ಪು	27119-30969
ಕೋಕ	13170-29090
ಫ್ಯಾಕ್ಟರಿ	9100-20699
ಹಳೆಚಾಲಿ	47199-49599
ಹೊಸಚಾಲಿ	34069-39299
ಪುತ್ತೂರು	
ಹೊಸತು	27500-45000
ಶಿವಮೊಗ್ಗ	
ಬೆಟ್ಟೆ	49000-53440
ಗೊರಬಲು	18650-37999
ರಾಶಿ	47666-50899
ಸರಕು	57119-80140
ಸಿದ್ದಾಪುರ	
ಬಿಳಿಗೋಟು	23779-33699
ಕೋಕ	22699-32800
ಕೆಂಪುಗೋಟು	28709-31089
ರಾಶಿ	44009-50409
ತಟ್ಟಿಬೆಟ್ಟೆ	33499-48899
ಶಿರಸಿ	
ಬೆಟ್ಟೆ	36523-45999
ಬಿಳಿಗೋಟು	22599-32199
ಚಾಲಿ	35181-40491
ರಾಶಿ	39229-50699
ಯಲ್ಲಾಪುರ	
ಆಪಿ	56279-58835
ಬಿಳಿಗೋಟು	28299-33119
ಚಾಲಿ	36399-40300
ಕೋಕ	18899-30899
ಕೆಂಪುಗೋಟು	28912-35899
ರಾಶಿ	48529-54389
ತಟ್ಟಿಬೆಟ್ಟೆ	38509-47899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15800	15950	215.30 ಸೆಂಟ್ಸ್
ಎಸಿ	8820	8500	8750	
ಆರ್‌ಪಿ	9600	9800	9975	ಲಂಡನ್
ಆರ್‌ಸಿ	4500	4300	4450	2058ಡಾಲರ್ಸ್

ರಫ್ತು ವಹಿವಾಟು ಶೇ 30ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಮೌಲ್ಯವು ಏಪ್ರಿಲ್‌ನಲ್ಲಿ ₹ 3.09 ಲಕ್ಷ ಕೋಟಿಗೆ ತಲುಪಿದೆ. 2021ರ ಏಪ್ರಿಲ್‌ನಲ್ಲಿ ₹ 1.54 ಲಕ್ಷ ಕೋಟಿ ಮೌಲ್ಯದ ರಫ್ತು ವಹಿವಾಟು ನಡೆದಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಶೇಕಡ 30.7ರಷ್ಟು ಹೆಚ್ಚಾಗಿದೆ.

ಪೆಟ್ರೋಲಿಯಂ ಉತ್ಪನ್ನಗಳು, ಎಲೆಕ್ಟ್ರಾನಿಕ್ಸ್ ಸರಕುಗಳು ಮತ್ತು ರಾಸಾಯನಿಕ ವಲಯಗಳ ಉತ್ತಮ ಸಾಧನೆಯಿಂದ ಈ ಪ್ರಮಾಣದ ಬೆಳವಣಿಗೆ ಸಾಧ್ಯವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ತಿಳಿಸಿದೆ.


ವ್ಯಾಪಾರ ಕೊರತೆ ಅಂತರ ₹ 1.17 ಲಕ್ಷ ಕೋಟಿಯಿಂದ ₹ 1.54 ಲಕ್ಷ ಕೋಟಿಗೆ ಏರಿಕೆ ಆಗಿದೆ. ಆಮದು ವಹಿವಾಟು 2022 ಏಪ್ರಿಲ್‌ನಲ್ಲಿ ₹ 4.64 ಲಕ್ಷ ಕೋಟಿಗೆ ಏರಿಕೆ ಆಗಿದೆ.

ನಕಲಿ ಖಾತೆಗಳ ಸಂಖ್ಯೆ ಲೆಕ್ಕಹಾಕುತ್ತಿರುವ ಟೆಸ್ಲಾ ಸಿಇಒ

ಟ್ವಿಟರ್ ಖರೀದಿ ತಡೆಹಿಡಿದ ಮಸ್ಕ್

ಲಂಡನ್ (ಎಪಿ): ಟ್ವಿಟರ್ ಕಂಪನಿಯನ್ನು ಖರೀದಿಸುವ ಯೋಜನೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ಉದ್ಯಮಿ, ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಇಲಾನ್ ಮಸ್ಕ್ ಅವರು ಶುಕ್ರವಾರ ಟ್ವೀಟ್ ಮಾಡಿದ್ದಾರೆ. ಟ್ವಿಟರ್‌ನಲ್ಲಿ ಇರುವ ನಕಲಿ ಖಾತೆಗಳ ನಿರ್ದಿಷ್ಟ ಸಂಖ್ಯೆಯನ್ನು ಪತ್ತೆ ಮಾಡುವ ಕೆಲಸದಲ್ಲಿ ಮಸ್ಕ್ ಅವರು ತೊಡಗಿದ್ದಾರೆ.

ನಕಲಿ ಖಾತೆಗಳನ್ನು ಟ್ವಿಟರ್‌ನಿಂದ ಅಳಿಸಿಹಾಕುವ ಬದ್ಧತೆ ತಮಗೆ ಇರುವುದಾಗಿ ಮಸ್ಕ್ ಮತ್ತೆ ಮತ್ತೆ ಹೇಳಿದ್ದಾರೆ. 'ನಕಲಿ ಖಾತೆಗಳ ಪ್ರಮಾಣವು ಬಳಕೆದಾರರ ಸಂಖ್ಯೆಯ ಶೇಕಡ 5ಕ್ಕಿಂತ ಕಡಿಮೆ ಎಂಬ ಲೆಕ್ಕಾಚಾರಕ್ಕೆ ಪೂರಕವಾದ ವಿವರಗಳು ಸಿಗುವವರೆಗೆ ಟ್ವಿಟರ್ ಖರೀದಿಯನ್ನು ತಾತ್ಕಾಲಿಕ ತಡೆಹಿಡಿಯಲಾಗಿದೆ' ಎಂದು ಮಸ್ಕ್ ಅವರು ಹೇಳಿದ್ದಾರೆ.



ಇದಾದ ಕೆಲವು ಹೊತ್ತಿನ ನಂತರ ಮತ್ತೆ ಟ್ವೀಟ್ ಮಾಡಿರುವ ಮಸ್ಕ್ ಅವರು, 'ಟ್ವಿಟರ್ ಸ್ವಾಧೀನ ಮಾಡಿಕೊಳ್ಳುವ ವಿಚಾರದಲ್ಲಿ ಬದ್ಧತೆ ಹೊಂದಿದ್ದೇನೆ' ಎಂದು ಹೇಳಿದ್ದಾರೆ.



ಇಲಾನ್ ಮಸ್ಕ್

'ನಕಲಿ ಖಾತೆಗಳ ಸಂಖ್ಯೆಯು ನಾವು ಅಂದಾಜು ಮಾಡಿರುವುದಕ್ಕಿಂತ ಹೆಚ್ಚಾಗಿರಬಹುದು' ಎಂದು ಟ್ವಿಟರ್ ಈಚೆಗೆ ಹೇಳಿದೆ.

ಶುಕ್ರವಾರದ ವಹಿವಾಟಿನಲ್ಲಿ ಟ್ವಿಟರ್ ಷೇರು ಮೌಲ್ಯವು ಶೇಕಡ 6ರಷ್ಟು ಕುಸಿದಿದೆ. ಇದೇ ವೇಳೆ ಟೆಸ್ಲಾ ಷೇರುಗಳ ಮೌಲ್ಯವು ಶೇ 7ರಷ್ಟು ಹೆಚ್ಚಳವಾಗಿದೆ. ಟೆಸ್ಲಾ ಷೇರುಗಳನ್ನು ಟ್ವಿಟರ್ ಖರೀದಿಗೆ ಹಣ ಒಗ್ಗೂಡಿಸಲು ಬಳಸುವುದಾಗಿ ಮಸ್ಕ್ ಹೇಳಿದ್ದಾರೆ.

'ಮಸ್ಕ್ ಅವರು ಮಾಡಿರುವ ವಿಲಕ್ಷಣವಾದ ಟ್ವೀಟ್‌ನ ಕಾರಣದಿಂದಾಗಿ, ಟ್ವಿಟರ್ ಖರೀದಿ ಯೋಜನೆಯು ಮುರಿದುಬೀಳುವಂತಿದೆ ಎಂದು ಷೇರುಪೇಟೆಯ ಮಂದಿ ಆಲೋಚಿಸಬಹುದು. ಅಥವಾ ಮಸ್ಕ್ ಅವರು ಕಡಿಮೆ ಬೆಲೆಗೆ ಖರೀದಿಸಲು ಆಲೋಚಿಸಿರಬಹುದು. ಅಲ್ಲದೆ, ಮಸ್ಕ್ ಅವರು ಒಂದಿಷ್ಟು ದಂಡ ಪಾವತಿಸಿ ಖರೀದಿ ಯೋಜನೆಯಿಂದ ಹಿಂದೆ ಸರಿಯುತ್ತಿರಬಹುದು' ಎಂದು ವಿಶ್ಲೇಷಕ ಡ್ಯಾನ್ ಐವ್ಸ್ ಹೇಳಿದ್ದಾರೆ.

ಭಾರತ ಪ್ರವೇಶಿಸುವ ಯೋಜನೆಗೆ ಟೆಸ್ಲಾ ಅಲ್ಪವಿರಾಮ

ನವದೆಹಲಿ (ರಾಯಿಟರ್ಸ್): ಭಾರತದಲ್ಲಿ ವಿದ್ಯುತ್ ಚಾಲಿತ (ಇ.ವಿ.) ಕಾರುಗಳನ್ನು ಮಾರಾಟ ಮಾಡುವ ಯೋಜನೆಯನ್ನು ಟೆಸ್ಲಾ ಕಂಪನಿಯು ತಾತ್ಕಾಲಿಕವಾಗಿ ತಡೆಹಿಡಿದಿದೆ, ಮಳಿಗೆ ತೆರೆಯಲು ಸೂಕ್ತ ಜಾಗಕ್ಕೆ ಹುಡುಕಾಟ ನಡೆಸುವ ಕೆಲಸ ಕೈಬಿಟ್ಟಿದೆ ಎಂದು ಮೂಲಗಳು ತಿಳಿಸಿವೆ.

ಕಡಿಮೆ ತೆರಿಗೆ ಪಾವತಿಸಿ ಕಾರುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ಸಿಗದ ಕಾರಣದಿಂದಾಗಿ ಕಂಪನಿ ಈ ಹೆಜ್ಜೆ ಇರಿಸಿದೆ ಎನ್ನಲಾಗಿದೆ. ಅಮೆರಿಕ ಮತ್ತು ಚೀನಾದಿಂದ ಆಮದು ಮಾಡಿಕೊಂಡ ಕಾರುಗಳನ್ನು ಭಾರತದಲ್ಲಿ ಮಾರಾಟ ಮಾಡಿ, ಇಲ್ಲಿ ಬೇಡಿಕೆ ಎಷ್ಟಿದೆ ಎಂಬುದನ್ನು ಪರಿಶೀಲಿಸಲು ಟೆಸ್ಲಾ ಮುಂದಾಗಿತ್ತು.

ಆದರೆ, ಕೇಂದ್ರ ಸರ್ಕಾರವು ತೆರಿಗೆ ಪ್ರಮಾಣ ಕಡಿಮೆ ಮಾಡುವುದಕ್ಕೂ ಮೊದಲು ಕಾರುಗಳನ್ನು ಭಾರತದಲ್ಲೇ ತಯಾರಿಸಲಾಗುತ್ತದೆ ಎಂಬ ಭರವಸೆ ನೀಡುವಂತೆ ಟೆಸ್ಲಾ ಕಂಪನಿಗೆ ಹೇಳಿತ್ತು. ಆಮದು ಮಾಡಿಕೊಂಡ ವಾಹನಗಳಿಗೆ ದೇಶದಲ್ಲಿ ಗರಿಷ್ಠ ಶೇ 100ರವರೆಗೆ ತೆರಿಗೆ ವಿಧಿಸಲು ಅವಕಾಶವಿದೆ.

ತೆರಿಗೆ ವಿನಾಯಿತಿ ಸಿಗಬಹುದೇ ಎಂಬುದನ್ನು ಬಜೆಟ್ ಮಂಡನೆಯವರೆಗೂ (ಫೆಬ್ರುವರಿ 1) ಕಂಪನಿ ಕಾದು ನೋಡಿತು. ಆದರೆ ತೆರಿಗೆ ವಿನಾಯಿತಿ ಸಿಗಲಿಲ್ಲವಾದ ಕಾರಣ, ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ನವದೆಹಲಿ, ಮುಂಬೈ ಮತ್ತು ಬೆಂಗಳೂರಿನಲ್ಲಿ ಮಳಿಗೆ ಆರಂಭಿಸಲು ಟೆಸ್ಲಾ ಹುಡುಕಾಟ ನಡೆಸಿತ್ತು. ಈಗ ಆ ಕೆಲಸವನ್ನು ಕಂಪನಿಯು ತಡೆಹಿಡಿದಿದೆ. ಈ ವಿಚಾರವಾಗಿ ಟೆಸ್ಲಾ ಕಡೆಯಿಂದ, ಕೇಂದ್ರ ಸರ್ಕಾರದ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಭಾರತದ ಇ.ವಿ. ಮಾರುಕಟ್ಟೆಯಲ್ಲಿ ಈಗ ಟಾಟಾ ಮೋಟರ್ಸ್ ಪ್ರಾಬಲ್ಯವಿದೆ. ಈ ಮಾರುಕಟ್ಟೆ ಪ್ರವೇಶಿಸಿ, ಆರಂಭಿಕ ಹಂತದ ಪ್ರಯೋಜನ ಪಡೆಯುವ ಲೆಕ್ಕಾಚಾರವು ಟೆಸ್ಲಾಗೆ ಇತ್ತು. ಭಾರತದ ವಾಹನ ಮಾರುಕಟ್ಟೆಯಲ್ಲಿ ಇ.ವಿ. ಪಾಲು ಈಗ ತೀರಾ ಸಣ್ಣ ಮಟ್ಟದಲ್ಲಿದೆ.

ಸಂಕ್ಷಿಪ್ತ ಸುದ್ದಿ

ಎಂಆರ್‌ಪಿಎಲ್‌ಗೆ ₹2,955 ಕೋಟಿ ಲಾಭ

ಮಂಗಳೂರು: ಕೋವಿಡ್‌ನಿಂದಾಗಿ ಆರ್ಥಿಕ ನಷ್ಟಕ್ಕೆ ಒಳಗಾಗಿದ್ದ ಎಂಆರ್‌ಪಿಎಲ್ ಚೇತರಿಕೆಯ ಹಾದಿಗೆ ಮರಳಿದೆ. 2021-22ನೇ ಆರ್ಥಿಕ ವರ್ಷದಲ್ಲಿ ಕಂಪನಿಯು ಒಟ್ಟಾರೆ ₹ 2,955 ಕೋಟಿ ಲಾಭ ಗಳಿಸಿದೆ. 2020-21ರಲ್ಲಿ ₹761 ಕೋಟಿ ನಷ್ಟ ಅನುಭವಿಸಿತ್ತು.

ಮಾರ್ಚ್ 31ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ತೆರಿಗೆ ನಂತರ ₹ 3,008 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 268 ಕೋಟಿ ಲಾಭ ಗಳಿಸಿತ್ತು.

ಫೋಬ್ಸ್ ಗ್ಲೋಬಲ್ 2000: ರಿಲಯನ್ಸ್‌ಗೆ ಎರಡು ಸ್ಥಾನ ಬಡ್ತಿ

ನವದೆಹಲಿ (ಪಿಟಿಐ): ಫೋಬ್ಸ್ ಗ್ಲೋಬಲ್‌ನ 2000 ಕಂಪನಿಗಳ ಪಟ್ಟಿಯಲ್ಲಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು 53ನೇ ಸ್ಥಾನಕ್ಕೆ ಜಿಗಿದಿದೆ. ಈ ಮೂಲಕ ಉನ್ನತ ಸ್ಥಾನ ಪಡೆದ ಭಾರತದ ಮೊದಲ ಕಂಪನಿ ಎನಿಸಿದೆ.

ಎಸ್‌ಬಿಐ (105), ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ನಂತರದ ಸ್ಥಾನದಲ್ಲಿವೆ. ಕಂಪನಿಗಳ ಮಾರಾಟದ ವಿವರ, ಲಾಭಾಂಶ, ಆಸ್ತಿ ಮತ್ತು ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಫೋಬ್ಸ್ ಈ ಪಟ್ಟಿ ಬಿಡುಗಡೆ ಮಾಡುತ್ತದೆ.

ಸ್ವಿಗ್ಗಿ ತೆಕ್ಕೆಗೆ ಡೈನೌಟ್

ನವದೆಹಲಿ (ಪಿಟಿಐ): ರೆಸ್ಟಾರೆಂಟ್‌ಗಳಲ್ಲಿ ಟೇಬಲ್ ಕಾಯ್ದಿರಿಸಲು ನೆರವಾಗುವ ಡೈನೌಟ್ ಕಂಪನಿಯನ್ನು ಖರೀದಿ ಮಾಡುವುದಾಗಿ 'ಸ್ವಿಗ್ಗಿ' ಶುಕ್ರವಾರ ತಿಳಿಸಿದೆ. 20 ನಗರಗಳಲ್ಲಿ 50 ಸಾವಿರಕ್ಕೂ ಅಧಿಕ ರೆಸ್ಟಾರೆಂಟ್‌ಗಳೊಂದಿಗೆ ಸಂಪರ್ಕ ಹೊಂದಿರುವ ಡೈನೌಟ್, ವಿಲೀನದ ಬಳಿಕವೂ ಸ್ವತಂತ್ರ ಆ್ಯಪ್ ಆಗಿ ಕಾರ್ಯನಿರ್ವಹಿಸಲಿದೆ ಎಂದು ಸ್ವಿಗ್ಗಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಯೂನಿಯನ್ ಬ್ಯಾಂಕ್‌ಗೆ ಲಾಭ

ನವದೆಹಲಿ (ಪಿಟಿಐ): ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಿವ್ವಳ ಲಾಭವು 2022ರ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 1,440 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 8ರಷ್ಟು ಹೆಚ್ಚಾಗಿದೆ.

ಶ್ರೀಲಂಕಾ: ಸರ್ಕಾರದ ಭಾಗವಾಗುವುದಿಲ್ಲ – ವಿರೋಧ ಪಕ್ಷಗಳ ಹೇಳಿಕೆ

'ವಿಕ್ರಮಸಿಂಘೆ ನೇಮಕ ಜನರ ಆಶಯಕ್ಕೆ ವಿರುದ್ಧ'

ಕೊಲಂಬೊ (ಪಿಟಿಐ): 'ದೇಶದ ಪ್ರಧಾನಿಯಾಗಿ ರಾನಿಲ್ ವಿಕ್ರಮಸಿಂಘೆ ಅವರ ನೇಮಕವು ಜನರ ಆಶಯಕ್ಕೆ ವಿರುದ್ಧವಾಗಿದೆ' ಎಂದಿರುವ ವಿರೋಧ ಪಕ್ಷಗಳು, ವಿಕ್ರಮಸಿಂಘೆ ಅವರಿಗೆ ಬೆಂಬಲ ನೀಡುವುದಿಲ್ಲ ಎಂದು ಘೋಷಣೆ ಶುಕ್ರವಾರ ಮಾಡಿವೆ.

ಅಲ್ಲದೆ, ತಾವು ವಿಕ್ರಮಸಿಂಘೆ ಅವರ ಸರ್ಕಾರದ ಭಾಗವಾಗುವುದಿಲ್ಲ ಎಂದು ಬಹುತೇಕ ವಿರೋಧ ಪಕ್ಷಗಳು ಘೋಷಣೆ ಮಾಡಿವೆ. ಆದರೆ, ದೇಶದ ಆರ್ಥಿಕ ಪುನಶ್ಚೇತನಕ್ಕೆ ಸರ್ಕಾರ ಕೈಗೊಳ್ಳಲಿರುವ ಆರ್ಥಿಕ ಕಾರ್ಯನೀತಿಗಳಿಗೆ ಬಾಹ್ಯ ಬೆಂಬಲ ನೀಡುವುದಾಗಿ ತಿಳಿಸಿವೆ.

ಈ ನಡುವೆ, ಪ್ರಮುಖ ವಿರೋಧಪಕ್ಷ ಎಸ್‌ಜೆಬಿ, ಅಧ್ಯಕ್ಷ ಗೊಟಬಯ ರಾಜಪಕ್ಸ ವಿರುದ್ಧದ ನಿರ್ಣಯ ಮತ್ತು ದೇಶದ ಪ್ರಸ್ತುತ ಸ್ಥಿತಿ ಕುರಿತು ಚರ್ಚೆ ನಡೆಸಿತು. ಅಲ್ಲದೆ ಜನತಾ ವಿಮುಕ್ತಿ ಪೆರಮುನಾ (ಜೆವಿಪಿ) ಮತ್ತು ತಮಿಳು ನ್ಯಾಷನಲ್ ಅಲಯನ್ಸ್ ಸಹ ವಿಕ್ರಮಸಿಂಘೆ ಅವರ ನೇಮಕವನ್ನು ಅಸಾಂವಿಧಾನಿಕ ಎಂದು ಟೀಕಿಸಿವೆ.

'ಆತ್ಮಹತ್ಯೆಯಲ್ಲ, ಕೊಲೆ': 'ಗಲಭೆ ವೇಳೆ ಮೃತಪಟ್ಟ ಸಂಸದನ ಸಾವು ಆತ್ಮಹತ್ಯೆಯಲ್ಲ. ಅವರನ್ನು ಬಡಿದು ಕೊಲ್ಲಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ದೇಶದಾದ್ಯಂತ ನಡೆಯುತ್ತಿದ್ದ ಪ್ರತಿಭಟನೆ ವೇಳೆ ಆಗಿನ ಆಡಳಿತಾರೂಢ ಪಕ್ಷದ ಸಂಸದ ಅಮರಕೀರ್ತಿ ಅತುಕೊರಲಾ ಅವರು ನಿಟ್ಟಂಬುವಾ ಎಂಬ ಪಟ್ಟಣದಲ್ಲಿ ಮೃತಪಟ್ಟಿದ್ದರು. ತಮ್ಮ ಕಾರನ್ನು ಅಡ್ಡಗಟ್ಟಿದ ಪ್ರತಿಭಟನಕಾರರ ಪೈಕಿ ಇಬ್ಬರ ಮೇಲೆ ಗುಂಡು ಹಾರಿಸಿದ್ದರು. ಬಳಿಕ ಪ್ರತಿಭಟನಕಾರರಿಗೆ ಬೆದರಿ, ಕಟ್ಟಡವೊಂದಕ್ಕೆ ತೆರಳಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ವರದಿಯಾಗಿತ್ತು.

ಆದರೆ, ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ವಕ್ತಾರ ನಿಹಾಲ್ ಥಲ್ದುವಾ ಅವರು, 'ಸಂಸದರು ಆತ್ಮಹತ್ಯೆ ಮಾಡಿಕೊಂಡಿಲ್ಲ. ಬದಲಾಗಿ ಅವರನ್ನು ಪ್ರತಿಭಟನಕಾರರು ಭೀಕರವಾಗಿ ಹತ್ಯೆ ಮಾಡಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.



ಕೊಲಂಬೊದಲ್ಲಿ ಜನರು ರಸ್ತೆಯಲ್ಲಿ ಖಾಲಿ ಎಲ್‌ಪಿಜಿ ಸಿಲಿಂಡರ್‌ಗಳ ಮೇಲೆ ಕುಳಿತು ಅಡುಗೆ ಅನಿಲ, ಇಂಧನ ಕೊರತೆ ವಿರುದ್ಧ ಪ್ರತಿಭಟಿಸಿದರು -ಎಎಫ್‌ಪಿ ಚಿತ್ರ

ವೀಸಾ ಸೇವೆ ಸ್ಥಗಿತ: ಭಾರತ ಹೈಕಮಿಷನ್

ವೀಸಾ ವಿಭಾಗದಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ವೀಸಾ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಶ್ರೀಲಂಕಾದಲ್ಲಿರುವ ಭಾರತದ ಹೈಕಮಿಷನ್ ಶುಕ್ರವಾರ ತಿಳಿಸಿದೆ. ವೀಸಾ ವಿಭಾಗದಲ್ಲಿ ಬಹುತೇಕ ಶ್ರೀಲಂಕಾದವರೇ ಕಾರ್ಯನಿರ್ವಹಿಸುತ್ತಿದ್ದು, ಸಿಬ್ಬಂದಿ ಕೊರತೆ ಎದುರಾಗಿದೆ. ಹೀಗಾಗಿ ಈ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಹೈಕಮಿಷನ್ ತಿಳಿಸಿದೆ.

ಯುಎಇ ಅಧ್ಯಕ್ಷ ಶೇಖ್ ಖಲೀಫಾ ನಿಧನ

ದುಬೈ (ಪಿಟಿಐ): ಅರಬ್ ಸಂಯುಕ್ತ ಸಂಸ್ಥಾನಗಳ (ಯುಎಇ) ಅಧ್ಯಕ್ಷ ಮತ್ತು ಅಬುಧಾಬಿಯ ಆಡಳಿತಗಾರ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಶುಕ್ರವಾರ ನಿಧನರಾದರು ಎಂದು ಅಧ್ಯಕ್ಷೀಯ ವ್ಯವಹಾರಗಳ ಸಚಿವಾಲಯವು ಮಾಹಿತಿ ನೀಡಿದೆ.



ಶೇಖ್ ಖಲೀಫಾ ಅವರು 2004ರ ನವೆಂಬರ್ 3ರಿಂದ ಯುಎಇ ಅಧ್ಯಕ್ಷರಾಗಿದ್ದರು.

'ಖಲೀಫಾ ಅವರ ನಿಧನಕ್ಕಾಗಿ ಅಧ್ಯಕ್ಷೀಯ ವ್ಯವಹಾರಗಳ ಸಚಿವಾಲಯವು 40 ದಿನಗಳ ಶೋಕಾಚರಣೆಯನ್ನು ಘೋಷಿಸಿದೆ' ಎಂದು 'ಖಲೀಜ್ ಟೈಮ್ಸ್' ವರದಿ ಮಾಡಿದೆ.

ಸಂತಾಪ ಸೂಚಕವಾಗಿ ಧ್ವಜಗಳನ್ನು ಅರ್ಧಕ್ಕೆ ಮಟ್ಟ ಹಾರಿಸಲಾಗುತ್ತಿದ್ದು, ಸಚಿವಾಲಯದ ಕಚೇರಿಗಳು, ಸರ್ಕಾರಿ ಇಲಾಖೆಗಳು, ಬ್ಯಾಂಕ್‌ಗಳು ಮತ್ತು ಸ್ಥಳೀಯ ಸಂಸ್ಥೆಗಳು ಶುಕ್ರವಾರದಿಂದ 40 ದಿನಗಳ ಕಾಲ ಸೇವೆ ಸ್ಥಗಿತಗೊಳಿಸಲಿವೆ.

ವಿಶ್ವದ ಅತ್ಯಂತ ಎತ್ತರದ ಕಟ್ಟಡವಾದ ಬುರ್ಜ್ ಖಲೀಫಾಕ್ಕೆ ಇವರ ಹೆಸರನ್ನೇ ಇಡಲಾಗಿದೆ.

ಭಾರತ ಶೋಕಾಚರಣೆ: ಶೇಖ್ ಖಲೀಫಾ ಬಿನ್ ಜಾಯೆದ್ ಅವರ ನಿಧನಕ್ಕೆ ಭಾರತವು ಒಂದು ದಿನದ (ಶನಿವಾರ) ಶೋಕಾಚರಣೆಯನ್ನು ಘೋಷಿಸಿದೆ.

'ಯುದ್ಧ ಗೆಲ್ಲುವವರೆಗೆ ಉಕ್ರೇನ್‌ಗೆ ಬೆಂಬಲ'

ವಾಂಗೆಲ್ಸ್ (ಜರ್ಮನಿ)/ಕೀವ್ (ಎಎಫ್‌ಪಿ/ಪಿಟಿಐ): ರಷ್ಯಾ ವಿರುದ್ಧ ಗೆಲುವು ಸಾಧಿಸುವವರೆಗೂ ಉಕ್ರೇನ್ ಬೆಂಬಲಿಸಲು ಜಿ-7 ರಾಷ್ಟ್ರಗಳು ಪ್ರಬಲವಾಗಿ ಒಗ್ಗೂಡಿವೆ ಎಂದು ಫ್ರಾನ್ಸ್ ಶುಕ್ರವಾರ ಹೇಳಿದೆ.

ಇದೇ ವೇಳೆ ಉಕ್ರೇನ್‌ಗೆ ₹2.40 ಲಕ್ಷ ಕೋಟಿಯ ಸೇನಾ ನೆರವನ್ನು ಜಿ-7 ಘೋಷಿಸಿದೆ.

ಉಕ್ರೇನ್‌ಗೆ ಶಸ್ತ್ರಾಸ್ತ್ರಗಳ ಪೂರೈಕೆಯ ವಿರುದ್ಧ ನ್ಯಾಟೊಗೆ ರಷ್ಯಾ 'ಅಣ್ವಸ್ತ್ರ ಯುದ್ಧ'ದ ಬೆದರಿಕೆ ಹಾಕಿದ ನಡುವೆಯೂ, ಬ್ರಿಟನ್, ರಷ್ಯಾ ಮೇಲೆ ಒತ್ತಡ ಮುಂದುವರಿಸಲು ಕೀವ್‌ಗೆ ಹೆಚ್ಚಿನ ಶಸ್ತ್ರಾಸ್ತ್ರಗಳನ್ನು ಪೂರೈಸಲು ಪಶ್ಚಿಮದ ರಾಷ್ಟ್ರಗಳಿಗೆ ಕರೆ ಕೊಟ್ಟಿದೆ.

ಇಲ್ಲಿ ನಡೆಯುತ್ತಿರುವ 'ಜಿ-7' ವಿದೇಶಾಂಗ ಸಚಿವರ ಮೂರು ದಿನಗಳ ಮಾತುಕತೆಗಾಗಿ ಆಗಮಿಸಿರುವ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್, 'ಉಕ್ರೇನ್‌ಗೆ ಹೆಚ್ಚಿನ ಶಸ್ತ್ರಾಸ್ತ್ರ ಪೂರೈಕೆ ಮತ್ತು ರಷ್ಯಾದ ಮೇಲೆ ಮತ್ತಷ್ಟು ನಿರ್ಬಂಧ ಹೇರುವ ಮೂಲಕ ಪುಟಿನ್ ಮೇಲೆ ನಾವು ಒತ್ತಡ ಹೆಚ್ಚಿಸುವುದು ಈಗಿನ ತುರ್ತು ಅಗತ್ಯ. ಈ ಬಿಕ್ಕಟ್ಟಿನಲ್ಲಿ ಜಿ-7 ರಾಷ್ಟ್ರಗಳ ಒಗ್ಗಟ್ಟು ಕೂಡ ಮಹತ್ವದ್ದಾಗಿದೆ' ಎಂದರು.

ರಷ್ಯಾದ ಆಕ್ರಮಣದ ಭೀತಿಯಿಂದ ಸ್ವೀಡನ್ ಮತ್ತು ಫಿನ್ಲೆಂಡ್ ನ್ಯಾಟೊ ಸದಸ್ಯತ್ವ ಪಡೆಯುವ ಪ್ರಕ್ರಿಯೆ ಚುರುಕುಗೊಳಿಸಿವೆ. ಆದರೆ, ನ್ಯಾಟೊ ಸದಸ್ಯ ರಾಷ್ಟ್ರ ಟರ್ಕಿ ಇದಕ್ಕೆ ಅಸಮ್ಮತಿ ಸೂಚಿಸಿದೆ. ಪ್ರತೀಕಾರವಾಗಿ ಫಿನ್ಲೆಂಡ್‌ಗೆ ಶನಿವಾರದಿಂದಲೇ ವಿದ್ಯುತ್ ಸರಬರಾಜು ಕಡಿತಗೊಳಿಸುವುದಾಗಿ ರಷ್ಯಾ ಎಚ್ಚರಿಕೆ ನೀಡಿದೆ.

ಮಾತುಕತೆಗೆ ಸಿದ್ಧ: 'ರಷ್ಯಾ ಅಧ್ಯಕ್ಷ ಪುಟಿನ್ ಜತೆಗೆ ಮಾತುಕತೆಗೆ ಸಿದ್ಧ. ಯಾವುದೇ ಅಂತಿಮ ಷರತ್ತುಗಳಿಲ್ಲದೇ ನಾವು ಒಪ್ಪಂದಕ್ಕೆ ಬರಬೇಕು' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ. 'ಕ್ರಿಮಿಯಾವನ್ನು ರಷ್ಯಾದ ಭಾಗವೆಂದು ಒಪ್ಪುವುದಿಲ್ಲ. ರಷ್ಯಾ ಪಡೆಗಳು ತಕ್ಷಣ ಉಕ್ರೇನ್ ತೊರೆಯಬೇಕು' ಎಂದಿದ್ದಾರೆ.

60 ಲಕ್ಷ ದಾಟಿದ ನಿರಾಶ್ರಿತರ ಸಂಖ್ಯೆ: ಉಕ್ರೇನ್‌ನಲ್ಲಿ ದಿನದಿನಕ್ಕೂ ರಷ್ಯಾ ಪಡೆಗಳ ಯುದ್ಧಾಪರಾಧಗಳು ಹೆಚ್ಚುತ್ತಿದ್ದು, ಸಾವಿರಾರು ಜನರನ್ನು ಕ್ರೂರ ವಿಚಾರಣೆ ಶಿಬಿರಗಳಿಗೆ ಬಲವಂತವಾಗಿ ಕರೆದೊಯ್ಯಲಾಗಿದೆ ಎನ್ನುವ ಆರೋಪಗಳು ರಷ್ಯಾ ವಿರುದ್ಧ ಕೇಳಿಬಂದಿವೆ.

ರಾಯಭಾರ ಕಚೇರಿ ಪುನರಾರಂಭ

ನವದೆಹಲಿ: ಉಕ್ರೇನ್ ಮೇಲೆ ರಷ್ಯಾ ಸೇನಾ ಕಾರ್ಯಾಚರಣೆ ಆರಂಭಿಸಿದ ನಂತರ ಕೀವ್‌ನಿಂದ ಪೋಲೆಂಡ್‌ನ ವಾರ್ಸಾಕ್ಕೆ ಸ್ಥಳಾಂತರಿಸಲಾಗಿದ್ದ ಭಾರತೀಯ ರಾಯಭಾರ ಕಚೇರಿಯನ್ನು ಇದೇ 17ರಿಂದ ಕೀವ್‌ನಲ್ಲಿ ಪುನರಾರಂಭಿಸಲಾಗುತ್ತಿದೆ ಎಂದು ಭಾರತೀಯ ವಿದೇಶಾಂಗ ಸಚಿವಾಲಯ ಶುಕ್ರವಾರ ತಿಳಿಸಿದೆ.

ವಿಶ್ವಸಂಸ್ಥೆ ನಿರ್ಣಯದಿಂದ ಭಾರತ ಗೈರು

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ರಷ್ಯಾದ ಆಕ್ರಮಣದಿಂದ ಉಕ್ರೇನ್‌ನಲ್ಲಿ ಹದಗೆಡುತ್ತಿರುವ ಮಾನವ ಹಕ್ಕುಗಳ ಪರಿಸ್ಥಿತಿಯ ಕುರಿತ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ನಿರ್ಣಯದಿಂದ ಭಾರತ ಹೊರಗುಳಿಯಿತು. ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿಯಾಗಿರುವ ರಾಯಭಾರಿ ಇಂದ್ರಮಣಿ ಪಾಂಡೆ, ಅಧಿವೇಶನದಲ್ಲಿ ಉಕ್ರೇನ್ ಸಂಘರ್ಷದ ಬಗ್ಗೆ ಭಾರತದ ನಿಲುವು ಅಚಲವಾಗಿದೆ ಎಂದು ಪ್ರತಿಪಾದಿಸಿದರು.

ವಿದ್ಯಾರ್ಥಿಗಳ ಸಮಸ್ಯೆ ನಿವಾರಿಸಲು ಕ್ರಮ: ಉಕ್ರೇನ್ ವಿಶ್ವವಿದ್ಯಾನಿಲಯಗಳಲ್ಲಿ ಓದುತ್ತಿದ್ದ ಭಾರತೀಯ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಉಂಟಾಗಿರುವ ಪರಿಣಾಮ ತಗ್ಗಿಸಲು ಪರಿಹಾರೋಪಾಯ ಅನ್ವೇಷಿಸಲಾಗುತ್ತಿದೆ ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ವಿಶ್ವಸಂಸ್ಥೆಯ ಭಾರತದ ಕಾಯಂ ಉಪ ಪ್ರತಿನಿಧಿ ಆರ್.ರವೀಂದ್ರ ಅವರು ತಿಳಿಸಿದ್ದಾರೆ.

ಫುಟ್‌ಬಾಲ್: ಸೆಮಿಫೈನಲ್‌ಗೆ ಪಯನಿಯರ್ಸ್

ಬೆಂಗಳೂರು: ಪಯನಿಯರ್ಸ್ ಎಫ್‌ಸಿ ತಂಡ ದಕ್ಷಿಣ ವಲಯ 'ಸಿ' ಡಿವಿಷನ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಹಂತಕ್ಕೆ ಲಗ್ಗೆ ಇರಿಸಿದೆ. ಶುಕ್ರವಾರ ನಡೆದ ಎಂಟರ ಘಟ್ಟದ ಪಂದ್ಯದಲ್ಲಿ ಪಯನಿಯರ್ಸ್ 2-0ಯಿಂದ ಮಾಜಾಸ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.

70ನೇ ನಿಮಿಷದಲ್ಲಿ ಗೋಲು ಗಳಿಸಿದ ವಸಂತ್ ಅವರು ಪಯನಿಯರ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಎರಡು ನಿಮಿಷಗಳ ನಂತರ ಪ್ರಭಾಕರನ್ ಚೆಂಡನ್ನು ಗುರಿ ಮುಟ್ಟಿಸಿ ತಂಡದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಗನ್ನರ್ಸ್‌ಗೆ ಭರ್ಜರಿ ಗೆಲುವು: ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ 'ಎ' ಡಿವಿಷನ್ ಪಂದ್ಯದಲ್ಲಿ ಬೆಂಗಳೂರು ಗನ್ನರ್ಸ್ 4-0ಯಿಂದ ಅಂಚೆ ಇಲಾಖೆ ತಂಡವನ್ನು ಮಣಿಸಿತು. ಸಿರಿಲ್ ಜಸ್ಟಿನ್ 13 ಮತ್ತು 35ನೇ ನಿಮಿಷಗಳಲ್ಲಿ ಗೋಲು ಗಳಿಸಿದರೆ ತಮಿಳರಸು 42 ಮತ್ತು 63ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು.

ಇದೇ ಡಿವಿಷನ್‌ನ ಸೌತ್ ಯುನೈಟೆಡ್ ಎಫ್‌ಸಿ ಮತ್ತು ಎಜಿಒಆರ್‌ಸಿ ಎಫ್‌ಸಿ ನಡುವಿನ ಪಂದ್ಯ ಗೋಲುರಹಿತ ಸಮಬಲದಲ್ಲಿ ಮುಕ್ತಾಯಗೊಂಡಿತು. 'ಬಿ' ಡಿವಿಷನ್ ಪಂದ್ಯದಲ್ಲಿ ಡಿವೈಇಎಸ್ ಎಫ್‌ಸಿ ತಂಡ 1-0ಯಿಂದ ತಿಲಕ್ ಮೆಮೋರಿಯಲ್ಸ್ ಎಫ್‌ಸಿಯನ್ನು ಸೋಲಿಸಿತು. ಚಂದನ್ (59ನೇ ನಿ) ಗೋಲು ಗಳಿಸಿದರು.

ಏಷ್ಯಾ ಕಪ್: ರೂಪಿಂದರ್ ಅಲಭ್ಯ

ಬೆಂಗಳೂರು (ಪಿಟಿಐ): ಏಷ್ಯಾ ಕಪ್ ಹಾಕಿ ಟೂರ್ನಿಗೆ ಸಜ್ಜಾಗುತ್ತಿರುವ ಭಾರತ ತಂಡ ಶುಕ್ರವಾರ ಆಘಾತಕ್ಕೆ ಒಳಗಾಗಿದೆ. ತಂಡದ ನಾಯಕ ರೂಪಿಂದರ್ ಪಾಲ್ ಸಿಂಗ್ ಗಾಯಗೊಂಡಿರುವುದರಿಂದ ಟೂರ್ನಿಗೆ ಲಭ್ಯ ಇರುವುದಿಲ್ಲ.

ಭಾರತ ಕ್ರೀಡಾ ಪ್ರಾಧಿಕಾರದ ಬೆಂಗಳೂರು ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ತಂಡದ ಅಭ್ಯಾಸದ ವೇಳೆ ಡ್ರ್ಯಾಗ್ ಫ್ಲಿಕ್ಕರ್ ರೂಪಿಂದರ್ ಅವರ ಮಣಿಗಂಟಿಗೆ ಗಾಯವಾಗಿದೆ ಎಂದು ಹಾಕಿ ಇಂಡಿಯಾ ತಿಳಿಸಿದೆ.

ಬೀರೇಂದ್ರ ಲಾಕ್ರಾ 20 ಮಂದಿಯ ತಂಡವನ್ನು ಮುನ್ನಡೆಸಲಿದ್ದು ಸ್ಟ್ರೈಕರ್, ಕನ್ನಡಿಗ ಎಸ್.ವಿ.ಸುನಿಲ್ ಉಪನಾಯಕನಾಗಿರುವರು. ರೂಪಿಂದರ್ ಬದಲಿಗೆ ನೀಲಂ ಸಂಜೀವ್ ಸೆಸ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಜಕಾರ್ತದಲ್ಲಿ ಮೇ 23ರಂದು ಏಷ್ಯಾ ಕಪ್ ಟೂರ್ನಿ ಆರಂಭವಾಗಲಿದ್ದು ಹಾಲಿ ಚಾಂಪಿಯನ್ ಭಾರತ ಮತ್ತೊಮ್ಮೆ ಮಿಂಚುವ ಭರವಸೆಯಲ್ಲಿದೆ.

ಸೆಂಚುರಿ ಬೆಂಗಳೂರು ಸ್ಕ್ವಾಷ್: ಪ್ರಮುಖರಿಗೆ ಆಘಾತ

ಅಭಯ್, ದೇವ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಯ್ ಗಣೇಶ್, ದೇವ್ ಶರ್ಮಾ ಮತ್ತು ಕರಣ್ ಯಾದವ್ ಅವರು ಇಲ್ಲಿ ನಡೆಯುತ್ತಿರುವ ಸೆಂಚುರಿ ಬೆಂಗಳೂರು ಸ್ಕ್ವಾಷ್ ಓಪನ್ ಟೂರ್ನಿಯಲ್ಲಿ ಅಗ್ರಕ್ರಮಾಂಕದ ಆಟಗಾರರಿಗೆ ಆಘಾತ ನೀಡಿದರು.

ಶುಕ್ರವಾರ ನಡೆದ 13 ವರ್ಷದೊಳಗಿನ ಬಾಲಕರ ವಿಭಾಗದ ಪಂದ್ಯದಲ್ಲಿ ಅಭಯ್ ಗಣೇಶ್ 11-6, 11-9, 11-6ರಿಂದ ಅಗ್ರಶ್ರೇಯಾಂಕದ ಆಟಗಾರ ವಿವಾನ್ ಶ್ರೀವಾಸ್ತವ ಅವರಿಗೆ ಆಘಾತ ನೀಡಿದರು. ಅಭಯ್ ಸೆಮಿಫೈನಲ್ ಪ್ರವೇಶಿಸಿದರು.

15 ವರ್ಷದೊಳಗಿನವರ ವಿಭಾಗದಲ್ಲಿ ದೇವ್ ಶರ್ಮಾ 9-11, 11-5, 11-5, 11-7ರಿಂದ ಅಗ್ರಶ್ರೇಯಾಂಕದ ಆಟಗಾರ ವೇದಾಂತ್ ಛೆಡ್ಡಾ ಎದುರು ಜಯಿಸಿ, ನಾಲ್ಕರ ಘಟ್ಟ ಪ್ರವೇಶಿಸಿದರು.

17 ವರ್ಷದೊಳಗಿನವರ ವಿಭಾಗದಲ್ಲಿ ಕರಣ್ ಯಾದವ್ ಅಮೋಘ ಆಟವಾಡಿದರು. ಮೊದಲ ಗೇಮ್‌ನಲ್ಲಿ ಸೋತರು ನಂತರ ಪುಟಿದೆದ್ದು ಅಗ್ರಶ್ರೇಯಾಂಕದ ಕೆ.ಎಸ್. ಅರಿಹಂತ್ ಅವರನ್ನು ಸೋಲಿಸಿದರು. ಕರಣ್ 3-11, 14-12, 7-11, 11-5, 11-5 ರಿಂದ ಅರಿಹಂತ್ ವಿರುದ್ಧ ಜಯಿಸಿದರು.

11 ವರ್ಷದೊಳಗಿನ ಬಾಲಕರ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ದೇವಾಂಶ್ ಅಗರವಾಲ್ 11-3, 11-0, 11-0ಯಿಂದ ಸೂಫಿಯಾನ್ ಹುಬ್ಳಿ ವಿರುದ್ಧ; ಧ್ರುವ ಬೋಪಣ್ಣ 11-1, 11-5, 11-6ರಿಂದ ವಿಹಾನ್ ಚಾಂಡೋಕ್ ಎದುರು; ಶ್ರೇಷ್ಠ ಅಯ್ಯರ್ 11-4, 11-2, 11-7ರಿಂದ ಆರ್ಯನ್ ಪ್ರಭು ಎದುರು; ಫರೀದ್ ಆಂಧ್ರಬಿ 11-2, 11-1, 11-2ರಿಂದ ಅವ್ಯಾಯಾ ಅಯ್ಯರ್ ವಿರುದ್ಧ ಜಯಿಸಿದರು.

ಮಹಿಳೆಯರ ವಿಭಾಗದಲ್ಲಿ ಸುನಿತಾ ಪಟೇಲ್ 11-3, 11-8, 11-2ರಿಂದ ಎಂ. ಅಮೃತಾ ರಾಜಲಕ್ಷ್ಮೀ ವಿರುದ್ಧ ಜಯಿಸಿದರು. ಇನ್ನುಳಿದ ಪಂದ್ಯಗಳಲ್ಲಿ; ಆಕಾಂಕ್ಷಾ ಗುಪ್ತಾ 11-7, 11-5, 11-3ರಿಂದ ಸ್ಕಂದಾ ಡೋಗ್ರಾ ಎದುರು; ಈಶಾ ಶ್ರೀವಾಸ್ತವ 11-5, 11-8, 11-2ರಿಂದ ಆರ್ಯ ದ್ವಿವೇದಿ ವಿರುದ್ಧ; ಅಂಜಲಿ ಸಮಿವಾಲ್ 11-7, 13-11, 11-4ರಿಂದ ವ್ಯೋಮಿಕಾ ಖಂಡೇಲವಾಲ್ ವಿರುದ್ಧ; ತ್ರಿಣಾ ಐರಿಸ್ 11-6, 11-9, 11-1 ರಿಂದ ಆದ್ಯಾ ಬುದಿಯಾ ವಿರುದ್ಧ; ದಿಯಾ ಯಾದವ್ 11-2, 11-3, 11-5ರಿಂದ ಯಾವನಾ ಸರವಣಕುಮಾರ್ ವಿರುದ್ಧ ಗೆದ್ದರು.



17 ವರ್ಷದೊಳಗಿನ ಬಾಲಕರ ವಿಭಾಗದ ಪಂದ್ಯದಲ್ಲಿ ಪ್ರಿಯಾಂಶು ಕುಮಾರ್ (ಬಲ) ಅಶ್ವಿನ್ ಗಣೇಶ್ ವಿರುದ್ಧ ಗೆದ್ದು ಸಂಭ್ರಮಿಸಿದರು– ಪ್ರಜಾವಾಣಿ ಚಿತ್ರ

ನೆಕ್ಸ್ಟ್ ಜೆನ್ ಕಪ್ ಟೂರ್ನಿಗೆ ಬಿಎಫ್‌ಸಿ

ಬೆನಾಲಿಮ್, ಗೋವಾ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ ಮತ್ತು ಕೇರಳ ಬ್ಲಾಸ್ಟರ್ಸ್ ತಂಡಗಳು ಇಂಗ್ಲೆಂಡ್‌ನಲ್ಲಿ ವರ್ಷಾಂತ್ಯದಲ್ಲಿ ನಡೆಯಲಿರುವ ನೆಕ್ಸ್ಟ್ ಜೆನ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಭಾರತವನ್ನು ಪ್ರತಿನಿಧಿಸಲಿವೆ. ಈಚೆಗೆ ನಡೆದಿದ್ದ ರಿಲಯನ್ಸ್ ಫೌಂಡೇಷನ್ ಡೆವಲಪ್‌ಮೆಂಟ್ ಲೀಗ್‌ನಲ್ಲಿ ಬಿಎಫ್‌ಸಿ ಜಯ ಗಳಿಸಿತ್ತು. ಕೇರಳ ರನ್ನರ್ಸ್ ಅಪ್ ಆಗಿತ್ತು.

ಉದಕಮಂಡಲ ರೇಸ್

ಮೈ ಒಪಿನಿಯನ್ ಗೆಲ್ಲುವ ನಿರೀಕ್ಷೆ

ಡಾ.ಎಂ.ಎ.ಎಂ.ಮೆಮೋರಿಯಲ್ ಟ್ರೋಫಿ ಶನಿವಾರದ ಉದಕಮಂಡಲ ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಮೈ ಒಪಿನಿಯನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 10.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡ್ಯಾನ್ಸಿಂಗ್ ಕ್ವೀನ್ 2, ಮೆಜೆಸ್ಟಿಕ್ ಚಾರ್ಮರ್ 1, ಆಟಮ್ ಶವರ್ 6

2ನೇ ರೇಸ್: ಕಿಂಗ್ಸ್ ಶೋ 1, ಥ್ರಿಲ್ ಆಫ್ ಪವರ್ 8, ವಾಂಡ 5

3ನೇ ರೇಸ್: ಏಂಜೆಲ್ ಹಾರ್ಟ್ 3, ಪಪ್ಪ ರಿಚ್ 10, ಸ್ಟ್ರೀಕ್ 2

4ನೇ ರೇಸ್: ಫೈನ್ ಫ್ಯೂಚರ್ 3, ಅಡ್ಮಿರಲ್ ಶಾ 1, ಎಕ್ಸಲೆಂಟ್ ಸ್ಟಾರ್ 2

5ನೇ ರೇಸ್: ಮಿಸ್ಟರ್ ಕೂಲ್ 6, ಆಯೂರ್ ಶಕ್ತಿ 3, ಅಲೆಕ್ಸಾಂಡ್ರೆ ಡುಮಾಸ್ 1

6ನೇ ರೇಸ್: ಮೈ ಒಪಿನಿಯನ್ 1, ಅಪ್ಸರ ಸ್ಟಾರ್ 7, ನ್ಯೂ ಲುಕ್ 9

7ನೇ ರೇಸ್: ಥಂಡರ್‌ಕ್ಲಾಪ್ 4, ಸಸಾಕ್ವ 3, ಸ್ವಾರ್ಮ್ ಫ್ಲಾಗ್ 1

8ನೇ ರೇಸ್: ಇಬ್ರಾಹಿಮೊವಿಕ್ 3, ಬೆರ್ನಿನಿಟ್ಟ 1, ಸೆರೆನೊ 2

ಉತ್ತಮ ಬೆಟ್: ಇಬ್ರಾಹಿಮೊವಿಕ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6.7.8



ವಿಶ್ವನಾಥನ್ ಆನಂದ್ –ಪಿಟಿಐ ಚಿತ್ರ

ಫಿಡೆ: ಆನಂದ್ ನಾಮನಿರ್ದೇಶನ

ಚೆನ್ನೈ (ಪಿಟಿಐ): ಚೆಸ್ ಕ್ರೀಡೆಯ ದಿಗ್ಗಜ ವಿಶ್ವನಾಥನ್ ಆನಂದ್ ಅವರು ಫಿಡೆ (ವಿಶ್ವ ಚೆಸ್ ಫೆಡರೇಷನ್) ಉಪಾಧ್ಯಕ್ಷರಾಗಿ ಆಯ್ಕೆಯಾಗುವ ಸಾಧ್ಯತೆ ಇದೆ.

ಜುಲೈ-ಆಗಸ್ಟ್‌ನಲ್ಲಿ ನಡೆಯಲಿರುವ 44ನೇ ಚೆಸ್ ಒಲಿಂಪಿಯಾಡ್ ಸಂದರ್ಭದಲ್ಲಿ ಆಯೋಜಿಸಲಾಗಿರುವ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಅರ್ಕಾಡಿ ಡ್ವಾರ್ಕೊವಿಚ್ ಅವರು ಮರು-ಆಯ್ಕೆಯಾದರೆ, ವಿಶ್ವನಾಥನ್ ಆನಂದ್ ಉಪಾಧ್ಯಕ್ಷರಾಗುವುದು ಖಚಿತ.

ಐದು ಬಾರಿ ವಿಶ್ವಚಾಂಪಿಯನ್ ಆಗಿರುವ ಆನಂದ್ ಅವರನ್ನು ಡ್ವಾರ್ಕೊವಿಚ್ ನಾಮನಿರ್ದೇಶನ ಮಾಡಿದ್ದಾರೆ.

ತಾವು ಡ್ವಾರ್ಕೊವಿಚ್ ಅವರನ್ನು ಬೆಂಬಲಿಸುವುದಾಗಿ ಹೋದ ತಿಂಗಳು ನವದೆಹಲಿಯಲ್ಲಿ ನಡೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಆನಂದ್ ಹೇಳಿದ್ದರು.



ಜಾನಿ ಬೆಸ್ಟೊ, ಲಿಯಾಮ್ ಅಬ್ಬರ; ಮಯಂಕ್ ಅಗರವಾಲ್ ಬಳಗದ 'ಕನಸು' ಜೀವಂತ

ಬೆಂಗಳೂರು ಚಾಲೆಂಜ್ ಗೆದ್ದ ಪಂಜಾಬ್

ನವದೆಹಲಿ (ಪಿಟಿಐ): ಕನ್ನಡಿಗ ಮಯಂಕ್ ಅಗರವಾಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡದ ಆಲ್‌ರೌಂಡ್ ಆಟಕ್ಕೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಶರಣಾಯಿತು. ಇದರೊಂದಿಗೆ ಫಫ್ ಡುಪ್ಲೆಸಿ ಬಳಗದ ಪ್ಲೇಆಫ್ ಹಾದಿ ಕಠಿಣವಾಯಿತು.

ಶುಕ್ರವಾರ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವು 54 ರನ್‌ಗಳಿಂದ ಬೆಂಗಳೂರು ತಂಡದ ಎದುರು ಜಯಿಸಿತು.

ಟಾಸ್ ಗೆದ್ದ ಬೆಂಗಳೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜಾನಿ (66; 29ಎ, 4X4, 6X7) ಮತ್ತು ಲಿಯಾಮ್ (70; 42ಎ, 4X5, 6X4) ಅಬ್ಬರದ ಬ್ಯಾಟಿಂಗ್‌ನಿಂದ ಪಂಜಾಬ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 209 ರನ್ ಗಳಿಸಿತು. ಅದಕ್ಕುತ್ತರವಾಗಿ ಆರ್‌ಸಿಬಿಯು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 155 ರನ್ ಗಳಿಸಿತು. ವೇಗಿ ಕಗಿಸೊ ರಬಾಡ (21ಕ್ಕೆ3), ರಿಷಿ ಧವನ್ (36ಕ್ಕೆ2) ಮತ್ತು ರಾಹುಲ್ ಚಾಹರ್ (37ಕ್ಕೆ2) ಫಫ್ ಡುಪ್ಲೆಸಿ ಬಳಗಕ್ಕೆ ಕಡಿವಾಣ ಹಾಕಿದರು.

23 ಎಸೆತ, 50 ರನ್: ಪಂಜಾಬ್ ತಂಡದ ಆರಂಭಿಕ ಜೋಡಿ ಜಾನಿ ಮತ್ತು ಶಿಖರ್ ಧವನ್ ಬೆಂಗಳೂರು ಬೌಲರ್‌ಗಳ ಎಸೆತಗಳನ್ನು ದೂಳೀಪಟ ಮಾಡಿದರು. ಕೇವಲ 23 ಎಸೆತಗಳಲ್ಲಿ ತಂಡದ ಮೊತ್ತ ಅರ್ಧಶತಕ ಮುಟ್ಟಿತು. ಗ್ಲೆನ್ ಮ್ಯಾಕ್ಸ್‌ವೆಲ್ ಹಾಕಿದ ಐದನೇ ಓವರ್‌ನ ಕೊನೆಯ ಎಸೆತದಲ್ಲಿ ಶಿಖರ್ ಕ್ಲೀನ್ ಬೌಲ್ಡ್ ಆಗುವುದರೊಂದಿಗೆ 60 ರನ್‌ಗಳ ಜೊತೆಯಾಟ ಮುರಿಯಿತು. ಸ್ಪಿನ್ನರ್ ವಣಿಂದು ಹಸರಂಗಾ ತಮ್ಮ ದೇಶದವರೇ ಆದ ಪಂಜಾಬ್ ಬ್ಯಾಟರ್ ಭಾನುಕ ರಾಜಪಕ್ಸ (1)ವಿಕೆಟ್ ಗಳಿಸಿದರು.

ಕ್ರೀಸ್‌ಗೆ ಬಂದ ಲಿವಿಂಗ್‌ಸ್ಟೋನ್ ಅವರು ಜಾನಿ ಜೊತೆಗೂಡಿ ರನ್ ಸೂರೆ ಮಾಡಲು ಆರಂಭಿಸಿದರು. ಆದರೆ ಹತ್ತನೇ ಓವರ್‌ನಲ್ಲಿ ಶಹಬಾಜ್ ಅಹಮದ್ ಬೌಲಿಂಗ್‌ನಲ್ಲಿ ಸಿರಾಜ್‌ಗೆ ಕ್ಯಾಚಿತ್ತ ಜಾನಿ ನಿರ್ಗಮಿಸಿದರು. ಲಿವಿಂಗ್‌ಸ್ಟೋನ್ ತಮ್ಮ ಆಟದ ವೇಗ ಹೆಚ್ಚಿಸಿದರು.

ನಾಯಕ ಮಯಂಕ್ ಅಗರವಾಲ್ ಜೊತೆಗೂಡಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಸೇರಿಸಿದರು. ಅದರಲ್ಲಿ ಮಯಂಕ್ ಪಾಲು 19 ರನ್‌ಗಳು ಮಾತ್ರ. ಬೆಂಗಳೂರು ತಂಡದ ನಾಯಕ ಫಫ್ ಡುಪ್ಲೆಸಿ ಮಾಡಿದ ಬೌಲಿಂಗ್ ಬದಲಾವಣೆ ಹಾಗೂ ಫೀಲ್ಡಿಂಗ್ ನಿಯೋಜನೆಗಳು ಲಿವಿಂಗ್‌ಸ್ಟೋನ್ ಮುಂದೆ ನಿಷ್ಪ್ರಯೋಜಕವಾದವು. 166.67ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಹರ್ಷಲ್ ಪಟೇಲ್ ಅಬ್ಬರ: ಇನಿಂಗ್ಸ್‌ನ ಕೊನೆಯ ಐದು ಓವರ್‌ಗಳಲ್ಲಿ ಒಂದು ಕಡೆ ಲಿವಿಂಗ್‌ಸ್ಟೋನ್ ಅಬ್ಬರಿ ಸಿದರೆ, ಇನ್ನೊಂದೆಡೆ ಬೆಂಗಳೂರು ತಂಡದ ಮಧ್ಯಮವೇಗಿ ಹರ್ಷಲ್ ಪಟೇಲ್ (34ಕ್ಕೆ4) ಆರ್ಭಟ ಜೋರಾಗಿತ್ತು

6500 ರನ್: ಬ್ಯಾಟರ್ ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ 6500 ರನ್‌ಗಳನ್ನು ಗಳಿಸಿದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. 220 ಪಂದ್ಯಗಳನ್ನು ಅವರು ಆಡಿದ್ದಾರೆ. ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸುತ್ತಿರುವ ಕೊಹ್ಲಿ ಶುಕ್ರವಾರದ ಪಂದ್ಯದಲ್ಲಿ 14 ಎಸೆತಗಳಲ್ಲಿ 20 ರನ್ ಗಳಿಸಿದರು.

ಒಂದು ಪಂದ್ಯ ಬಾಕಿ; ಆರ್‌ಸಿಬಿ ಪ್ಲೇ ಆಫ್ ಹಾದಿ ಕಠಿಣ

13 ಪಂದ್ಯಗಳಿಂದ 14 ಅಂಕಗಳನ್ನು ಗಳಿಸಿರುವ ಬೆಂಗಳೂರು ತಂಡವು ಸದ್ಯ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ತಂಡಕ್ಕೆ ಇನ್ನೊಂದು ಪಂದ್ಯ ಬಾಕಿಯಿದ್ದು ಪ್ಲೇ ಆಫ್ ಪ್ರವೇಶದ ಅವಕಾಶ ಉಳಿಯಬೇಕಾದರೆ ಅದರಲ್ಲಿ ಜಯಿಸಲೇಬೇಕಾದ ಒತ್ತಡವಿದೆ. 18 ಅಂಕ ಗಳಿಸಿರುವ ಗುಜರಾತ್ ಟೈಟನ್ಸ್ ಈಗಾಗಲೇ ಪ್ಲೇ ಆಫ್ ಪ್ರವೇಶಿಸಿದೆ. ಲಖನೌ ಎರಡನೇ ಸ್ಥಾನದಲ್ಲಿದ್ದು ಇನ್ನೊಂದು ಪಂದ್ಯ ಗೆದ್ದರೂ ನಾಲ್ಕರ ಘಟ್ಟದಲ್ಲಿ ಸ್ಥಾನ ಖಚಿತವಾಗಲಿದೆ. ಆದರೆ, ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿರುವ ರಾಜಸ್ಥಾನ ಹಾಗೂ ಬೆಂಗಳೂರು ತಂಡಗಳು ತಲಾ 14 ಅಂಕ ಗಳಿಸಿವೆ. ಐದನೇ ಸ್ಥಾನದಲ್ಲಿರುವ ಡೆಲ್ಲಿ ಮತ್ತು ಆರ್‌ಸಿಬಿ ಎದುರು ಗೆದ್ದು ಆರನೇ ಸ್ಥಾನಕ್ಕೇರಿರುವ ಪಂಜಾಬ್ ತಂಡಗಳು ತಲಾ 12 ಅಂಕ ಹೊಂದಿವೆ. ಇನ್ನೂ ಎರಡು ಪಂದ್ಯಗಳಲ್ಲಿ ಆಡಲಿವೆ. 10 ಅಂಕ ಗಳಿಸಿರುವ ಸನ್‌ರೈಸರ್ಸ್ ಇನ್ನೂ ಮೂರು ಪಂದ್ಯಗಳಲ್ಲಿ ಆಡಬೇಕಿದೆ. ಆದ್ದರಿಂದ ಈ ತಂಡಗಳೂ ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯುವತ್ತ ಚಿತ್ತ ನೆಟ್ಟಿವೆ. ಇದರಿಂದಾಗಿ ಲೀಗ್ ನ ಕೊನೆ ಹಂತದ ಪಂದ್ಯಗಳು ಕುತೂಹಲ ಕೆರಳಿಸಿವೆ. ಸದ್ಯ ನೆಗೆಟಿವ್ ನೆಟ್ ರನ್‌ರೇಟ್ ಹೊಂದಿರುವ ಆರ್‌ಸಿಬಿಯು 19ರಂದು ಗುಜರಾತ್ ಟೈಟನ್ಸ್ ವಿರುದ್ಧ ನಡೆಯುವ ಪಂದ್ಯದಲ್ಲಿ ದೊಡ್ಡ ಅಂತರದ ಜಯ ಸಾಧಿಸಿದರೆ ನಾಲ್ಕರ ಘಟ್ಟಕ್ಕೆ ಪ್ರವೇಶಿಸುವ ಅವಕಾಶ ಸಿಗಬಹುದು.

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 9ಕ್ಕೆ 209 (20 ಓವರ್)

ಬೆಸ್ಟೊ ಸಿ ಸಿರಾಜ್ ಬಿ ಶಹಬಾಜ್ 66 (29 ಎ, 4x4, 6x7), ಶಿಖರ್ ಬಿ ಮ್ಯಾಕ್ಸ್‌ವೆಲ್ 21 (15 ಎ, 4x2, 6x1), ಭಾನುಕ ಸಿ ಹರ್ಷಲ್ ಬಿ ಹಸರಂಗ 1 (3 ಎ), ಲಿವಿಂಗ್‌ಸ್ಟೋನ್ ಸಿ ಕಾರ್ತಿಕ್ ಬಿ ಹರ್ಷಲ್ 70 (42 ಎ, 4x5, 6x4), ಮಯಂಕ್ ಸಿ ಹಸರಂಗ ಬಿ ಹರ್ಷಲ್ 19 (16 ಎ, 4x3), ಜಿತೇಶ್ ಬಿ ಹಸರಂಗ 9 (5 ಎ, 4x2), ಹರಪ್ರೀತ್ ಸಿ ಕಾರ್ತಿಕ್ ಬಿ ಹರ್ಷಲ್ 7 (5 ಎ, 6x1), ರಿಷಿ ಸಿ ಮ್ಯಾಕ್ಸ್‌ವೆಲ್ ಬಿ ಹರ್ಷಲ್ 7 (3 ಎ, 6x1) ರಾಹುಲ್ ರನ್ ಔಟ್ (ಮ್ಯಾಕ್ಸ್‌ವೆಲ್/ ಕಾರ್ತಿಕ್ 2 (2 ಎ), ಕಗಿಸೊ ಔಟಾಗದೆ 0 (1 ಎ)

ಇತರೆ (ಲೆಗ್ ಬೈ 3, ನೋಬಾಲ್ 1, ವೈಡ್ 3) 7

ವಿಕೆಟ್ ಪತನ: 1-60 (ಶಿಖರ್ ಧವನ್, 4.6), 2-85 (ಭಾನುಕ ರಾಜಪಕ್ಸೆ, 6.4), 3-101 (ಜಾನಿ ಬೆಸ್ಟೊ, 9.1), 4-152 (ಮಯಂಕ್ ಅಗರವಾಲ್, 14.6), 5-164 (ಜಿತೇಶ್ ಶರ್ಮಾ, 16.2), 6-173 (ಹರಪ್ರೀತ್ ಬ್ರಾರ್, 17.3), 7-206 (ಲಿಯಾಮ್ ಲಿವಿಂಗ್‌ಸ್ಟೋನ್, 19.2), 8-207 (ರಿಷಿ ಧವನ್, 19.4), 9-209 (ರಾಹುಲ್ ಚಾಹರ್, 19.6)

ಬೌಲಿಂಗ್: ಗ್ಲೆನ್ ಮ್ಯಾಕ್ಸ್‌ವೆಲ್ 2–0–17–1, ಜೋಶ್ ಹ್ಯಾಜಲ್‌ವುಡ್ 4–0–64–0, ಮೊಹಮ್ಮದ್ ಸಿರಾಜ್ 2–0–36–0, ವಾನಿಂದ ಹಸರಂಗ 4–0–15–2, ಶಹಬಾಜ್ ಅಹಮ್ಮದ್ 4–0–40–1, ಹರ್ಷಲ್ ಪಟೇಲ್ 4–0–34–4

ರಾಯಲ್ ಚಾಲೆಂಜರ್ಸ್ ಬೆಂಗಳೂರು 9ಕ್ಕೆ 155 (20 ಓವರ್)

ವಿರಾಟ್ ಸಿ ಚಾಹರ್ ಬಿ ರಬಾಡ 20 (14 ಎ, 4x2, 6x1), ಡುಪ್ಲೆಸಿ ಸಿ ಜಿತೇಶ್ ಬಿ ರಿಷಿ 10 (8 ಎ, 4x2), ರಜತ್ ಸಿ ಶಿಖರ್ ಬಿ ಚಾಹರ್ 26 (21 ಎ, 4x1, 6x2), ಮಹಿಪಾಲ್ ಸಿ ಶಿಖರ್ ಬಿ ರಿಷಿ 6 (3 ಎ, 6x1), ಮ್ಯಾಕ್ಸ್‌ವೆಲ್ ಸಿ ಅರ್ಷದೀಪ್ ಬಿ ಹರಪ್ರೀತ್ 35 (22 ಎ, 4x3, 6x1), ದಿನೇಶ್ ಸಿ ರಾಜಪಕ್ಸ ಬಿ ಅರ್ಷದೀಪ್ 11 (11 ಎ 4x1), ಶಹಬಾಜ್ ಸಿ ರಾಜಪಕ್ಸ ಬಿ ರಬಾಡ 9 (14 ಎ), ಹರ್ಷಲ್ ಸಿ ಅಗರವಾಲ್ ಬಿ ರಬಾಡ 11 (7 ಎ, 4x2), ವಾನಿಂದು ಸಿ ಹರಪ್ರೀತ್ ಬಿ ಚಾಹರ್ 1 (3 ಎ), ಸಿರಾಜ್ ಔಟಾಗದೆ 9 (13 ಎ, 4x1), ಹ್ಯಾಜಲ್‌ವುಡ್ ಔಟಾಗದೆ 7 (4 ಎ, 4x1)

ಇತರೆ (ಬೈ 1, ವೈಡ್ 9) 10


ವಿಕೆಟ್ ಪತನ: 1-33 (ವಿರಾಟ್ ಕೊಹ್ಲಿ, 3.2), 2-34 (ಫಫ್ ಡುಪ್ಲೆಸಿ, 4.2), 3-40 (ಮಹಿಪಾಲ್ ಲುಮ್ರೊರ್, 4.5), 4-104 (ರಜತ್ ಪಾಟೀದಾರ್, 10.6), 5-104 (ಗ್ಲೆನ್ ಮ್ಯಾಕ್ಸ್‌ವೆಲ್, 11.2), 6-120 (ದಿನೇಶ್ ಕಾರ್ತಿಕ್, 14.5), 7-124 (ಶಹಬಾಜ್ ಅಹಮ್ಮದ್, 15.4), 8-137 (ವಾನಿಂದು ಹಸರಂಗ, 16.4), 9-142 (ಹರ್ಷಲ್ ಪಟೇಲ್, 18.1)

ಬೌಲಿಂಗ್: ಹರಪ್ರೀತ್ ಬ್ರಾರ್ 4–0–33–1, ಅರ್ಷದೀಪ್ ಸಿಂಗ್ 4–0–27–1, ಕಗಿಸೊ ರಬಾಡ 4–0–21–3, ರಿಷಿ ಧವನ್ 4–0–36–2, ರಾಹುಲ್ ಚಾಹರ್ 4–0–37–2

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 54 ರನ್‌ಗಳ ಜಯ



ಲಿಯಾಮ್ ಲಿವಿಂಗ್‌ಸ್ಟೋನ್ ಬ್ಯಾಟಿಂಗ್ ವೈಖರಿ–ಪಿಟಿಐ ಚಿತ್ರ



ಪ್ಯಾಟ್ ಕಮಿನ್ಸ್ –ಪಿಟಿಐ ಚಿತ್ರ

ಪ್ಯಾಟ್ ಕಮಿನ್ಸ್‌ಗೆ ಗಾಯ; ಹೊರಕ್ಕೆ

ಮೆಲ್ಬರ್ನ್ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವೇಗಿ ಪ್ಯಾಟ್ ಕಮಿನ್ಸ್ ಪೃಷ್ಠದ ಗಾಯದಿಂದ ಬಳಲುತ್ತಿದ್ದು, ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಆಸ್ಟ್ರೇಲಿಯಾ ಟೆಸ್ಟ್ ಕ್ರಿಕೆಟ್ ತಂಡದ ನಾಯಕರೂ ಆಗಿರುವ ಕಮಿನ್ಸ್, ತವರಿಗೆ ಮರಳುವರು ಎಂದು ಕ್ರಿಕೆಟ್ ಡಾಟ್ ಕಾಮ್ ಡಾಟ್ ಎಯು ವರದಿ ಮಾಡಿದೆ. ಮೆಗಾ ಹರಾಜಿನಲ್ಲಿ ಕೋಲ್ಕತ್ತ ತಂಡ ಕಮಿನ್ಸ್ ಅವರನ್ನು ₹ 7.25 ಕೋಟಿಗೆ ಖರೀದಿಸಿತ್ತು. ಎರಡು ವಾರಗಳಲ್ಲಿ ಗಾಯದಿಂದ ಚೇತರಿಸಿಕೊಳ್ಳುವರು ಎಂದು ಮೂಲಗಳು ತಿಳಿಸಿವೆ.

ಇಂದಿನ ಪಂದ್ಯ

ಕೋಲ್ಕತ್ತ ನೈಟ್ ರೈಡರ್ಸ್ Vs ಸನ್‌ರೈಸರ್ಸ್ ಹೈದರಾಬಾದ್
ಸ್ಥಳ: ಎಂಸಿಎ ಪುಣೆ
ಲೈವ್: ಸ್ಟಾರ್ ಸ್ಪೋರ್ಟ್ಸ್
ರಾತ್ರಿ 7.30

ಪಾಯಿಂಟ್ ಪಟ್ಟಿ							
ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	12	9	3	0	0	18	0.376
ಲಖನೌ	12	8	4	0	0	16	0.385
ರಾಜಸ್ಥಾನ	12	7	5	0	0	14	0.228
ಬೆಂಗಳೂರು	13	7	6	0	0	14	-0.323
ಡೆಲ್ಲಿ	12	6	6	0	0	12	0.210
ಪಂಜಾಬ್	12	6	6	0	0	12	0.023
ಹೈದರಾಬಾದ್	11	5	6	0	0	10	-0.031
ಕೋಲ್ಕತ್ತ	12	5	7	0	0	10	-0.057
ಚೆನ್ನೈ	12	4	8	0	0	8	-0.181
ಮುಂಬೈ	12	3	9	0	0	6	-0.613

*ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	625
ರಾಹುಲ್	ಲಖನೌ	459
ವಾರ್ನರ್	ಡೆಲ್ಲಿ	427

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹಸರಂಗ	ಬೆಂಗಳೂರು	23
ಯಜುವೇಂದ್ರ	ರಾಜಸ್ಥಾನ	23
ಕಗಿಸೊ	ಪಂಜಾಬ್	21

ಡೆಲ್ಲಿ ತಂಡದ ಪೃಥ್ವಿ ಶಾಗೆ ಅನಾರೋಗ್ಯ

ಮುಂಬೈ: ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬ್ಯಾಟರ್ ಪೃಥ್ವಿ ಶಾ ಮುಂದಿನ ಎರಡೂ ಪಂದ್ಯಗಳಲ್ಲಿ ಕಣಕ್ಕಿಳಿಯುವುದು ಅನುಮಾನ.ಅವರುಜ್ವರದಿಂದಬಳಲಿದ್ದಾರೆ.

ಅಂಕಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿರುವ ಡೆಲ್ಲಿ ಕ್ಯಾಪಿಟಲ್ಸ್ ಪ್ಲೇ ಆಫ್ ಪ್ರವೇಶಿಸಬೇಕಾದರೆ ತನ್ನ ಇನ್ನೆರಡು ಪಂದ್ಯ ಗೆಲ್ಲುವ ಒತ್ತಡದಲ್ಲಿದೆ. ಆದರೆ, ಈ ಎರಡೂ ಪಂದ್ಯಗಳಲ್ಲಿ ಪೃಥ್ವಿ ಕಣಕ್ಕಿಳಿಯುವುದು ಅನುಮಾನ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಸಹಾಯಕ ಕೋಚ್ ಶೇನ್ ವಾಟ್ಸನ್ ಮಾಹಿತಿ ನೀಡಿದ್ದಾರೆ.



ಪ್ರಶಸ್ತಿ ಗೆದ್ದ ರಾಮಯ್ಯ ತಾಂತ್ರಿಕ ಸಂಸ್ಥೆ ತಂಡ. ನಿಂತವರು (ಎಡದಿಂದ): ಪ್ರತ್ಯಾಂಶು, ಅಭಿಷೇಕ್, ದಿನೇಶ್, ಸಚಿನ್ ಬೆಳವಾಡಿ (ಮುಖ್ಯ ಕೋಚ್), ರೋಹನ್, ಅನೀಶ್, ಪ್ರದ್ಯುಮ್ನ (ಕುಳಿತವರು): ಶ್ರೇಯಸ್, ರೆಹಾನ್, ವಾಸು, ಕ್ಷಿತಿಜ್

ರಾಮಯ್ಯ ಸಂಸ್ಥೆಗೆ ಪ್ರಶಸ್ತಿ

ಬೆಂಗಳೂರು: ನಗರದ ರಾಮಯ್ಯ ತಾಂತ್ರಿಕ ಸಂಸ್ಥೆ ನಿಟ್ಟೆ ಮೀನಾಕ್ಷಿ ತಾಂತ್ರಿಕ ಸಂಸ್ಥೆ ಆಯೋಜಿಸಿದ್ದ ಅಂತರ ಕಾಲೇಜು ಮುಕ್ತ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಫೈನಲ್ ಪಂದ್ಯದಲ್ಲಿ ರಾಮಯ್ಯ ಸಂಸ್ಥೆ ತಂಡ ಆತಿಥೇಯ ಮೀನಾಕ್ಷಿ ಸಂಸ್ಥೆಯನ್ನು 64–50ರಲ್ಲಿ ಮಣಿಸಿತು. ರೋಹನ್ ಮತ್ತು ಪ್ರತ್ಯಾಂಶು ಕ್ರಮವಗಿ 18 ಮತ್ತು 15 ಪಾಯಿಂಟ್ ಗಳಿಸಿ ರಾಮಯ್ಯ ಸಂಸ್ಥೆಯ ಗೆಲುವಿಗೆ ಕಾರಣರಾದರು.

ಸುಮಂತ್ (16 ಪಾಯಿಂಟ್ಸ್) ಮತ್ತು ಭುವನ್ (15 ಪಾಯಿಂಟ್ಸ್) ಮೀನಾಕ್ಷಿ ತಂಡದ ಪರವಾಗಿ ಮಿಂಚಿದರು.

ಐತಿಹಾಸಿಕ ಫೈನಲ್‌ಗೆ ಭಾರತ

ಡೆನ್ಮಾರ್ಕ್ ವಿರುದ್ಧ ಜಯ; ಪ್ರಣಯ್ ಕೆಚ್ಚೆದೆಯ ಆಟ

ಬ್ಯಾಂಕಾಕ್ (ಪಿಟಿಐ): ಬಲಿಷ್ಠ ಡೆನ್ಮಾರ್ಕ್ ವಿರುದ್ಧ ಅಮೋಘ ಸಾಮರ್ಥ್ಯ ಪ್ರದರ್ಶಿಸಿದ ಭಾರತ ತಂಡ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಶುಕ್ರವಾರ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಕಿದಂಬಿ ಶ್ರೀಕಾಂತ್ ಮತ್ತು ಬಳಗ 3-2ರಲ್ಲಿ ಗೆಲುವು ಸಾಧಿಸಿತು. ಈ ಮೂಲಕ ಟೂರ್ನಿಯಲ್ಲಿ ಭಾರತ ಇದೇ ಮೊದಲ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸಿತು.

ಗುರುವಾರ ಕ್ವಾರ್ಟರ್ ಫೈನಲ್‌ನ ಮೊದಲ ಪಂದ್ಯದಲ್ಲಿ ಸೋತಿದ್ದ ಯುವ ಆಟಗಾರ ಲಕ್ಷ್ಯಸೇನ್ ಸೆಮಿಫೈನಲ್‌ನಲ್ಲೂ ಆರಂಭದ ಪಂದ್ಯದಲ್ಲಿ ನಿರಾಸೆ ಉಂಟುಮಾಡಿದರು. ವಿಕ್ಟರ್ ಅಕ್ಸೆಲ್ಸನ್ ಎದುರು ಅವರು 21–13, 21–13ರಲ್ಲಿ ಸೋತರು. ನಂತರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಮಿಂಚಿದರು. ಕಿಮ್ ಆಸ್ಟ್ರಪ್ ಮತ್ತು ಮಥಾಯಸ್ ಕ್ರಿಸ್ಟಿಯನ್‌ಸೆನ್ ಎದುರಿನ ರೋಚಕ ಪಂದ್ಯದಲ್ಲಿ ಭಾರತದ ಆಟಗಾರರು 21–18, 21–23, 22–20ರಲ್ಲಿ ಜಯ ಸಾಧಿಸಿ ಹಣಾಹಣಿಯನ್ನು 1–1ರಲ್ಲಿ ಸಮ ಮಾಡಿದರು.



ಎಚ್.ಎಚ್.ಪ್ರಣಯ್ –ಎಎಫ್‌ಪಿ ಚಿತ್ರ

ಆ್ಯಂಡರ್ಸ್ ಆ್ಯಂಟೊನ್ಸೆನ್ ಎದುರಿನ ಸಿಂಗಲ್ಸ್ ಪಂದ್ಯದಲ್ಲಿ 21–18, 12–21, 21–15ರಲ್ಲಿ ಗೆದ್ದು ಕಿದಂಬಿ ಶ್ರೀಕಾಂತ್ ಮುನ್ನಡೆ ಗಳಿಸಿಕೊಟ್ಟರು. ಆದರೆ ಎರಡನೇ ಡಬಲ್ಸ್‌ನಲ್ಲಿ ಕೃಷ್ಣಪ್ರಸಾದ್ ಗರಗ–ವಿಷ್ಣುವರ್ಧನ್ ಗೌಡ್ ಜೋಡಿ ರಸ್ಮುಸೀನ್–ಸೊಗಾರ್ಡ್‌ಗೆ 16–21, 13–21ರಲ್ಲಿ ಮಣಿದರು. ಹೀಗಾಗಿ ಕೊನೆಯ ಪಂದ್ಯ ನಿರ್ಣಾಯಕವಾಯಿತು. ರಾಸ್ಮಸನ್ ಗೆಮ್ಕೆ ಎದುರಿನ ಈ ಪಂದ್ಯದಲ್ಲಿ ಕೆಚ್ಚೆದೆಯ ಆಟಗಾಡಿದ ಎಚ್.ಎಸ್.ಪ್ರಣಯ್ 13–21, 21–9, 21–12ರಲ್ಲಿ ಗೆದ್ದು ಸಂಭ್ರಮಿಸಿದರು.

ಕದನ ಕಣಕ್ಕೆ ಅಮೀರ್ ವಿದಾಯ

ಲಂಡನ್ (ಎಎಫ್‌ಪಿ): ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಮಾಜಿ ವಿಶ್ವ ಚಾಂಪಿಯನ್ ಬಾಕ್ಸರ್ ಅಮೀರ್ ಖಾನ್ ನಿವೃತ್ತಿ ಘೋಷಿಸಿದ್ದಾರೆ. ಈ ಮೂಲಕ 17 ವರ್ಷಗಳ ವೃತ್ತಿಜೀವನಕ್ಕೆ ತೆರೆ ಎಳೆದಿದ್ದಾರೆ. ಅವರಿಗೆ ಈಗ 35 ವರ್ಷ.

ಲೈಟ್ ವೆಲ್ಟರ್‌ವೇಟ್ ವಿಭಾಗದ ಅತ್ಯಂತ ಸಮರ್ಥ ಬಾಕ್ಸರ್ ಆಗಿದ್ದ ಅಮೀರ್ ಒಟ್ಟು 40 ಫೈಟ್‌ಗಳ ಪೈಕಿ 34ರಲ್ಲಿ ಗೆದ್ದು ದಾಖಲೆ ಮಾಡಿದ್ದರು. ವೃತ್ತಿಜೀವನದ ಮೊದಲ 18 ಫೈಟ್‌ಗಳಲ್ಲಿ ಜಯ ಸಾಧಿಸಿದ್ದ ಅವರು ಬ್ರಿಟಿಷ್ ಬಾಕ್ಸರ್‌ಗಳ ಪೈಕಿ ಹೆಚ್ಚು ಜನಪ್ರಿಯರಾಗಿದ್ದರು. 2004ರ ಒಲಿಂಪಿಕ್ಸ್‌ನ ಫೈನಲ್‌ನಲ್ಲಿ ಸೋತಿದ್ದರು.



ಅಮೀರ್ ಖಾನ್ –ಟ್ವಿಟರ್ ಚಿತ್ರ

ಈ ವರ್ಷದ ಫೆಬ್ರುವರಿಯಲ್ಲಿ ಮ್ಯಾಂಚೆಸ್ಟರ್‌ನಲ್ಲಿ ನಡೆದಿದ್ದ ಬೌಟ್‌ನಲ್ಲಿ ದೀರ್ಘಕಾಲದ ಎದುರಾಳಿ ಕೆಲ್ ಬ್ರೂಕ್ ಎದುರು ಆರನೇ ಸುತ್ತಿನಲ್ಲಿ ಸೋಲುಂಡಿದ್ದರು. ಇದು ಅವರ ವೃತ್ತಿಜೀವನ ಮುಕ್ತಾಯಕ್ಕೆ ಪ್ರಮುಖ ಕಾರಣವಾಗಿತ್ತು. ಬ್ರೂಕ್ ಕಳೆದ ವಾರ ನಿವೃತ್ತಿ ಘೋಷಿಸಿದ್ದರು.

'ನನ್ನ ಗ್ಲೌಸ್‌ಗಳಿಗೆ ವಿಶ್ರಾಂತಿ ನೀಡಲು ಇದು ಸುಸಮಯ. ವರ್ಷಗಳ ಕಾಲ ಬಾಕ್ಸಿಂಗ್ ಕ್ಷೇತ್ರದಲ್ಲಿ ಮಿಂಚಲು ಸಾಧ್ಯವಾದದ್ದು ನನ್ನ ಅದೃಷ್ಟ' ಎಂದು ಅಮೀರ್ ಖಾನ್ ಟ್ವೀಟ್ ಮಾಡಿದ್ದಾರೆ.